ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಡಿಸೆಂಬರ್ 26 ಶುಕ್ರವಾರ 2025

46

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 248 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ಮೈಸೂರು ಮಿತ್ರ ಶುಕ್ರವಾರ 26 ಡಿಸೆಂಬರ್ 2025

ಅಭಿನಂದನೆ...



ನಾಡಪ್ರಭು ಕೆಂಪೇಗೌಡ ಪ್ರತಿಷ್ಠಾನ ವತಿಯಿಂದ ಬೆಂಗಳೂರಿನಲ್ಲಿ ನಡೆದ ಅಟಲ್ ಬಿಹಾರಿ ವಾಜಪೇಯಿ ಅವರ 101ನೇ ಜನ್ಮದಿನದ ಕಾರ್ಯಕ್ರಮದಲ್ಲಿ ಮಾಜಿ ಉಪಮುಖ್ಯಮಂತ್ರಿ ಶಾಸಕ ಡಾ.ಸಿ.ಎನ್.ಅಶ್ವಥ್ ನಾರಾಯಣ್ ಅವರನ್ನು ಮೈಸೂರಿನ ಅಶ್ವಥ್ ನಾರಾಯಣ್ ಸ್ನೇಹ ಬಳಗದ ವತಿಯಿಂದ ಅಭಿನಂದಿಸಲಾಯಿತು. ಈ ಸಂದರ್ಭದಲ್ಲಿ ಬಿಜೆಪಿ ಮೈಸೂರು ನಗರಾಧ್ಯಕ್ಷ ಎಲ್.ನಾಗೇಂದ್ರ, ಶಾಸಕ ಟಿ.ಎಸ್.ಶ್ರೀವತ್ಸ, ಕಾವೇರಿ ಆಸ್ಪತ್ರೆ ಮುಖ್ಯಸ್ಥ ಡಾ.ಜಿ.ಆರ್. ಚಂದ್ರಶೇಖರ್, ಮೈಸೂರು ಹಾಗೂ ಚಾಮರಾಜನಗರ ಜಿಲ್ಲಾ ಒಕ್ಕಲಿಗರ ಸಂಘದ ಪ್ರಧಾನ ಕಾರ್ಯದರ್ಶಿ ಚೇತನ್ ಎಂ.ಈ., ನಿರ್ದೇಶಕರಾದ ಕೆ.ಪಿ.ನಾಗಣ್ಣ, ಗಿರೀಶ್ ಗೌಡ, ಬಿಜೆಪಿ ಯುವ ಮುಖಂಡರಾದ ಗೊರೂರು ಶಿವು, ಕುಮಾರ್ ಬೈರಪ್ಪ, ಗೋಪಾಲ್ ಗೌಡ, ಗಿರೀಶ್, ಸುರೇಶ್, ಶ್ರೀಧರ್, ಕಿರಣ್ ನಾಯ್ಡು, ಹನುಮಂತೇಶ್, ಮಧು ರಾಜ್, ಯೋಗೇಶ್, ಕೂರ್ಗಳ್ಳಿ ಲೋಕೇಶ್, ಬೋಗಾದಿ ಸತ್ಯ, ಅವಿನಾಶ್, ಸಂತೋಷ, ಪ್ರದೀಪ್, ಉಮೇಶ್, ರವಿ, ಚೇತನ್ ಇನ್ನಿತರರು ಉಪಸ್ಥಿತರಿದ್ದರು.

ಮಹಾರಾಣಿ ಕಾಲೇಜು, ವಸತಿನಿಲಯ ಕಟ್ಟಡ ಕಾಮಗಾರಿ ಆರಂಭ

54 ಕೋಟಿ ರೂ. ವೆಚ್ಚದಲ್ಲಿ ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜಿನ ಹೆಚ್ಚುವರಿ ಕಟ್ಟಡ, 116 ಕೋಟಿ ವೆಚ್ಚದ ವಿಜ್ಞಾನ-ಕಲಾ ಕಾಲೇಜು ಹಾಸ್ಟೆಲ್ ಕಟ್ಟಡ ಕಾಮಗಾರಿಗಳು 2 ವರ್ಷಗಳಲ್ಲಿ ಪೂರ್ಣ

ಮೈಸೂರು, ಡಿ.25(ಆರ್‌ಕೆ)– ಮೈಸೂರಿನ ಜೆಎಲ್‌ಬಿ ರಸ್ತೆಯ ಫೀಲ್ಡ್ ಮಾರ್ಷಲ್ ಕಾರ್ಯಪ್ಪ (ಮೆಟ್ರೋಪೋಲ್) ಸರ್ಕಲ್‌ನಲ್ಲಿ ಬರುವ ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜಿನ ಹೆಚ್ಚುವರಿ ಕಟ್ಟಡ ಹಾಗೂ ವಿಜ್ಞಾನ ಮತ್ತು ಕಲಾ ಕಾಲೇಜಿನ ವಸತಿ ನಿಲಯ ಕಟ್ಟಡ ನಿರ್ಮಾಣ ಕಾಮಗಾರಿ ಆರಂಭವಾಗಿದೆ.

ಹಾಸ್ಟೆಲ್‌ನ ಹಳೆಯ ಕಟ್ಟಡ ಶಿಥಿಲವಾಗಿದ್ದರಿಂದ ಹಾಗೂ ವಿಜ್ಞಾನ ಕಾಲೇಜು ಪಾರಂಪರಿಕ ಕಟ್ಟಡದಲ್ಲಿ ವಿದ್ಯಾರ್ಥಿಗಳ ಕೊಠಡಿಗಳ ಕೊರತೆ ಇದ್ದ ಕಾರಣ ಚಾಮರಾಜ ವಿಧಾನಸಭಾ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ ಅವರ ಪ್ರಯತ್ನದ ಫಲವಾಗಿ ಸರ್ಕಾರವು ಹೊಸ ಕಟ್ಟಡಗಳನ್ನು ನಿರ್ಮಿಸಲು ಅನುದಾನ ನೀಡಿತ್ತು. ಅದರಂತೆ ಉನ್ನತ ಶಿಕ್ಷಣ ಇಲಾಖೆಯು ಕಾಮಗಾರಿ ಕೈಗೊಳ್ಳಲು ಕರ್ನಾಟಕ ಗೃಹ ಮಂಡಳಿ (ಕೆಎಚ್‌ಬಿ)ಗೆ ವಹಿಸಿದ್ದು.



ಉದ್ದೇಶಿತ ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು ಕಟ್ಟಡ.

ಅದರಂತೆ ಮಂಡಳಿಯು ಗ್ಲೋಬಲ್ ಟೆಂಡರ್ ಕರೆದು ಯಶಸ್ವಿ ಬಿಡ್ಡುದಾರರಾದ ಸ್ಟಾರ್ ಇನ್‌ಫ್ರಾಟೆಕ್ ಕಂಪನಿಗೆ ಕಾಮಗಾರಿಯನ್ನು ವಹಿಸಿದೆ. 116 ಕೋಟಿ ರೂ. ಅಂದಾಜು ವೆಚ್ಚದಲ್ಲಿ ಮಹಿಳಾ ವಿಜ್ಞಾನ ಮತ್ತು ಕಲಾ ಕಾಲೇಜಿನ ವಸತಿ ನಿಲಯ ಕಟ್ಟಡ ಹಾಗೂ 54 ಕೋಟಿ ರೂ. ಅಂದಾಜು ವೆಚ್ಚದಲ್ಲಿ ವಿಜ್ಞಾನ ಕಾಲೇಜಿನ ನೂತನ ಕಟ್ಟಡ ಕಾಮಗಾರಿಗೆ 2024ರ ಅಕ್ಟೋಬರ್ 24 ರಂದು ಮುಖ್ಯಮಂತ್ರಿ ಸಿದ್ದರಾಮಯ್ಯನವರು ಶಂಕುಸ್ಥಾಪನೆ ನೆರವೇರಿಸಿದ್ದರು.

ವಸತಿನಿಲಯ ಕಟ್ಟಡ: ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಸರ್ಕಲ್ ಬಳಿಯ ಜೆಎಲ್‌ಬಿ ರಸ್ತೆಗೆ ಹೊಂದಿಕೊಂಡಂತಿರುವ ಹಳೆಯ ಮಹಾರಾಣಿ ಮಹಿಳಾ ವಿಜ್ಞಾನ ಮತ್ತು ಕಲಾ ಕಾಲೇಜಿನ ವಸತಿನಿಲಯದ ಕಟ್ಟಡವನ್ನು ಕೆಡವಿ ಆ ಸ್ಥಳದಲ್ಲಿ ನೂತನ 4 ಟವರ್‌ಗಳನ್ನು ಒಳಗೊಂಡ G+5 ಕಟ್ಟಡ (21,758 ಚ.ಮೀ) ವನ್ನು ನಿರ್ಮಿಸಲಾಗುತ್ತಿದೆ. ಒಟ್ಟು 1,400 ವಿದ್ಯಾರ್ಥಿಗಳಿಗೆ ಆಶ್ರಯ ನೀಡಲಿದ್ದು, 354 ಕೊಠಡಿಗಳು, 2 ಅಡುಗೆ ಮನೆ, 2 ಊಟದ ಮನೆ, 250 ಕೆಎಲ್‌ಡಿ ಎಸ್‌ಟಿಪಿ, ಸಿಸಿಟಿವಿ ಕ್ಯಾಮರಾ, ಪಾರ್ಕಿಂಗ್ ವ್ಯವಸ್ಥೆ, ಕಾಂಪೌಂಡ್ ವಾಲ್, ಮಳೆ ನೀರು ಸಂಗ್ರಹ ತೊಟ್ಟಿ ಸಂಗ್ರಹಣ ತೊಟ್ಟಿ, ಅಗ್ನಿಶಾಮಕ ಉಪಕರಣಗಳು, 3 ಲಕ್ಷ ಲೀ. ಸಾಮರ್ಥ್ಯದ ನೀರಿನ ಟ್ಯಾಂಕ್‌ಗಳು, 12 ಲಿಫ್ಟ್‌ಗಳು, ಸೋಲಾರ್ ನೀರು ಮತ್ತು ಪೀಠೋಪಕರಣಗಳ ಈ ಕಟ್ಟಡದಲ್ಲಿ ಒದಗಿಸಲಾಗುವುದು.

ವಿಜ್ಞಾನ ಕಾಲೇಜು ಕಟ್ಟಡ: ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು ಹೆಚ್ಚುವರಿ ಕಟ್ಟಡವನ್ನು 9,292 ಚ.ಮೀ. ವಿಸ್ತೀರ್ಣದಲ್ಲಿ (ಜಿ+3) ದಲ್ಲಿ ನಿರ್ಮಿಸಲಾಗುತ್ತಿದ್ದು, 20 ಕೊಠಡಿಗಳು, ಹತ್ತು ಪ್ರಯೋಗಾಲಯಗಳು, ನಾಲ್ಕು ಸೆಮಿನಾರ್ ಹಾಲ್‌ಗಳು, ನಾಲ್ಕು ವಿವಿಧೋದ್ದೇಶ ಕೊಠಡಿ, ಒಂದು ಗ್ರಂಥಾಲಯ, ಎರಡು ಲಿಫ್ಟ್‌ಗಳು ಹಾಗೂ ಕಾಂಪೌಂಡ್ ವಾಲ್ ಬರಲಿವೆ. ಈ ಕಟ್ಟಡವನ್ನು ಪಾರಂಪರಿಕ ಶೈಲಿಯಲ್ಲಿ ನಿರ್ಮಿಸಲಾಗುತ್ತಿದ್ದು ಎರಡು ವರ್ಷದೊಳಗಾಗಿ ಕಾಮಗಾರಿ ಪೂರ್ಣಗೊಳಿಸಲಾಗುವುದು ಎಂದು ಕರ್ನಾಟಕ ಗೃಹ ಮಂಡಳಿ ಎಕ್ಸಿಕ್ಯೂಟಿವ್ ಇಂಜಿನಿಯರ್ ಅಶ್ವಿನ್ ಅವರು 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ಆರ್.ಮೂರ್ತಿ, ಅಯೂಬ್‌ಖಾನ್, ನಾಗೇಶ್‌ಗೆ ಹುಟ್ಟುಹಬ್ಬದ ಶುಭಾಶಯ....



ದಸರಾ ವಸ್ತುಪ್ರದರ್ಶನ ಪ್ರಾಧಿಕಾರದ ಬಿವಿ ಕಾರಂತರ ಸಭಾಂಗಣದಲ್ಲಿ ಮೈಸೂರು ನಗರ ಕಾಂಗ್ರೆಸ್ ಸಮಿತಿಯ ಅಧ್ಯಕ್ಷ ಆರ್.ಮೂರ್ತಿ, ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್ ಹಾಗೂ ನಗರ ಕಾಂಗ್ರೆಸ್ ಸಮಿತಿಯ ಹಿಂದುಳಿದ ವರ್ಗದ ಅಧ್ಯಕ್ಷ ಎನ್.ಆರ್.ನಾಗೇಶ್ ಅವರುಗಳ ಹುಟ್ಟುಹಬ್ಬವನ್ನು ಕೇಕ್ ಕತ್ತರಿಸಿ ಅದ್ಧೂರಿಯಾಗಿ ಆಚರಿಸಲಾಯಿತು. ಈ ವೇಳೆ ವಸ್ತುಪ್ರದರ್ಶನ ಪ್ರಾಧಿಕಾರದ ಉಪಸಮಿತಿ ಪದಾಧಿಕಾರಿಗಳಾದ ರಘುರಾಜ ಅರಸು, ರಾಕೇಶ್‌ಕುಮಾರ್, ಲಕ್ಷ್ಮಿ ನಾರಾಯಣ್, ವಿನೋದ್ ಉಪ್ಪಾರ್, ಹರೀಶ್ ರೆಡ್ಡಿ, ರಾಜು ರೆಡ್ಡಿ, ಶ್ರೀಕಾಂತ್ ಯಾದವ್, ಸಿದ್ದಪ್ಪಾಜಿ ವಿಶ್ವಕರ್ಮ, ಶ್ರೀರಾಮ್ ಮಡಿವಾಳ್, ರವಿಕುಮಾರ್ ಕುಂಬಾರ್ ಇನ್ನಿತರರು ಮೂವರಿಗೂ ಹುಟ್ಟುಹಬ್ಬದ ಶುಭಾಶಯ ಕೋರಿದರು.

ನಾಳೆ ರಕ್ಷಿತಾ ಭರತನಾಟ್ಯ ರಂಗ ಪ್ರವೇಶ

ಮೈಸೂರು, ಡಿ. 25–ಗುರು ವಿದುಷಿ ಮಿತ್ರಾನವೀನ್ ಅವರ ಶಿಷ್ಯೆ, ಕುಮಾರಿ ಎ.ರಕ್ಷಿತಾ ಅವರ ರಂಗ ಪ್ರವೇಶ ಕಾರ್ಯಕ್ರಮವನ್ನು ಡಿ.27ರಂದು ಸಂಜೆ 5.30 ಗಂಟೆಗೆ ಜಗನ್ಮೋಹನ ಅರಮನೆ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ.



ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶನ ಕಲೆಗಳ ವಿಶ್ವವಿದ್ಯಾನಿಲಯ ಕುಲಪತಿ ಪ್ರೊ. ನಾಗೇಶ್ ವಿ ಬೆಟ್ಟಕೋಟೆ, ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ನಾಟ್ಯಚಾರ್ಯ ಪ್ರೊ.ಕೆ.ರಾಮಮೂರ್ತಿರಾವ್, ಶ್ರೀ ಕೃಷ್ಣ ಧಾಮ ಉಪಾಧ್ಯಕ್ಷ ರವಿಶಾಸ್ತ್ರಿ ಆಗಮಿಸುವರು. ಇದೇ ವೇಳೆ ಗುರುವಿದುಷಿ ಮಿತ್ರ ನವೀನ್ ಅವರನ್ನು ಸನ್ಮಾನಿಸಲಾಗುವುದು. ಕಾರ್ಯಕ್ರಮದ ನಿರ್ದೇಶನ, ನೃತ್ಯ ಸಂಯೋಜನೆ, ನಟ್ಟುವಾಂಗ ಗುರು ವಿದುಷಿ ಶ್ರೀಮತಿ ಮಿತ್ರ ನವೀನ್ ಅವರದು. ಗಾಯನದಲ್ಲಿ ವಿದ್ವಾನ್ ಎಂ.ಎಸ್. ನವೀನ್, ಕೊಳಲಿನಲ್ಲಿ ವಿದ್ವಾನ್ ವಿವೇಕ್ ಕೃಷ್ಣ ಬೆಂಗಳೂರು ಹಾಗೂ ಮೃದಂಗದಲ್ಲಿ ವಿದ್ವಾನ್ ಜಿ.ಎಸ್.ನಾಗರಾಜ್ ಬೆಂಗಳೂರು ಸಹಕರಿಸಲಿದ್ದಾರೆ.

ನಾಳೆ ಶಕುಂತಲ ಜಯದೇವ ಶರಣ ಪ್ರಶಸ್ತಿ ಪ್ರದಾನ ಸಮಾರಂಭ

ಮೈಸೂರು,ಡಿ.25(ಎಂಟಿವೈ)– ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆ ಆವರಣದಲ್ಲಿರುವ ರಾಜೇಂದ್ರ ಭವನದಲ್ಲಿ ಡಿ. 27ರ ಸಂಜೆ 5ಕ್ಕೆ ಶಕುಂತಲ ಜಯದೇವ ಶರಣ ಪ್ರಶಸ್ತಿ ಪ್ರದಾನ ಸಮಾರಂಭ ಆಯೋಜಿಸಲಾಗಿದೆ ಎಂದು ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ನಗರ ಘಟಕದ ಅಧ್ಯಕ್ಷ ಡಾ.ಜಯಪ್ಪ ಹೊನ್ನಾಳಿ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ನಗರ ಘಟಕದ ವತಿಯಿಂದ ನಡೆಯುತ್ತಿರುವ ಕಾರ್ಯಕ್ರಮದ ಸಾನಿಧ್ಯವನ್ನು ಸುತ್ತೂರು ಕ್ಷೇತ್ರದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ವಹಿಸಲಿದ್ದಾರೆ. ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಬೆಂಗಳೂರು ಘಟಕದ ಅಧ್ಯಕ್ಷ ಡಾ.ಸಿ. ಸೋಮಶೇಖರ ಅಧ್ಯಕ್ಷತೆ ವಹಿಸಲಿದ್ದಾರೆ. ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಪ್ರೊ. ಪದ್ಮಶೇಖರ್, ಸಮಾಜ ಸೇವಕರಾದ ಡಾ.ಶಕುಂತಲ ಜಯದೇವ ಹಾಗೂ ಇನ್ನಿತರರು ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ. ಇದೇ ವೇಳೆ ಕಲ್ಬುರ್ಗಿಯ ಶರಣ ಚಿಂತಕರಾದ ಡಾ.ನೀಲಾಂಬಿಕಾ ಪೊಲೀಸ್ ಪಾಟೀಲ ಹಾಗೂ ಸಂಸ್ಕೃತಿ ಚಿಂತಕ ಶಂಕರ ದೇವನೂರು ಅವರಿಗೆ 'ಶಕುಂತಲ ಜಯದೇವ ಶರಣ ಪ್ರಶಸ್ತಿ' ಪ್ರದಾನ ಮಾಡಲಾಗುತ್ತದೆ ಎಂದರು. ಸುದ್ದಿಗೋಷ್ಠಿಯಲ್ಲಿ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ನಗರ ಘಟಕದ ಪದಾಧಿಕಾರಿಗಳಾದ ಬಿ.ಎನ್. ನಂದೀಶ್ವರ, ಡಾ.ಹೆಚ್.ಮುದ್ದುಮಲ್ಲೇಶ್, ವೈ.ನ.ಲೋಕೇಶ್, ಡಾ.ಹೆಚ್.ಎಸ್. ಲೋಕೇಶಪ್ಪ, ಶೋಭಾರಾಣಿ ಇದ್ದರು.

ಮೈಸೂರು ಡಿಸೈನರ್ಸ್, ಪ್ರಿಂಟರ್ಸ್ ಅಸೋಸಿಯೇಷನ್ ಕ್ಯಾಲೆಂಡರ್ ಬಿಡುಗಡೆ

ಮೈಸೂರು,ಡಿ.25(ಎಂಟಿವೈ)– ಮೈಸೂರು ಡಿಸೈನರ್ಸ್ ಅಂಡ್ ಪ್ರಿಂಟರ್ಸ್ ಅಸೋಸಿಯೇಷನ್ ಪ್ರಕಟಿಸಿರುವ 2026ನೇ ಸಾಲಿನ ಕ್ಯಾಲೆಂಡರ್ ಅನ್ನು ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಕೆ.ದೀಪಕ್ ಇಂದು ಬಿಡುಗಡೆ ಮಾಡಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಕ್ಯಾಲೆಂಡರ್ ಬಿಡುಗಡೆ ಬಳಿಕ ಕೆ.ದೀಪಕ್ ಮಾತನಾಡಿ, ಹಲವಾರು ವರ್ಷಗಳ ಹಿಂದೆ ಕ್ಯಾಲೆಂಡರ್ ಖರೀದಿಸುವುದು ಬಡ ವರ್ಗದವರಿಗೆ ಅಸಾಧ್ಯವಾಗಿತ್ತು. ಹೀಗಾಗಿ ಅಗತ್ಯಬಿದ್ದಾಗ ಬೇರೆಯವರ ಮನೆ ಕ್ಯಾಲೆಂಡರ್ ಅವಲಂಬಿಸುವಂತಾಗಿತ್ತು. ಆದರೆ ಇತ್ತೀಚಿನ ವರ್ಷಗಳಲ್ಲಿ ಸಣ್ಣ ಪುಟ್ಟ ಸಂಘ ಸಂಸ್ಥೆಗಳೂ ಕ್ಯಾಲೆಂಡರ್ ಮುದ್ರಿಸಿ ವಿತರಿಸುತ್ತಿವೆ. ಡಿಸೈನರ್ಸ್ ಅಂಡ್ ಪ್ರಿಂಟರ್ಸ್ ಅಸೋಸಿಯೇಷನ್ ಪ್ರಕಟಿಸಿರುವ ಕ್ಯಾಲೆಂಡರ್ ಮಾಹಿತಿಯುಕ್ತವಾಗಿದೆ. ಇದರಲ್ಲಿ ಕೇವಲ ದಿನಾಂಕ ಮಾತ್ರವಲ್ಲ, ಕಲೆ, ಸಾಹಿತ್ಯ, ಸಂಸ್ಕೃತಿ, ನಗರದ ಪ್ರವಾಸೋದ್ಯಮಗಳಿಗೆ ಸಂಬಂಧಿಸಿದ ಗುಣಮಟ್ಟದ ಚಿತ್ರಗಳಿವೆ. ಕನ್ನಡ ಭಾಷೆಗೂ ಹೆಚ್ಚು ಒತ್ತು ನೀಡಿರುವುದು ಶ್ಲಾಘನೀಯ ಎಂದರು.

ಮೈಸೂರು ಡಿಸೈನರ್ಸ್ ಅಂಡ್ ಪ್ರಿಂಟರ್ಸ್ ಅಸೋಸಿಯೇಷನ್ ಸಂಸ್ಥೆ ಅಧ್ಯಕ್ಷ ಡಿ.ಮಂಜುನಾಥ್ ಮಾತನಾಡಿ, ರಾಜ್ಯ ಹಾಗೂ ಸ್ಥಳೀಯ ವಿಷಯಕ್ಕೆ ಮಾತ್ರವಲ್ಲದೆ, ಪ್ರಪಂಚದ ಏಳು ಅದ್ಭುತಗಳ ಚಿತ್ರಗಳನ್ನೂ ಉತ್ತಮ ಗುಣಮಟ್ಟದೊಡನೆ ಮುದ್ರಿಸಲಾಗಿದೆ ಎಂದರು. ಈ ಸಂದರ್ಭದಲ್ಲಿ ಅಸೋಸಿಯೇಷನ್ ಪದಾಧಿಕಾರಿಗಳಾದ ಎಂ.ಎಸ್.ರಾಮಚಂದ್ರ, ಹರ್ಷ, ಎಂ.ಆರ್. ಮಂಜುನಾಥಗುಪ್ತ, ಎಂ.ಎಸ್.ರುದ್ರಸ್ವಾಮಿ, ಪ್ರಕಾಶ್, ನಾಗೇಂದ್ರ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.



ಆಶೀರ್ವಾದ

ಮೈಸೂರಿಗೆ ಆಗಮಿಸಿದ ಪೂಜ್ಯ ಭಾವಿ ಪರ್ಯಾಯ ಶ್ರೀಗಳಾದ ಶ್ರೀ ವೇದ ವರ್ಧನತೀರ್ಥ ಶ್ರೀಪಾದಂಗಳವರ ಸ್ವಾಗತ ಸಮಾರಂಭದಲ್ಲಿ ಶಾಸಕ ಟಿ.ಎಸ್. ಶ್ರೀವತ್ಸ ಆಶೀರ್ವಾದ ಪಡೆದರು. ವಿಪ್ರ ಮುಖಂಡ ಎನ್.ಎಂ.ನವೀನ್‌ಕುಮಾರ್ ಉಪಸ್ಥಿತರಿದ್ದರು.

ನಾಳೆ ಉಚಿತ ಆರೋಗ್ಯ ತಪಾಸಣಾ ಶಿಬಿರ

ಮೈಸೂರು,ಡಿ.25(ಎಂಟಿವೈ)–ಮೈಸೂರಿನ ಪುರಭವನದ ಸಭಾಂಗಣದಲ್ಲಿ ವಿಶ್ವಕರ್ಮ ಸಮುದಾಯದವರಿಗಾಗಿ ಡಿ.27 ರಂದು ಬೆಳಗ್ಗೆ 9ರಿಂದ ಸಂಜೆ 4ರವರೆಗೆ ಉಚಿತ ಆರೋಗ್ಯ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ ಎಂದು ವಿರಾಟ್ ವಿಶ್ವ ಗ್ಲೋಬಲ್ ಫೌಂಡೇಷನ್‌ನ ಸಿ.ಎ. ನಾಗರಾಜಾಚಾರ್ ತಿಳಿಸಿದ್ದಾರೆ.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವಿರಾಟ್ ವಿಶ್ವಗ್ಲೋಬಲ್ ಫೌಂಡೇಷನ್, ನಾರಾಯಣ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಹಾಗೂ ಮೈಸೂರು ಜಿಲ್ಲಾ ವಿಶ್ವಕರ್ಮ ಸಮಾಜದ ಎಲ್ಲಾ ಸಂಘ ಸಂಸ್ಥೆಗಳ ಸಂಯುಕ್ತಾಶ್ರಯದಲ್ಲಿ ಬೃಹತ್ ಆರೋಗ್ಯ ತಪಾಸಣಾ ಶಿಬಿರವನ್ನು ಆಯೋಜಿಸಲಾಗಿದ್ದು, ಶಿಬಿರದಲ್ಲಿ ತಜ್ಞ ವೈದ್ಯರು ತಪಾಸಣೆ ಮಾಡಲಿದ್ದಾರೆ. ಮೈಸೂರು ಜಿಲ್ಲೆಯ ವಿವಿಧೆಡೆ ನೆಲೆಸಿರುವ ವಿಶ್ವಕರ್ಮ ಸಮುದಾಯದವರು ಈ ಆರೋಗ್ಯ ತಪಾಸಣಾ ಶಿಬಿರದ ಸದುಪಯೋಗ ಪಡೆದುಕೊಳ್ಳಬೇಕು ಎಂದು ಮನವಿ ಮಾಡಿದರು.

ಶಿಬಿರದಲ್ಲಿ ಬಿಪಿ, ಸಕ್ಕರೆ ಕಾಯಿಲೆ, ಸ್ತ್ರೀಯರ ಆರೋಗ್ಯ ಸಮಸ್ಯೆ, ಹೃದಯ ಪರೀಕ್ಷೆ, ಇಸಿಜಿ ಮತ್ತು ಎಕೋ, ಕ್ಯಾನ್ಸರ್ ತಪಾಸಣೆ, ನರರೋಗ ತಪಾಸಣೆ, ಕೀಲು ಮತ್ತು ಮೂಳೆ ಸಂಬಂಧಿತ ಆರೋಗ್ಯ ತಪಾಸಣೆ ನಡೆಯಲಿದೆ. ವಿಶ್ವಕರ್ಮ ಸಮುದಾಯದ ಬಡ ಜನತೆ ಇದರ ಪ್ರಯೋಜನ ಪಡೆಯಬಹುದಾಗಿದೆ. ಸಾವಿರ ಮಂದಿಗೆ ತಪಾಸಣೆ ನಡೆಸಿ, ಕೆಲವು ಸಮಸ್ಯೆಗಳಿಗೆ ಉಚಿತ ಔಷಧಿ ನೀಡಲಾಗುವುದು. ಪ್ರಯೋಜನ ಪಡೆಯಬಯಸುವವರು ಹುಚ್ಚಪ್ಪಾಚಾರ್, ದೂ. 94487 73981 ಹಾಗೂ ತಮ್ಮ ಭಾಗದಲ್ಲಿನ ಸಮುದಾಯದ ಮುಖಂಡರಿಂದ ಟೋಕನ್ ಪಡೆದು ಹಾಜರಾಗುವಂತೆ ಮನವಿ ಮಾಡಿದರು. ಗೋಷ್ಠಿಯಲ್ಲಿ ಮುಖಂಡರಾದ ರಾಜೇಶ್, ಚಂದ್ರು ವಿಶ್ವಕರ್ಮ, ಜಯಕುಮಾರ್, ರಾಜು ಕಾರ್ಯ ಇನ್ನಿತರರು ಇದ್ದರು.

ಗಂಗೋತ್ರಿ ಪಬ್ಲಿಕ್ ಶಾಲೆಯಲ್ಲಿ ಕ್ರಿಸ್ಮಸ್ ಆಚರಣೆ



ಮೈಸೂರಿನ ಗಂಗೋತ್ರಿ ಪಬ್ಲಿಕ್ ಶಾಲೆಯಲ್ಲಿ ಕ್ರಿಸ್ಮಸ್ ಹಬ್ಬವನ್ನು ಸಡಗರದಿಂದ ಆಚರಿಸಲಾಯಿತು. ಈ ವೇಳೆ ಶಾಲಾ ಆಡಳಿತಾಧಿಕಾರಿ ಕಾಂತಿ ನಾಯಕ್, ಆಡಳಿತ ಮಂಡಳಿ, ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ನಿಧನ

ಪ್ರಕಾಶ್



ಮೈಸೂರು, ಡಿ.25–ಮೈಸೂರಿನ ಆನಂದ ನಗರದ ನಿವಾಸಿ, ರಾಜ್ಯ ನೀರು ಮತ್ತು ಒಳಚರಂಡಿ ಮಂಡಳಿಯ ನಿವೃತ್ತ ಇಂಜಿನಿಯರ್ ಎನ್.ಎಂ.ಪ್ರಕಾಶ್ (65) ಗುರುವಾರ ನಿಧನರಾದರು. ಮೃತರು ಪತ್ನಿ, ಪುತ್ರಿ, ಅಳಿಯ ಸೇರಿದಂತೆ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಶುಕ್ರವಾರ(ಡಿ.26) ಮಧ್ಯಾಹ್ನ 1 ಗಂಟೆಗೆ ವಿಜಯನಗರ 4ನೇ ಹಂತದ ಚಿತಾಗಾರದಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.



ಶ್ರೀಮತಿ ಕುಸುಮ

ಮೈಸೂರು ವಿಜಯನಗರದ ರೈಲ್ವೆ ಬಡಾವಣೆ ನಿವಾಸಿ ಗೋಪಾಲ್ ಅವರ ಪತ್ನಿ ಶ್ರೀಮತಿ ಕುಸುಮ (46) ಗುರುವಾರ ನಿಧನರಾದರು. ಮೃತರು ಪತಿ ಗೋಪಾಲ್, ಓರ್ವ ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಗುರುವಾರ ಸಂಜೆ ಅಂತ್ಯಕ್ರಿಯೆ ಗೋಕುಲಂ ರುದ್ರಭೂಮಿಯಲ್ಲಿ ನೇರವೇರಿಸಲಾಯಿತು ಎಂದು ಕುಟುಂಬ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

26.12.2025 ಶುಕ್ರವಾರ, ಮಳೆ ನಕ್ಷತ್ರ: ಮೂಲ, 16.12.2025 ರಿಂದ 28.12.2025 ವಿಶ್ವಾವಸು ನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಪುಷ್ಯ ಮಾಸ, ಶುಕ್ಲ ಪಕ್ಷ, ತಿಥಿ: ಷಷ್ಠಿ, ನಕ್ಷತ್ರ: ಪೂಭಾ, ರಾಹುಕಾಲ: ಬೆಳಗ್ಗೆ 10.30ರಿಂದ 12ರವರೆಗೆ

- **ಕರ್ನಾಟಕ ರಾಜ್ಯ ಅಹಿಂದ ಒಕ್ಕೂಟ** : ಕನ್ನಡ ರಾಜ್ಯೋತ್ಸವ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ, ಬೆಳಗ್ಗೆ 8.30ಕ್ಕೆ ಧ್ವಜಾರೋಹಣ : ಶಾಸಕ ತನ್ವೀರ್ ಸೇಠ್, ಬೆಳಗ್ಗೆ 9ಕ್ಕೆ ಸಾಂಸ್ಕೃತಿಕ ಕಾರ್ಯಕ್ರಮ ಉದ್ಘಾಟನೆ : ಕೆಪಿಸಿಸಿ ಮೀನುಗಾರ ಘಟಕದ ರಾಜ್ಯಾಧ್ಯಕ್ಷ ಮಂಜುನಾಥ್ ಬಿ. ಸುಣ್ಣಗಾರ್, ಬೆಳಗ್ಗೆ 11ಕ್ಕೆ ವೇದಿಕೆ ಕಾರ್ಯಕ್ರಮ, ಉದ್ಘಾಟನೆ : ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಅಧ್ಯಕ್ಷತೆ : ಶಾಸಕ ಹರೀಶ್‌ಗೌಡ, ಉಪಸ್ಥಿತರು : ಶಾಸಕ ಜಿ.ಡಿ. ಹರೀಶ್‌ಗೌಡ, ಮುಡಾ ಮಾಜಿ ಅಧ್ಯಕ್ಷ ಡಾ. ಹೆಚ್.ವಿ. ರಾಜೀವ್, ಡಾ. ಎ.ಪಿ. ನಾಗೇಶ್, ಪಾಲಿಕೆ ಮಾಜಿ ಸದಸ್ಯ ಸತೀಶ್, ಮೈಮುಲ್ ಮಾಜಿ ನಿರ್ದೇಶಕ ಅಶೋಕ್, ಮಂಜುನಾಥ್, ಸ್ಥಳ: ಪುರಭವನ ಸಭಾಂಗಣ.
- **ಪಾಳ್ಯಂ ಶ್ರೀ ಶಾಸ್ತಾ ಪೀಠಂ, ಅಭಯದಾಂಯಕ ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನಂ** : ಧನುರ್ಮಾಸದ ವಿಶೇಷ ಪೂಜಾ, ಲಕ್ಷಾರ್ಚನಾ, ವಾರ್ಷಿಕ ಕುಂಭಾಭಿಷೇಕ ಪೂಜಾ ಮಹೋತ್ಸವ, ಮಹತೋಭಾರ ಶ್ರೀ ಧರ್ಮಶಾಸ್ತಾ ಸ್ವಾಮಿಯವರಿಗೆ, ಮಹಾಭಿಷೇಕ, ಅಲಂಕಾರ ಸೇವೆ, ನಾಮಾರ್ಚನೆ, ಮಹಾನಿವೇದನೆ, ಮಂಗಳಾರತಿ, ತೀರ್ಥಪ್ರಸಾದ ವಿನಿಯೋಗ, ಸ್ಥಳ: ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನ, ರಾಘವೇಂದ್ರನಗರ.
- **ರಾಮ್‌ಸನ್ಸ್ ಬೊಂಬೆ ಮನೆ:** ದಸರೆಯ ಬೊಂಬೆ ಪ್ರದರ್ಶನ 21ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10 ರಿಂದ.
- **ಮೈಸೂರು ವಿಶ್ವವಿದ್ಯಾನಿಲಯ, ಡಾ. ಬಾಬು ಜಗಜೀವನರಾಮ್ ಅಧ್ಯಯನ ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರ** : ಸಾಮಾಜಿಕ ನ್ಯಾಯಕ್ಕಾಗಿ ಸಾಮಾಜಿಕ ಚಳುವಳಿಗಳು ಕುರಿತು ವಿಚಾರ ಸಂಕಿರಣ, ಉದ್ಘಾಟನೆ : ಸಾಂಸ್ಕೃತಿಕ ಚಿಂತಕ ಹೆಚ್. ಗೋವಿಂದಯ್ಯ, ವಿಶೇಷ ಅತಿಥಿಗಳು : ರಾಜಕೀಯ ವಿಶ್ಲೇಷಕ ಕೋಡಿಹಳ್ಳಿ ಸಂತೋಷ್, ಅಧ್ಯಕ್ಷತೆ : ಡಾ. ಬಾಬು ಜಗಜೀವನರಾಮ್ ಅಧ್ಯಯನ ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರದ ನಿರ್ದೇಶಕ ಪ್ರೊ. ಕೆ. ಸದಾಶಿವ, ಸ್ಥಳ: ಡಾ.ಬಾಬು ಜಗಜೀವನರಾಮ್ ಅಧ್ಯಯನ ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರದ ಸಭಾಂಗಣ, ಮಾನಸಗಂಗೋತ್ರಿ, ಬೆಳಗ್ಗೆ 10.30ಕ್ಕೆ.
- **ಪ್ರೊ. ಅನಿಟ ವಿಮಲ ಬ್ರ್ಯಾಗ್ಸ್ ಶಿಷ್ಯ ಬಳಗ** : ಗುರುವಂದನೆ–ಅಭಿನಂದನೆ, ಉದ್ಘಾಟನೆ : ಕವಯಿತ್ರಿ ಪ್ರೊ. ಚ. ಸರ್ವಮಂಗಳಾ, ಅಧ್ಯಕ್ಷತೆ : ಮಹಾರಾಜ ಕಾಲೇಜು ವಿಶ್ರಾಂತ ಪ್ರಾಧ್ಯಾಪಕರಾದ ಪ್ರೊ. ಹೆಚ್.ಎಂ. ವಸಂತಮ್ಮ, ಅಭಿನಂದನಾ ಭಾಷಣ : ಪ್ರಾಧ್ಯಾಪಕರಾದ ಪ್ರೊ. ಹೆಚ್.ಆರ್. ಚೇತನಾ, ಉಪಸ್ಥಿತರು : ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಲಲಿತಕಲೆಗಳ ಕಾಲೇಜು ಪ್ರಿನ್ಸಿಪಾಲ್ ಪ್ರೊ. ಅನಿಟ ವಿಮಲ ಬ್ರ್ಯಾಗ್ಸ್, ಸ್ಥಳ: ಲಲಿತಕಲೆಗಳ ಕಾಲೇಜು ಸಭಾಂಗಣ, ಮಾನಸಗಂಗೋತ್ರಿ, ಬೆಳಗ್ಗೆ 11ಕ್ಕೆ.
- **ಕನ್ನಡ ಚಳವಳಿ ಕೇಂದ್ರ ಸಮಿತಿ, ಮೈಸೂರು** : 70ನೇ ಕನ್ನಡ ರಾಜ್ಯೋತ್ಸವ, ಸಾನ್ನಿಧ್ಯ : ಶ್ರೀ ನಟರಾಜ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಶ್ರೀ ಚಿದಾನಂದ ಸ್ವಾಮೀಜಿ, ಉದ್ಘಾಟನೆ : ಶಾಸಕ ಜಿ.ಟಿ. ದೇವೇಗೌಡ, ಅಧ್ಯಕ್ಷತೆ : ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಮುಖ್ಯ ಅತಿಥಿಗಳು : ಶ್ರೀ ನಟರಾಜ ಶಿಕ್ಷಣ ಸಂಸ್ಥೆ ವಿಶೇಷಾಧಿಕಾರಿ ಪ್ರೊ. ಎಸ್. ಶಿವರಾಜಪ್ಪ, ಸನ್ಮಾನಿತರು : ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷ ಡಾ. ವೈ.ಡಿ. ರಾಜಣ್ಣ, ಸಮಾಜ ಸೇವಕ ಯಶಸ್ವಿ ಎಸ್. ಸೋಮಶೇಖರ್, ಜೈಶಂಕರ್, ಡಾ. ಎಂ. ಪುಟ್ಟಸ್ವಾಮಿ, ಸ್ಥಳ: ಶ್ರೀನಟರಾಜ ಸಭಾ ಭವನ, ಶಂಕರ ಮಠದ ರಸ್ತೆ, ಬೆಳಗ್ಗೆ 11ಕ್ಕೆ.
- **ಸಪಸ ಸಂಗೀತ ವಿದ್ಯಾಲಯ, ಅಖಿಲ ಕರ್ನಾಟಕ ಸುಗಮ ಸಂಗೀತ ಒಕ್ಕೂಟ** : ಭಾವಗೀತೆಗಳ ಕಾರ್ಯಾಗಾರ, ಸ್ಥಳ: ಗಂಗೂಬಾಯಿ ಹಾನಗಲ್ ಸಭಾಂಗಣ, ಬಲ್ಲಾಳ್ ಸರ್ಕಲ್ ಹತ್ತಿರ, ಸಂಜೆ 4ಕ್ಕೆ.
- **ಸಪಸ ಸಂಗೀತ ವಿದ್ಯಾಲಯ** : ಭಾವಾಭಿಯಾನ ಭಾವಗೀತೆಗಳ ಗಾಯನ ಕಾರ್ಯಕ್ರಮ, ಸ್ಥಳ: ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯದ ಸಭಾಂಗಣ, ಸಂಜೆ 4ಕ್ಕೆ.
- **ವ್ಯವಸ್ಥಾಪಕರು** : ಸಿಸಿಎಆರ್‌ಡಿ ಇಂಟರ್‌ನ್ಯಾಷನಲ್ ಕಾನ್ಫರೆನ್ಸ್ –2025 ಉದ್ಘಾಟನಾ ಸಮಾರಂಭ, ಸಾನ್ನಿಧ್ಯ ಹಾಗೂ ಆಶೀರ್ವಚನ : ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಡಾ. ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ, ಮುಖ್ಯ ಅತಿಥಿಗಳು : ಮಾಜಿ ಸಚಿವ ಡಾ. ಸಿ.ಎನ್. ಅಶ್ವಥ್‌ನಾರಾಯಣ, ಪ್ರೊ. ನಾರಾಯಣ ಎಸ್. ಜಾದವ್, ಶಾಸಕ ಜಿ.ಟಿ. ದೇವೇಗೌಡ, ಆಯುಷ್ ಇಲಾಖೆ ಆಯುಕ್ತ ವಿಪಿನ್ ಸಿಂಗ್, ಪ್ರಾಸ್ತಾವಿಕ ಭಾಷಣ : ಸಿಎಫ್‌ಟಿಆರ್‌ಐ ಮಾಜಿ ನಿರ್ದೇಶಕ ಡಾ. ವಿ. ಪ್ರಕಾಶ್, ಅಧ್ಯಕ್ಷತೆ : ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ ಉಪಕುಲಪತಿ ಡಾ. ಬಿ.ಸಿ. ಭಗವಾನ್, ಸ್ಥಳ: ಎಸ್‌ಡಿಎಂ–ಐಎಂಡಿ ಸಭಾಂಗಣ, ಚಾಮುಂಡಿಬೆಟ್ಟದ ರಸ್ತೆ, ಸಂಜೆ 5ಕ್ಕೆ.
- **ಪರಂಪರೆ** : ಶ್ರೀ ಮದ್ಭಾಗವತ ಉಪನ್ಯಾಸ ಸರಣಿ, ಗಾನಭಾರತೀ ಸಂಗೀತ ಶಾಲೆ ಮಕ್ಕಳಿಂದ ಭಜನೆ, ಡಾ. ವೀಣಾ ಬನ್ನಂಜೆ ಅವರಿಂದ ಭಾಗವತ ಉಪನ್ಯಾಸ, ಸ್ಥಳ: ನಾದಬ್ರಹ್ಮ ಸಂಗೀತ ಸಭಾಂಗಣ, ಜೆಎಲ್‌ಬಿ ರಸ್ತೆ, ಸಂಜೆ 6 ರಿಂದ.
- **ಶ್ರೀ ವೇಣುಗೋಪಾಲಸ್ವಾಮಿ ದೇವಸ್ಥಾನ** : ವಿದುಷಿ ಡಾ. ಕೆ.ಎಲ್. ಪ್ರಸನ್ನಾಕ್ಷಿ ಅವರಿಂದ ತಿರುಪ್ಪಾವೈ ಪ್ರವಚನ ಕಾರ್ಯಕ್ರಮ, ಸ್ಥಳ: ಶ್ರೀವೇಣುಗೋಪಾಲಸ್ವಾಮಿ ದೇವಸ್ಥಾನ, ತ್ಯಾಗರಾಜ ರಸ್ತೆ, ಸಂಜೆ 6.30 ರಿಂದ.
- **ಶ್ರೀ ಮಹಾಜನ ಸಭಾ ಟ್ರಸ್ಟ್** : ತಿರುಪ್ಪಾವೈ ಪಾರಾಯಣ, ಡಾ. ಎನ್.ಕೆ. ರಾಮಶೇಷನ್ ಅವರಿಂದ ಶ್ರೀ ಗೋದಾದೇವಿ ವಿರಚಿತ ತಿರುಪ್ಪಾವೈ ಪ್ರವಚನ, ಸ್ಥಳ: ಶ್ರೀ ಮಹಾಜನ ಸಭಾ ಟ್ರಸ್ಟ್ ಆವರಣ, ಶ್ರೀ ರಾಮಮಂದಿರ, ಕಾಂತರಾಜ ರಸ್ತೆ, ಕೃಷ್ಣಮೂರ್ತಿಪುರಂ, ಸಂಜೆ 6.30 ರಿಂದ.
- **ರಂಗಾಯಣ** : ಭಾರತೀಯ ರಂಗ ಶಿಕ್ಷಣ ಕೇಂದ್ರದ ವಿದ್ಯಾರ್ಥಿಗಳಿಂದ ವಿಗಡ ವಿಕ್ರಮರಾಯ ನಾಟಕ ಪ್ರದರ್ಶನ, ನಿರ್ದೇಶನ : ಸಾಲಿಯಾನ್ ಉಮೇಶ್ ನಾರಾಯಣ, ಸ್ಥಳ: ವನರಂಗ, ರಂಗಾಯಣ, ಸಂಜೆ 6.30ಕ್ಕೆ.

ಸುತ್ತೂರಿನಲ್ಲಿಂದು, ನಂಜನಗೂಡು ತಾಲೂಕು

- **ಜಗದ್ಗುರು ಶ್ರೀ ವೀರಸಿಂಹಾಸನ ಮಹಾ ಸಂಸ್ಥಾನ ಮಠ:** ಧನುರ್ಮಾಸದ ವಿಶೇಷ ಪೂಜೆ, ಸ್ಥಳ: ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಕರ್ತೃ ಗದ್ದುಗೆ, ಶ್ರೀ ಮಹೇಶ್ವರ ಸನ್ನಿಧಿ, ಶ್ರೀ ವೀರಭದ್ರೇಶ್ವರ, ಶ್ರೀ ಸೋಮೇಶ್ವರ, ಶ್ರೀ ನಾರಾಯಣ ಸ್ವಾಮಿ ದೇವಸ್ಥಾನ, ಸುತ್ತೂರು ಶ್ರೀಕ್ಷೇತ್ರ, ಬೆಳಗ್ಗೆಯಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ : 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಸ್ವಾತಂತ್ರ್ಯ ದೀಪ ಸ್ವರಾಜ್ಯ ಸೇನಾನಿಗಳ ಕುರಿತ ಬಾನುಲಿ ಸರಣಿ, ಪ್ರಸ್ತುತಿ : ನಿತೀಶ್ ಡಂಬಳ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ –ಎಂ.ಆರ್. ಸುಧಾ, ವ್ಯಾಖ್ಯಾನ–ಪ್ರೊ. ಮ. ವರದರಾಜು, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 8.30 ಕನ್ನಡ ಚಿತ್ರಗೀತೆಗಳು, 9.05 ಕ್ಯಾನ್ಸರ್ ತಪ್ಪು ತಿಳುವಳಿಕೆ ಈ ಕುರಿತ ಪ್ರಾಯೋಜಿತ ಜಾಗೃತಿ ಕಾರ್ಯಕ್ರಮ, ಪ್ರಾಯೋಜಕರು–ಇಂಡಿಯನ್ ಕ್ಯಾನ್ಸರ್ ಸೊಸೈಟಿ, ಕರ್ನಾಟಕ ಛಾಪ್ಟರ್, 9.10 ನಮ್ಮ ಆರೋಗ್ಯ ಒನ್ ಹೆಲ್ತ್ ಸಮಗ್ರ ಆರೋಗ್ಯ ಕುರಿತು ಡಾ. ಸುಮಂತ್ ಎಂ.ಎಂ. ಅವರೊಂದಿಗೆ ಮಾತುಕತೆ ನಂತರ ಆಟಿಸಂ ಥೆರಪಿಯಲ್ಲಿನ ಹೊಸ ವಿಧಾನಗಳು ಮತ್ತು ಇತ್ತೀಚಿನ ಬೆಳವಣಿಗೆಗಳು ಕುರಿತು ಡಾ. ಜಯಶ್ರೀ ಶಾನ್ ಬಾಳ್ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ –ಬೇದ್ರೆ ಎನ್. ಮಂಜುನಾಥ, 9.30 ಗಾಂಧೀಸ್ಮೃತಿ, 9.35 ಕನ್ನಡ ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಸಂಗೀತ ಸಂಭ್ರಮ–ನಾದ–ಲಯ ಸಂಗಮ, ಪ್ರಸ್ತುತಿ : ಹೆಚ್. ಎಲ್. ಶಿವಶಂಕರಸ್ವಾಮಿ

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಕಾದಂಬರಿ ವಿಹಾರ, 1.00 ಪ್ರಗತಿ ಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ದಾರಿದೀಪ ಪ್ರಾಯೋಜಿತ ಕಾರ್ಯಕ್ರಮ. ಪ್ರಾಯೋಜಕರು: FEBA India, 2.55 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ: ಜಿ.ಕೆ. ರವೀಂದ್ರಕುಮಾರ್, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ, 4.00 ಮಹಿಳಾರಂಗ, ಸಾಧನಾ ಶಿಖರ ಸೋಲೋ ಬೈಕ್ ರೈಡರ್ ಹಾಗೂ ಯೋಗ ತರಬೇತುದಾರರಾದ ಕಾಂಚನಗಂಗಾ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ–ಕೀರ್ತನಾ. ವಿ., 4.30 ವೃತ್ತಿ ಮಾರ್ಗ ದರ್ಶನ ಭಾರತದ ರಾಜ್ಯ ಮುಕ್ತ ವಿಶ್ವವಿದ್ಯಾಲಯಗಳಲ್ಲಿ ಪ್ರಥಮ ಸ್ಥಾನದಲ್ಲಿರುವ ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ.ಶರಣಪ್ಪ ವಿ. ಹಲಸೆ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ–ಬೇದ್ರೆ ಎನ್. ಮಂಜುನಾಥ, 6.50 ಕೃಷಿರಂಗ, ಹವಾಮಾನ ಮಿತ್ರ ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು– ಪರಿಸರ ನಿರ್ವಹಣೆ ಮತ್ತು ನೀತಿ ಸಂಶೋಧನಾ ಸಂಸ್ಥೆ, ಬೆಂಗಳೂರು, ಸಂಶೋಧನಾ ಸಾರ ಕೃಷಿ ಕ್ಷೇತ್ರದ ಹೊಸ ಅವಿಷ್ಕಾರ, ಪ್ರಸ್ತುತಿ–ಆರ್.ಲೋಕೇಶ್ವರಿ, 7.45 ಕನ್ನಡದಲ್ಲಿ ಭಾಷಣ, 8.00 ಸಂಧ್ಯರಾಗ–ಹಿರಿಯ ಸಮಾಜ ಸೇವಕ ಎಸ್.ವಿ. ಬಾಲಸುಬ್ರಹ್ಮಣ್ಯಂ ಅವರೊಂದಿಗೆ ಮಾತುಕತೆ, ಪ್ರಸ್ತುತಿ–ಜಿ. ಶಾಂತಕುಮಾರ್, 9.30 ನಕ್ಷತ್ರಲೋಕ, ಸಿನಿ ಸೆಲೆಬ್ರಿಟಿಗಳೊಂದಿಗೆ ಮಾತುಕತೆ, ಭಾಗವಹಿಸುತ್ತಾರೆ–ಖ್ಯಾತ ಪೋಷಕ ನಟ ಶಂಕರ್‌ಅಶ್ವಥ್ ಇವರೊಂದಿಗೆ ಭಾಗವಹಿಸುತ್ತಾರೆ ಶಾಂತಕುಮಾರ್ ಜಿ ಹಾಗೂ ಶ್ರೀಮಾನ್ ಎಸ್., 10.30 ಸವಿನೆನಪು

ಮೈಸೂರು ಮಿತ್ರ


ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ
ಡಿಸೆಂಬರ್ 26 ಶುಕ್ರವಾರ 2025
ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871
46
ಸಂಪುಟ: 46 | ಸಂಚಿಕೆ: 248 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com
₹4

ಮೈಸೂರು ಅರಮನೆ ಜಯಮಾರ್ತಾಂಡ ದ್ವಾರದ ಮುಂದೆಯೇ

ಭಾರೀ ಸ್ಫೋಟ; ವ್ಯಕ್ತಿ ಛಿದ್ರ ಛಿದ್ರ

● ಐದಾರು ಮಂದಿಗೆ ಗಾಯ ● ಒಬ್ಬರ ಸ್ಥಿತಿ ಚಿಂತಾಜನಕ ● ಬಲೂನ್‌ಗೆ ತುಂಬುವ ಹೀಲಿಯಂ ಗ್ಯಾಸ್ ಸಿಲಿಂಡರ್ ಸ್ಫೋಟದಿಂದ ದುರಂತ ● ಕ್ರಿಸ್‌ಮಸ್ ರಜೆ ಹಿನ್ನೆಲೆಯಲ್ಲಿ ಅರಮನೆ, ದಸರಾ ವಸ್ತು ಪ್ರದರ್ಶನದಲ್ಲಿ ನೆರೆದಿದ್ದ ಜನರಿಗೆ ಸಿಡಿಲು ಬಡಿದಂತಹ ಸದ್ದು


ಅರಮನೆ ಜಯಮಾರ್ತಾಂಡ ದ್ವಾರದ ಮುಂದೆ ಸ್ಫೋಟ ಸಂಭವಿಸಿ, ಛಿದ್ರ ಛಿದ್ರಗೊಂಡ ದೇಹಗಳು.


ದುರಂತದಲ್ಲಿ ಬಲಿಯಾದ ಬಲೂನ್ ಮಾರಾಟಗಾರ ಸಲೀಂ

ವ್ಯಾಪಾರಕ್ಕಾಗಿ ಬಂದಿದ್ದ ಸಲೀಂ

ಸ್ಫೋಟದಿಂದ ಸಾವನ್ನಪ್ಪಿದ ಸಲೀಂ, ವ್ಯಾಪಾರಕ್ಕಾಗಿ ತಿಂಗಳ ಹಿಂದೆ ಮೈಸೂರಿಗೆ ಬಂದಿದ್ದ. ಈತ ತನ್ನಿಬ್ಬರು ಸ್ನೇಹಿತರೊಂದಿಗೆ ಮಂಡಿಮೊಹಲ್ಲಾದ ಲಾಡ್ಜ್‌ವೊಂದರಲ್ಲಿ ಉಳಿದುಕೊಂಡಿದ್ದ ಎಂದು ತಿಳಿದು ಬಂದಿದ್ದು, ಇದನ್ನು ಪೊಲೀಸರು ಖಚಿತಪಡಿಸಬೇಕಿದೆ. ಆದರೆ ಈತ ಅರಮನೆ ಸುತ್ತಮುತ್ತ, ಬಸ್ ನಿಲ್ದಾಣ ಇನ್ನಿತರ ಜನನಿಬಿಡ ಸ್ಥಳಗಳಲ್ಲಿ ಬಲೂನ್ ವ್ಯಾಪಾರ ಮಾಡುವುದನ್ನು ಪೊಲೀಸರು ಗಮನಿಸಿದ್ದಾರೆ ಎನ್ನಲಾಗಿದೆ.

ಗುರುವಾರ ರಾತ್ರಿ 8.30ರ ಸಮಯದಲ್ಲಿ ಬಲೂನ್‌ಗೆ ತುಂಬುವ ಹೀಲಿಯಂ ಗ್ಯಾಸ್ ಸಿಲಿಂಡರ್ ಸ್ಫೋಟ ಸಂಭವಿಸಿ, ವ್ಯಾಪಾರಿ ಸಾವನ್ನಪ್ಪಿದ್ದಾನೆ. ಘಟನೆಯಲ್ಲಿ ಐವರು ಗಾಯಗೊಂಡಿದ್ದು, ಓರ್ವ ಮಹಿಳೆ ಸ್ಥಿತಿ ಗಂಭೀರವಾಗಿದೆ. ಗಾಯಾಳುಗಳನ್ನು ಕೆ.ಆರ್.ಆಸ್ಪತ್ರೆ ಹಾಗೂ ಜೆಎಸ್‌ಎಸ್ ಆಸ್ಪತ್ರೆಗೆ ದಾಖಲಿಸಲಾಗಿದೆ. ಘಟನೆ ಬಗ್ಗೆ ತನಿಖೆ ನಡೆಸಲಾಗುತ್ತಿದೆ.

-ಸೀಮಾ ಲಾಟ್ಕರ್,
ನಗರ ಪೊಲೀಸ್ ಆಯುಕ್ತೆ

ಮೈಸೂರು, ಡಿ.25– ಮೈಸೂರು ಅರಮನೆ ಜಯಮಾರ್ತಾಂಡ ದ್ವಾರದ ಮುಂದೆ ಬಲೂನ್‌ಗೆ ತುಂಬುವ ಹೀಲಿಯಂ ಗ್ಯಾಸ್ ಸಿಲಿಂಡರ್ ಸ್ಫೋಟಗೊಂಡು, ವ್ಯಾಪಾರಿ ಸ್ಥಳದಲ್ಲೇ ಸಾವನ್ನಪ್ಪಿದ್ದು, ಐದಾರು ಮಂದಿ ಗಾಯಗೊಂಡಿದ್ದಾರೆ.




ಸ್ಫೋಟದ ಗಾಯಾಳುಗಳು.

ಗುರುವಾರ ರಾತ್ರಿ 8.30ರ ಸುಮಾರಿಗೆ ಈ ಭೀಕರ ಸ್ಫೋಟ ಸಂಭವಿಸಿದ್ದು, ಬಲೂನ್ ವ್ಯಾಪಾರಿ ಉತ್ತರ ಪ್ರದೇಶದ ಕನೋಜ್ ಜಿಲ್ಲೆ, ತೋಫಿಯಾ ಗ್ರಾಮದ ಸಲೀಂ(40) ಸ್ಥಳದಲ್ಲೇ ಸಾವನ್ನಪ್ಪಿದ್ದಾನೆ. ಬೆಂಗಳೂರು ಕಾಮಾಕ್ಷಿಪಾಳ್ಯದ ಲಕ್ಷ್ಮೀ, ರಂಜಿತಾ, ನಂಜನಗೂಡಿನ ಮಂಜುಳಾ, ಕೊಲ್ಕತ್ತಾ ಮೂಲದ ಶಾಹಿನಾ ಶಬೀರ್, ರಾಣಿಬೆನ್ನೂರು ಮೂಲದ ಕೆಎಸ್‌ಆರ್‌ಟಿಸಿ ನೌಕರ ಕೊಟ್ರೇಶ್ ಗುಟ್ಟೆ ಗಾಯಗೊಂಡಿದ್ದು, ಇವರನ್ನು ಕೆ.ಆರ್.ಆಸ್ಪತ್ರೆ ಹಾಗೂ ಜೆಎಸ್‌ಎಸ್ ಆಸ್ಪತ್ರೆಗೆ ದಾಖಲಿಸಲಾಗಿದೆ. ಇವರಲ್ಲಿ ಲಕ್ಷ್ಮೀ ಅವರ ಸ್ಥಿತಿ ಚಿಂತಾಜನಕವಾಗಿದ್ದು, ಮತ್ತೋರ್ವ ಮಹಿಳೆಗೂ ಗಂಭೀರ ಗಾಯಗಳಾಗಿವೆ.

ಭಯಾನಕ ಸ್ಫೋಟ: ಜಯಮಾರ್ತಾಂಡ ದ್ವಾರದಲ್ಲಿ ಬಿಎನ್ ರಸ್ತೆ ಫುಟ್‌ಪಾತ್‌ಗೆ ಅಳವಡಿಸಿರುವ ಬ್ಯಾರಿಕೇಡ್ ಬಳಿ ಸಲೀಂ, ಸೈಕಲ್ ನಿಲ್ಲಿಸಿಕೊಂಡು ಬಲೂನ್ ಮಾರಾಟ ಮಾಡುತ್ತಿದ್ದ. ಕ್ರಿಸ್‌ಮಸ್ ಹಿನ್ನೆಲೆಯಲ್ಲಿ ಪ್ರವಾಸಿಗರ ಸಂಖ್ಯೆ ಹೆಚ್ಚಿತ್ತು. ಅರಮನೆ ಆವರಣದಲ್ಲಿ ಫಲಪುಷ್ಪ ಪ್ರದರ್ಶನ, ಸಾಂಸ್ಕೃತಿಕ ಕಾರ್ಯಕ್ರಮ ಹಾಗೂ ವಸ್ತು ಪ್ರದರ್ಶನಕ್ಕೆ ■ 6ನೇ ಪುಟಕ್ಕೆ

ಈಗಂತೂ ನಮ್ಮ ಮೈಸೂರು ಸುರಕ್ಷಿತವಲ್ಲ ಅನ್ನಿಸುತ್ತಿದೆ...

ಮೈಸೂರು, ಡಿ.25(ಪಿಎಂ)– ಮೈಸೂರು ಅರಮನೆಯ ಜಯಮಾರ್ತಾಂಡ ದ್ವಾರದ ಮುಂದೆ ಬೆಂಗಳೂರು–ನೀಲಗಿರಿ ರಸ್ತೆಯಲ್ಲಿ ಬಲೂನ್‌ಗೆ ಬಳಸುವ ಗ್ಯಾಸ್ ಸಿಲಿಂಡರ್ ಸ್ಫೋಟಗೊಂಡು ಘನಘೋರ ದುರಂತ ಸಂಭವಿಸಿ, ಒಬ್ಬ ವ್ಯಕ್ತಿಯ ದೇಹ ಛಿದ್ರಗೊಂಡಿದೆ.

ಮಾಂಸದ ಮುದ್ದೆಯಂತೆ ಗೋಚರಿಸುವ ಮೃತಪಟ್ಟ ವ್ಯಕ್ತಿಯ ದೇಹದ ಅಂಗಾಂಗಗಳು ಈ ಸ್ಫೋಟದ ಭಾರೀ ತೀವ್ರತೆಗೆ ಸಾಕ್ಷಿಯಾಗಿವೆ. ಗಾಯಗೊಂಡವರು ರಕ್ತದ ಮಡುವಿನಲ್ಲಿ ಬಿದ್ದು ನರಳಾಡುತ್ತಿದ್ದ ದೃಶ್ಯ ಘೋರವಾಗಿತ್ತು. ನಗರ ಪೊಲೀಸರು ಹಾಗೂ ಮೈಸೂರು ಮಹಾನಗರ ಪಾಲಿಕೆಯ ನಿರ್ಲಕ್ಷ್ಯದಿಂದಲೇ ಇಂತಹದೊಂದು ದುರಂತ ಸಂಭವಿಸಿದೆ ಎಂಬುದು ಸಾರ್ವಜನಿಕರ ದೂರು. ಮೈಸೂರಿನಲ್ಲಿ ಅಪರಾಧ–ಅನಾಹುತಗಳ ಸರಣಿ ಮುಂದುವರೆದಿದ್ದು, ಇದಕ್ಕೆ ಆಡಳಿತ ವೈಫಲ್ಯವೇ ಕಾರಣ. ನಗರ ಪೊಲೀಸರು, ಮೈಸೂರು ಮಹಾನಗರ ಪಾಲಿಕೆ ಇದೇ ರೀತಿ ನಿದ್ರಾವಸ್ಥೆಯಲ್ಲಿದ್ದರೆ, ಇಂತಹ ಅವಘಡಗಳು ನಿರಂತರವಾಗಿ ನಡೆಯುವುದರಲ್ಲಿ ಯಾವುದೇ ಸಂದೇಹವಿಲ್ಲ ಎಂದು ಘಟನಾ ಸ್ಥಳದಲ್ಲಿದ್ದ ಆತಂಕಿತ ಜನ ದೂರಿದ್ದಾರೆ.

ಕ್ರಿಸ್‌ಮಸ್ ಹಿನ್ನೆಲೆಯಲ್ಲಿ ಗುರುವಾರ ನಗರದಲ್ಲಿ ಭಾರೀ ಜನಸಂದಣಿ, ವಾಹನ ದಟ್ಟಣೆ ಇತ್ತು. ಅಂತೆಯೇ ಮಾಗಿ ಉತ್ಸವದ ಫಲಪುಷ್ಪ ಪ್ರದರ್ಶನ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ ಇದ್ದ ಕಾರಣ ಅರಮನೆ ಆವರಣದಲ್ಲಿ ಜನ ಕಿಕ್ಕಿರಿದು ತುಂಬಿದ್ದರು. ಮತ್ತೊಂದೆಡೆ ದಸರಾ ವಸ್ತುಪ್ರದರ್ಶನಕ್ಕೂ ಭಾರೀ ಜನ ಲಗ್ಗೆಯಿಟ್ಟಿದ್ದರು. ಇಂತಹ ಸನ್ನಿವೇಶದಲ್ಲಿ ಸುರಕ್ಷಿತ ಕ್ರಮ ವಹಿಸಬೇಕಿತ್ತಲ್ಲವೇ? ಎಂದು ಘಟನಾ ಸ್ಥಳದಲ್ಲಿದ್ದ ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದರು.

ಸಾರ್ವಜನಿಕ ಸ್ಥಳಗಳಲ್ಲಿನ ವ್ಯಾಪಾರ–ವಹಿವಾಟು, ಚಟುವಟಿಕೆಗಳು ಸುರಕ್ಷಿತ ಕ್ರಮದಲ್ಲಿ ನಡೆಯುತ್ತಿದೆಯೇ ಎಂಬ ಮೇಲ್ವಿಚಾರಣೆ ಮಾಡುವ ಪರಿಜ್ಞಾನ ನಮ್ಮ ಪಾಲಿಕೆ ಅಧಿಕಾರಿಗಳಿಗೆ ಇಲ್ಲವೇ? ನಗರದಲ್ಲಿ ನಾಯಿಕೊಡೆಗಳಂತೆ ಫಾಸ್ಟ್‌ಫುಡ್ ವಹಿವಾಟು ತಲೆ ಎತ್ತುತ್ತಿದ್ದು, ಇಲ್ಲಿ ಬಳಕೆಯಾಗುವ ಸಿಲಿಂಡರ್‌ಗಳು ಸುರಕ್ಷಿತವೇ? ಇಲ್ಲಿ ತಯಾರಿಸುವ ಆಹಾರ ಸೇವನೆಗೆ ಅರ್ಹವೇ? ಹಾಗೂ ಸ್ವಚ್ಛತೆ ಕಾಯ್ದುಕೊಂಡಿದ್ದಾರೆಯೇ? ■ 6ನೇ ಪುಟಕ್ಕೆ

ಚಿತ್ರದುರ್ಗ ಬಳಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಘೋರ ದುರಂತ

ಬಸ್‌ಗೆ ಲಾರಿ ಡಿಕ್ಕಿಯಾಗಿ ಆರು ಮಂದಿ ಸಜೀವ ದಹನ

● ರಸ್ತೆ ವಿಭಜಕ ಹಾರಿ ಪಕ್ಕದ ಪಥದಲ್ಲಿ ಸಾಗುತ್ತಿದ್ದ ಬಸ್‌ಗೆ ಲಾರಿ ಡಿಕ್ಕಿ; ಐವರು ಬಸ್ ಪ್ರಯಾಣಿಕರು, ಲಾರಿ ಚಾಲಕ ಸಾವು ● ನಿದ್ರೆಯಲ್ಲಿದ್ದ ಪ್ರಯಾಣಿಕರು; ಲಾರಿ ಚಾಲಕನ ನಿರ್ಲಕ್ಷ್ಯವೇ ದುರಂತಕ್ಕೆ ಕಾರಣ ಆರೋಪ

ಬೆಂಗಳೂರು, ಡಿ.25(ಕೆಎಂಶಿ)– ಚಿತ್ರದುರ್ಗ ಜಿಲ್ಲೆ ಹಿರಿಯೂರು ತಾಲೂಕಿನ ಗೊರ್ಲತ್ತು ಕ್ರಾಸ್ ಬಳಿ ರಾಷ್ಟ್ರೀಯ ಹೆದ್ದಾರಿ 48ರಲ್ಲಿ ಇಂದು ಬೆಳಗಿನ ಜಾವ ಬೆಂಗಳೂರಿನಿಂದ ಗೋಕರ್ಣಕ್ಕೆ ತೆರಳುತ್ತಿದ್ದ ಖಾಸಗಿ ಬಸ್ ಹಾಗೂ ಕಂಟೈನರ್ ಲಾರಿ ನಡುವೆ ಸಂಭವಿಸಿದ ಭೀಕರ ಅಪಘಾತದಲ್ಲಿ 6 ಮಂದಿ ಸಜೀವ ದಹನವಾಗಿ, ಅನೇಕರು ಗಾಯಗೊಂಡಿದ್ದಾರೆ. ಇವರಲ್ಲಿ ಐವರು ಬಸ್ ಪ್ರಯಾಣಿಕರು ಹಾಗೂ ಲಾರಿ ಚಾಲಕ ಸೇರಿದ್ದಾನೆ.



ಚಿತ್ರದುರ್ಗ ಬಳಿ ಅಪಘಾತದ ಬಳಿಕ ಎರಡೂ ವಾಹನ ಹೊತ್ತಿ ಉರಿಯುತ್ತಿರುವುದು.

ಕಂಟೈನರ್ ಲಾರಿ ರಸ್ತೆ ವಿಭಜಕ ಹಾರಿ ಬಂದು ಎದುರು ಬದಿಯಿಂದ ಬರುತ್ತಿದ್ದ ಸ್ಲೀಪರ್ ಬಸ್‌ಗೆ ಡಿಕ್ಕಿ ಹೊಡೆದಿದೆ, ಡಿಕ್ಕಿ ಸಂಭವಿಸುತ್ತಿದ್ದಂತೆ ಬಸ್‌ಗೆ ಬೆಂಕಿ ಹೊತ್ತಿಕೊಂಡಿದ್ದು, ಪ್ರಯಾಣಿಕರು ನಿದ್ರೆಯಲ್ಲಿ ಇದ್ದಿದ್ದರಿಂದ ಹೆಚ್ಚಿನ ಪ್ರಾಣಾಪಾಯ ಉಂಟಾಗಿದೆ.

ಬೆಂಕಿ ಹೊತ್ತಿಕೊಳ್ಳುತ್ತಿದ್ದಂತೆ ಬಸ್ ಚಾಲಕ ಮತ್ತು ನಿರ್ವಾಹಕ ಹೊರಗೆ ಜಿಗಿದು ಪ್ರಾಣಾಪಾಯದಿಂದ ಪಾರಾಗಿದ್ದು, ಲಾರಿ ಚಾಲಕ ಘಟನಾ ಸ್ಥಳದಲ್ಲೇ ಮೃತಪಟ್ಟಿದ್ದಾನೆ. ಬಸ್‌ನಲ್ಲಿ 14 ಮಹಿಳೆಯರು ಹಾಗೂ 15 ಪುರುಷರು ಪ್ರಯಾಣಿಸುತ್ತಿದ್ದರು ಎಂಬ ಮಾಹಿತಿ ಇದೆ ಲಾರಿ ಚಾಲಕನ ನಿರ್ಲಕ್ಷ್ಯವೇ ದುರಂತಕ್ಕೆ ಕಾರಣ ■ 6ನೇ ಪುಟಕ್ಕೆ

ಚಾಮರಾಜನಗರ ಸೇರಿ 15 ಜಿಲ್ಲೆಗೆ ಮೆಮು ರೈಲು ಅನುಕೂಲ

ಬೆಂಗಳೂರು, ಡಿ.25– ನೈರುತ್ಯ ರೈಲ್ವೆ, ಹೊಸ ವರ್ಷದ ಉಡುಗೊರೆಯಾಗಿ 10 ಹೊಸ ಮೆಮು ರೈಲು ಸಿಗಲಿದೆ. ಈ ಬಗ್ಗೆ ಕೇಂದ್ರ ಸಚಿವರ ಜತೆ ರಾಜ್ಯದ ಸಚಿವರು, ಸಂಸದರು ಮಾತುಕತೆ ನಡೆಸಿದ್ದಾರೆ. ಶೀಘ್ರದಲ್ಲಿಯೇ ಬಹು ದಿನಗಳ ಬೇಡಿಕೆಯಾಗಿದ್ದ ಮೆಮು ರೈಲುಗಳ ಸಂಚಾರವನ್ನು ಚಾಮರಾಜನಗರ ಜಿಲ್ಲೆ ಸೇರಿದಂತೆ 15 ಜಿಲ್ಲೆಗಳಿಗೆ ವಿಸ್ತರಿಸಲು ರೈಲ್ವೇ ಇಲಾಖೆ ಈಗ ಮಹತ್ವದ ನಿರ್ಧಾರವನ್ನು ಕೈಗೊಳ್ಳುತ್ತಿದೆ.


ಫೈಲ್ ಚಿತ್ರ

ಹೊಸ ರೈಲುಗಳಿಂದ ಉತ್ತರ ಕರ್ನಾಟಕ ಹಾಗೂ ಹಳೇ ಮೈಸೂರು ಭಾಗದ ಪ್ರಯಾಣಿಕರಿಗೆ ದೊಡ್ಡ ಮಟ್ಟದ ಅನುಕೂಲವನ್ನು ಕಲ್ಪಿಸಲಿದೆ.

ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಅವರು ಇತ್ತೀಚೆಗೆ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅವರನ್ನು ಭೇಟಿ ಮಾಡಿ, ಈ ಭಾಗದ ರೈಲ್ವೇ ಸಮಸ್ಯೆಗಳ ಬಗ್ಗೆ ಸುದೀರ್ಘ ಚರ್ಚೆ ನಡೆಸಿದ್ದರು. ಇದೇ ವೇಳೆ ಮೆಮು ರೈಲುಗಳ ಬಗ್ಗೆಯೂ ಪ್ರಸ್ತಾಪಿಸಲಾಗಿದೆ. ವಿಶೇಷವಾಗಿ ಸಣ್ಣ ನಿಲ್ದಾಣಗಳಲ್ಲಿ ಎಕ್ಸ್‌ಪ್ರೆಸ್ ರೈಲುಗಳು ನಿಲುಗಡೆ ನೀಡುವುದಿಲ್ಲ ಎಂಬ ದೂರಿನ ಹಿನ್ನೆಲೆಯಲ್ಲಿ ■ 6ನೇ ಪುಟಕ್ಕೆ

ಮಕ್ಕಳ ಸುರಕ್ಷತೆ ದೃಷ್ಟಿಯಿಂದ ಶಿಕ್ಷಣ ಇಲಾಖೆ ಮಹತ್ವದ ನಿರ್ಧಾರ

ಸರ್ಕಾರಿ ಬಸ್‌ಗಳಲ್ಲೇ ಶಾಲಾ ಶೈಕ್ಷಣಿಕ ಪ್ರವಾಸ; ಕೆಎಸ್‌ಆರ್‌ಟಿಸಿಗೆ ಶುಕ್ರದೆಸೆ

ಮೈಸೂರು, ಡಿ.25– ಮೈಸೂರಿನ ಶಾಲೆಯೊಂದರ ವಿದ್ಯಾರ್ಥಿಗಳನ್ನು ಪ್ರವಾಸಕ್ಕೆ ಕರೆದೊಯ್ದಿದ್ದ ಖಾಸಗಿ ಬಸ್ ಹೊನ್ನಾವರದ ಬಳಿ ಅಪಘಾತಕ್ಕೀಡಾದ ಹಿನ್ನೆಲೆಯಲ್ಲಿ ಸಾರಿಗೆ ಸಂಸ್ಥೆ ಬಸ್‌ಗಳಲ್ಲೇ ಪ್ರವಾಸಕ್ಕೆ ತೆರಳಬೇಕೆಂಬ ನಿಯಮ ಪಾಲನೆಗೆ ಶಿಕ್ಷಣ ಇಲಾಖೆ ಸೂಚಿಸಿರುವ ಪರಿಣಾಮ ಸಾರಿಗೆ ಸಂಸ್ಥೆ ಬಸ್‌ಗಳ ಬೇಡಿಕೆ ಗಣನೀಯವಾಗಿ ಹೆಚ್ಚಿದೆ.



ನಗರದ ತರಳಬಾಳು ವಿದ್ಯಾಸಂಸ್ಥೆ ವಿದ್ಯಾರ್ಥಿಗಳು ಪ್ರವಾಸಕ್ಕೆ ತೆರಳಿದ್ದ ಖಾಸಗಿ ಬಸ್, ನ.30ರಂದು ಹೊನ್ನಾವರದ ಬಳಿ ಅಪಘಾತಕ್ಕೀಡಾಗಿ ಓರ್ವ ವಿದ್ಯಾರ್ಥಿ ಸಾವನ್ನಪ್ಪಿ, ಶಿಕ್ಷಕರು ಹಾಗೂ ಮಕ್ಕಳು ಸೇರಿ 40 ಮಂದಿ ಗಾಯಗೊಂಡಿದ್ದರು. ಈ ಘಟನೆ ಬಳಿಕ ಎಚ್ಚೆತ್ತ ಸಾರ್ವಜನಿಕ ಶಿಕ್ಷಣ ಇಲಾಖೆ, ಇನ್ನು ಮುಂದೆ ಸಾರಿಗೆ ಸಂಸ್ಥೆ ಬಸ್‌ಗಳಲ್ಲೇ ಶಾಲಾ ಪ್ರವಾಸ ಕೈಗೊಳ್ಳಬೇಕೆಂಬ ನಿಯಮವನ್ನು ಎಲ್ಲಾ ಶಾಲೆಗಳು ಪಾಲಿಸಬೇಕೆಂದು ಕಟ್ಟುನಿಟ್ಟಿನ ಸೂಚನೆ ನೀಡಿದ್ದರಿಂದ ಸಾರಿಗೆ ಸಂಸ್ಥೆ ಬಸ್‌ಗಳ ಬೇಡಿಕೆ ಸುಮಾರು ಶೇ.15ರಷ್ಟು ಹೆಚ್ಚಾಗಿದೆ.

ಇದರಿಂದ ಸಾರಿಗೆ ಸಂಸ್ಥೆಗೆ ಶುಕ್ರದೆಸೆ ಶುರುವಾಗಿದೆಯಾದರೂ ಪ್ರವಾಸಕ್ಕೆ ಬಸ್ ಪೂರೈಸುವುದು ಸವಾಲಾಗಿ ಪರಿಣಮಿಸಿದೆ. ಪ್ರಸಕ್ತ ಸಾಲಿನ ಶೈಕ್ಷಣಿಕ ಪ್ರವಾಸದ ಅವಧಿ ಡಿಸೆಂಬರ್‌ಗೆ ಮುಕ್ತಾಯವಾಗಲಿದ್ದು, ಅಷ್ಟರೊಳಗೆ ಪ್ರವಾಸ ಮುಗಿಸಬೇಕು. ಇದರಿಂದ ಏಕಕಾಲಕ್ಕೆ ಅಧಿಕ ಸಂಖ್ಯೆಯ ಬಸ್‌ಗಳಿಗೆ ಬೇಡಿಕೆ ಬರುತ್ತಿದೆ. ಸದ್ಯ ನಗರ ಸೇರಿದಂತೆ ಜಿಲ್ಲೆಯಲ್ಲಿ 1,250 ಬಸ್‌ಗಳಿದ್ದು, ನಿಗದಿತ ಮಾರ್ಗ ಕಾರ್ಯಾಚರಣೆ ಜೊತೆಗೆ ಪ್ರವಾಸಕ್ಕೆ ಬಸ್‌ಗಳನ್ನು ಹೊಂದಿಸಬೇಕಿದೆ. ಅನಿವಾರ್ಯವಾದಾಗ ಕೆಲವೆಡೆ ನಿಗದಿತ ರೂಟ್‌ಗಳನ್ನು ಕಡಿತಗೊಳಿಸಿ, ಬಸ್‌ಗಳನ್ನು ಪೂರೈಸಲು ಅವಕಾಶವಿದೆ ಎನ್ನುತ್ತಾರೆ ಕೆಎಸ್‌ಆರ್‌ಟಿಸಿ ಅಧಿಕಾರಿಗಳು. ಮೊದಲಿನಿಂದಲೂ ಸರ್ಕಾರಿ ಶಾಲೆ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರವಾಸಕ್ಕೆ ಸಾರಿಗೆ ಸಂಸ್ಥೆ ಬಸ್‌ಗಳನ್ನೇ ಬಳಸಲಾಗುತ್ತಿದೆ. ಆದರೆ, ಖಾಸಗಿ ಶಾಲೆಗಳ ಆಡಳಿತ ಮಂಡಳಿಯವರು ಖಾಸಗಿ ಬಸ್‌ಗಳಲ್ಲಿ ಪ್ರವಾಸ ಆಯೋಜಿಸುತ್ತಾರೆ. ಮೈಸೂರಿನ ಶಾಲೆಯೊಂದರ ಮಕ್ಕಳು ಪ್ರವಾಸಕ್ಕೆ ತೆರಳಿದ್ದ ಖಾಸಗಿ ಬಸ್ ಅಪಘಾತಕ್ಕೀಡಾದ ನಂತರ ಶಿಕ್ಷಣ ಇಲಾಖೆಯು ಪ್ರವಾಸಿ ಮಾರ್ಗಸೂಚಿಯನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ನಿರ್ದೇಶನ ನೀಡಿದೆ. ಇದರಿಂದ ಖಾಸಗಿ ಶಾಲೆಯವರು ಶೈಕ್ಷಣಿಕ ಪ್ರವಾಸಕ್ಕೆ ಸಾರಿಗೆ ಸಂಸ್ಥೆ ಬಸ್ ಬುಕ್ಕಿಂಗ್‌ಗಾಗಿ ಕಾಯುತ್ತಿದ್ದಾರೆ.

ಕೆಲ ಸಂಸ್ಥೆಗಳು ಹಿಂದೇಟು: ಸರ್ಕಾರಿ ಬಸ್‌ಗಳಲ್ಲಿ ಮಕ್ಕಳನ್ನು ಪ್ರವಾಸಕ್ಕೆ ಕರೆದೊಯ್ಯಲು ಪೋಷಕರು ಒಪ್ಪುವುದಿಲ್ಲ ಎಂಬ ನೆಪವೊಡ್ಡಿ ಈಗಾಗಲೇ ಶೈಕ್ಷಣಿಕ ಪ್ರವಾಸವನ್ನು ಆಯೋಜಿಸಿದ್ದ ಕೆಲವು ಖಾಸಗಿ ಶಾಲೆಗಳ ಆಡಳಿತ ಮಂಡಳಿಯವರು ಪ್ರವಾಸವನ್ನೇ ರದ್ದುಪಡಿಸಿದ್ದಾರೆ. ಇದರಿಂದ ವಿದ್ಯಾರ್ಥಿಗಳಿಗೆ ■ 6ನೇ ಪುಟಕ್ಕೆ

ಸಿಡಬ್ಲ್ಯುಸಿ ಸಭೆಯಲ್ಲಿ ಪಾಲ್ಗೊಳ್ಳಲು ಇಂದು ದೆಹಲಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ

ಬೆಂಗಳೂರು, ಡಿ.25– ಕಾಂಗ್ರೆಸ್ ಕಾರ್ಯಕಾರಿ ಸಮಿತಿ (CWC) ಸಭೆಯಲ್ಲಿ ಭಾಗಿಯಾಗಲು ಸಿಎಂ ಸಿದ್ದರಾಮಯ್ಯ ನಾಳೆ ದೆಹಲಿಗೆ ತೆರಳಲಿದ್ದಾರೆ. ಡಿ.27ರಂದು ದೆಹಲಿಯ ಇಂದಿರಾ ಭವನದಲ್ಲಿ ಸಿಡಬ್ಲ್ಯುಸಿ ಸಭೆ ಆಯೋಜನೆಗೊಂಡಿದೆ. ಈ ■ 6ನೇ ಪುಟಕ್ಕೆ



ಪಕ್ಷ ಸಂಘಟನೆ, ಪಕ್ಷದ ಕಚೇರಿ ಕಸ ಗುಡಿಸಿದ್ದೇನೆ, ಬಾವುಟ ಕಟ್ಟಿದ್ದೇನೆ...

ನಾನೇನು ಸುಮ್ನೆ ಸ್ಟೇಜ್‌ಗೆ ಬಂದು ಭಾಷಣ ಮಾಡಿಕೊಂಡು ಹೋದವನಲ್ಲ...!

● ಡಿಸಿಎಂ ಡಿ.ಕೆ. ಶಿವಕುಮಾರ್ ಮಾರ್ಮಿಕ ನುಡಿ ● ನಾನು ಲೈಫ್ ಟೈಂ ಕಾರ್ಯಕರ್ತ

ಬೆಂಗಳೂರು, ಡಿ.25(ಕೆಎಂಶಿ)–ಪಕ್ಷ ಸಂಘಟನೆ ಮಾಡಿದ್ದೇನೆ, ಪಕ್ಷದ ಕಚೇರಿ ಕಸ ಗುಡಿಸಿದ್ದೇನೆ. ಪೋಸ್ಟರ್ ಅಂಟಿಸಿದ್ದೇನೆ. ಬಾವುಟ ಹಿಡಿದಿದ್ದೇನೆ. ನಾನು ಬೇರೆಯವರಂತೆ ಸಿದ್ಧಗೊಂಡ ವೇದಿಕೆ ಮೇಲೆ ಬಂದು ಭಾಷಣ ಮಾಡಿಲ್ಲ ಎಂದು ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪರೋಕ್ಷ ಟಾಂಗ್ ಕೊಟ್ಟಿದ್ದಾರೆ.

ರಾಷ್ಟ್ರೀಯ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಭೇಟಿ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಶಿವಕುಮಾರ್, ನಾನು ಲೈಫ್ ಟೈಮ್ ಕಾರ್ಯಕರ್ತ, ಉಪಮುಖ್ಯಮಂತ್ರಿ ಆದರೂ ಪಕ್ಷದ ಕಚೇರಿ ಕಸ ಗುಡಿಸಿದ್ದೇನೆ. ನಾನೇನು ಸಿದ್ಧಪಡಿಸಿದ ವೇದಿಕೆಗೆ ಬಂದು ಭಾಷಣ ಮಾಡಿಕೊಂಡು ಹೋಗುವುದಿಲ್ಲ. ಕಳೆದ ನಾಲ್ಕು ದಶಕಗಳಿಂದ ಕಾಂಗ್ರೆಸ್‌ಗಾಗಿ ತಳಮಟ್ಟದಿಂದ ದುಡಿದಿದ್ದೇನೆ. ಈಗಲೂ ದುಡಿಯುತ್ತಿದ್ದೇನೆ. ■ 6ನೇ ಪುಟಕ್ಕೆ

ಯಾವ ನಾಯಕರ ಭೇಟಿ ಮಾಡಲ್ಲ; ನನಗೆ ತೋಚಿದ್ದನ್ನ ಮಾಡ್ತೇನೆ...!


ಗುರುವಾರ ಡಿಸಿಎಂ ಡಿ.ಕೆ. ಶಿವಕುಮಾರ್ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಭೇಟಿಯಾದರು.

■ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಬಳಿ ಡಿಸಿಎಂ ಡಿಕೆಶಿ ಖಡಕ್ ಮಾತು ■ ಪಕ್ಷಕ್ಕಾಗಿ ಜೈಲಿಗೆ ಹೋಗಿ ಬಂದೆ; ಈಗಲೂ ಕಾನೂನು ಇಕ್ಕಳದಲ್ಲಿದ್ದೇನೆ ■ ಕೊಟ್ಟ ಮಾತಿಗೆ ತಕ್ಕಂತೆ ನಡೆದುಕೊಳ್ಳದಿದ್ದರೆ ಹೇಗೆ?

ಬೆಂಗಳೂರು, ಡಿ.25(ಕೆಎಂಶಿ)– ಅಧಿಕಾರ ಹಂಚಿಕೆಗೆ ಸಂಬಂಧಿಸಿದಂತೆ ನಾನು ಇನ್ನು ಯಾವ ನಾಯಕರನ್ನೂ ಭೇಟಿ ಮಾಡುವುದಿಲ್ಲ. ನನಗೆ ತೋಚಿದ್ದನ್ನು ಮಾಡುತ್ತೇನೆ. ಏನಾದರೂ ಆದರೆ, ನನ್ನನ್ನು ಹೊಣೆಗಾರನನ್ನಾಗಿ ಮಾಡಬೇಡಿ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಖಡಕ್ಕಾಗಿ ತಿಳಿಸಿದ್ದಾರೆ. ಪಕ್ಷಕ್ಕೆ ದುಡಿದವರಿಗೆ ಬೆಲೆ ಇಲ್ಲ ಎನ್ನುವುದಾದರೆ, ಮುಂದೆ ಸಂಘಟನೆ ಮಾಡಲು ಯಾರು ಬರುತ್ತಾರೆ. ನಾಯಕರಿಗಾಗಿ, ಪಕ್ಷಕ್ಕಾಗಿ ಜೈಲಿಗೆ ಹೋಗಿ ಬಂದೆ. ಈಗಲೂ ಕಾನೂನು ಇಕ್ಕಳದಲ್ಲಿ ಸಿಲುಕಿದ್ದೇನೆ. ■ 6ನೇ ಪುಟಕ್ಕೆ

ಮದ್ಯದ ಅಂಗಡಿಗಳಿಗೆ ಪರವಾನಗಿ ನೆಪದಲ್ಲಿ ಕೋಟಿ ಕೋಟಿ ಸುಲಿಗೆ

ರಾಜ್ಯ ಸರ್ಕಾರದ ವಿರುದ್ಧ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಆರೋಪ

ದಾವಣಗೆರೆ, ಡಿ.25– ರಾಜ್ಯ ಸರ್ಕಾರವು ಗ್ಯಾರಂಟಿಗಳಿಗೆ ಹಣ ಹೊಂದಿಸಿಕೊಳ್ಳಲು, ಖಾಲಿ ಆಗಿರುವ ಖಜಾನೆಯನ್ನು ಭರ್ತಿ ಮಾಡಿಕೊಳ್ಳಲು ಮದ್ಯದ ಅಂಗಡಿಗಳಿಗೆ ಪರವಾನಗಿ ನೀಡುವ ನೆಪದಲ್ಲಿ ಕೋಟಿ ಕೋಟಿ ರೂ ಸುಲಿಗೆ ಮಾಡುತ್ತಿದೆ ಎಂದು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಗಂಭೀರ ಆರೋಪ ಮಾಡಿದ್ದಾರೆ.



ದಾವಣಗೆರೆಯಲ್ಲಿ ಗುರುವಾರ ದಿವಂಗತ ಶಾಮನೂರು ಶಿವಶಂಕರಪ್ಪ ಅವರ ಸ್ಮೃತಿ ಸ್ಥಳಕ್ಕೆ ತೆರಳಿ ನಮನ ಸಲ್ಲಿಸಿದ ನಂತರ ಕೇಂದ್ರ ಸಚಿವರು ಮಾಧ್ಯಮಗಳ ಜತೆ ಮಾತನಾಡಿದರು. ಮದ್ಯದಂಗಡಿ ಪರವಾನಗಿ ಒಂದಕ್ಕೆ 1.95 ಕೋಟಿ ದರವನ್ನು ರಾಜ್ಯ ಸರ್ಕಾರ ನಿಗದಿ ಮಾಡಿದೆ. ಇದು ಲೂಟಿ ಅಲ್ಲದೆ ಮತ್ತೇನು? ಜನರಿಗೆ ಇನ್ನು ದೊಡ್ಡ ಪ್ರಮಾಣದಲ್ಲಿ ಕುಡಿತದ ಚಟ ಹತ್ತಿಸಲು ಸರ್ಕಾರವೇ ಉತ್ತೇಜನ ನೀಡುತ್ತಿದೆ. ಇದೇ ರೀತಿ ಪ್ರತಿಯೊಂದು ಇಲಾಖೆಯನ್ನು ಲೂಟಿ ಮಾಡುತ್ತಿದೆ ಎಂದು ಕುಮಾರಸ್ವಾಮಿ ಆರೋಪ ಮಾಡಿದರು.

ಪರಿಶಿಷ್ಟ ಜಾತಿ ಉಪ ಯೋಜನೆ (ಎಸ್‌ಸಿಎಸ್‌ಪಿ) ಹಾಗೂ ಪರಿಶಿಷ್ಟ ಪಂಗಡ ಉಪಯೋಜನೆ (ಟಿಎಸ್‌ಪಿ) ಸೇರಿದಂತೆ ವಿವಿಧ ಯೋಜನೆಗಳ ಹಣ, ಅನುದಾನವನ್ನು ರಾಜ್ಯ ಸರ್ಕಾರ ದುರುಪಯೋಗ ಮಾಡಿಕೊಳ್ಳುತ್ತಿದೆ ಎಷ್ಟು ಸಾಧ್ಯವೋ ಅಷ್ಟರ ಮಟ್ಟಿಗೆ ರಾಜ್ಯದ ಖಜಾನೆಯನ್ನು ಕೊಳ್ಳೆ ಹೊಡೆಯಲಾಗುತ್ತಿದೆ. ಮದ್ಯದಂಗಡಿ ಹರಾಜು ಮೂಲಕ ಸುಲಿಗೆ ನಡೆಸುವುದು ರಾಜ್ಯ ಸರ್ಕಾರವು ಜನತೆಗೆ ನೀಡುತ್ತಿರುವ ಹೊಸ ವರ್ಷದ ಕೊಡುಗೆ ಎಂದು ಲೇವಡಿ ಮಾಡಿದರು.

ರಾಜ್ಯದಲ್ಲಿ ಅಭಿವೃದ್ಧಿ ಪಾತಾಳಕ್ಕೆ ಬಿದ್ದಿದೆ. ಕೇವಲ ಗ್ಯಾರಂಟಿ ಎಂದು ಹೇಳಿಕೊಂಡು ಎರಡೂವರೆ ವರ್ಷ ಆಡಳಿತ ನಡೆಸಿದ್ದಾರೆ. ರಾಜ್ಯದ ರಸ್ತೆಗಳನ್ನು ನೋಡಿದರೆ ಇವರ ಆಡಳಿತದ ಹಣೆಬರಹ ಗೊತ್ತಾಗುತ್ತದೆ

ನಕ್ಕರೆ ಅದೇ ಸ್ವರ್ಗ

ಹೆಂಡತಿ : ರೀ ನೀವು ಯಾಕೆ ಕುಡೀತಿರಿ. ಸುಮ್ನೆ ದುಡ್ಡು ಹಾಳು
ಗಂಡ : ನೀನು ಯಾಕೆ ಮೇಕಪ್ ಮಾಡಿಕೊಳ್ತೀಯಾ? ದುಡ್ಡು ಹಾಳು!
ಹೆಂಡತಿ : ನಿಮಗೆ ಚೆನ್ನಾಗಿ ಕಾಣಿಸ್ಲಿ ಅಂತ ಮೇಕಪ್ ಮಾಡ್ಕೋತಿನಿ!
ಗಂಡ : ನೀನು ಚೆನ್ನಾಗಿ ಕಾಣಿಸ್ಲಿ ಅಂತ ನಾನು ಕುಡೀತಿನಿ!

ಮೈಸೂರು ಮಿತ್ರ

ಶುಕ್ರವಾರ, 26 ಡಿಸೆಂಬರ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*


ಅಮೃತ ವಾಹಿನಿ..........

ಈ ಜಗತ್ತಿನಲ್ಲಿ ಖುಷಿಯಿಂದ ನಕ್ಕವರಿಗಿಂತ
ವಿಧಿಯಿಲ್ಲದೆ ನಕ್ಕವರೇ ಹೆಚ್ಚು.

ವೇದ ಸುಳ್ಳಾದರೂ { ಅಡಿಕೆಗೆ ಹೋದ ಮಾನ
ಗಾದೆ ಸುಳ್ಳಾಗದು { ಆನೆ ಕೊಟ್ಟರೂ ಬರೋಲ್ಲ.

ನಿಮ್ಮ ಪತ್ರಗಳು

ಕನ್ನಡದ ಏಕಮಾತ್ರ ಶ್ರೇಷ್ಠ ಪ್ರತಿನಿಧಿ ಕುವೆಂಪು



ಮಾನ್ಯರೆ,

'ಮೈಸೂರು ಮಿತ್ರ' ಪತ್ರಿಕೆಯ ಸಂಸ್ಕೃತಿ ಚಿಂತನಾ ಅಂಕಣದಲ್ಲಿ ನೂರಾರು ಸಾಹಿತಿಗಳು ಕನ್ನಡ ನಾಡಿನ ಮನೆ ಮನೆಯಲ್ಲಿ ಸ್ಥಾನವನ್ನು ಗಳಿಸಿದ್ದರೂ ಒಬ್ಬೊಬ್ಬರ ಕೊಡುಗೆಯೂ ಚಿರಸ್ಮರಣೀಯ ಹೌದಾದರೂ ಕನ್ನಡದ ಏಕಮಾತ್ರ ಶ್ರೇಷ್ಠ ಪ್ರತಿನಿಧಿ ಕುವೆಂಪು ಎಂದು ಡಾ.ಎಚ್.ಕೆ. ನಾಗರಾಜರಾವ್ ಹೇಳಿರುವುದು ಶ್ಲಾಘನೀಯ. ಕೆಲವರು ಕಾದಂಬರಿಗಳನ್ನು ಬರೆದರೆ; ಭಾವಗೀತೆಯನ್ನು, ನಾಟಕವನ್ನು ರಚಿಸಲಾಗಲಿಲ್ಲ. ಭಾವಗೀತೆಗಳನ್ನು ಬರೆದವರು ಮಹಾಕಾವ್ಯವನ್ನು ಬರೆಯಲಿಲ್ಲ. ಮಹಾಕಾವ್ಯವನ್ನು ಬರೆದವರು ವಿಮರ್ಶೆಗೆ ಕೈ ಹಾಕಲಿಲ್ಲ. ಈ ಎಲ್ಲಾ ಪ್ರಕಾರಗಳಲ್ಲಿ ರಚನೆಗಳನ್ನು ಮಾಡಿ ಸೈಎನಿಸಿಕೊಂಡವರು ಕುವೆಂಪು ಅವರು ಒಬ್ಬರೇ ಎಂದು ಹೇಳಿರುವುದು ಸ್ವಾಗತಾರ್ಹ. ಅಯೋಧ್ಯೆ, ದಂಡಕಾರಣ್ಯ, ಲಂಕೆಯನ್ನು ರಾಮಾಯಣ ದರ್ಶನದಲ್ಲಿ ತಮ್ಮ ಕಲ್ಪನೆಯ ಕಣ್ಣಿನಿಂದ ಕಂಡು ಚಿತ್ರಿಸಿದರೆ, ಮಲೆಗಳಲ್ಲಿ ಮದುಮಗಳು, ಕಾನೂರು ಹೆಗ್ಗಡತಿ ಸುಬ್ಬಮ್ಮ ಕಾದಂಬರಿಗಳನ್ನು ನೂರು ವರ್ಷಗಳ ಹಿಂದಿನ ಮಲೆನಾಡಿನ ಒತ್ತಾದ ಕಾಡು, ಪ್ರಕೃತಿ, ರಮ್ಯ, ರೌದ್ರರೂಪಗಳನ್ನು ಕಣ್ಣಾರೆ ಕಂಡು ಚಿತ್ರಿಸಿದ್ದಾರೆ ಎಂದು ಹೇಳಿರುವುದು ಮೆಚ್ಚುವಂತದ್ದು. ಕುವೆಂಪು ರಚಿಸಿದ ಗೀತೆಗಳಾದ ಯಾವ ಜನ್ಮದ ಮೈತ್ರಿ ಈ ಜನ್ಮದಲ್ಲಿ, ದೋಣಿ ಸಾಗಲಿ ಮುಂದೆ ಹೋಗಲಿ ಮತ್ತೇ ಮತ್ತೇ ಕೇಳಬೇಕು ಎನ್ನಿಸುತ್ತದೆ. ಪಕ್ಷಿಕಾಶಿಯಲ್ಲಿ ಕವಿತಾ ವೈಭವ, ರೈತ ಗೀತೆ ಉಳುವಾ ಯೋಗಿಯ ನೋಡಲ್ಲಿ, ಜಯ ಭಾರತ ಜನನಿಯ ತನುಜಾತೆ ಜಯಹೇ ಕರ್ನಾಟಕ ಮಾತೆ ನಾಡ ಗೀತೆಯಲ್ಲಿ ಕನ್ನಡ ನಾಡಿನ ಮಹಿಮೆಯನ್ನೂ ಭಾರತ ಸಂಸ್ಕೃತಿಯ ವಿಶಾಲತೆಯನ್ನು ಮೈಗೂಡಿಸಿಕೊಂಡಿರುವುದು ಹೆಮ್ಮೆಪಡುವಂತದ್ದು. ವಿಶ್ವಮಾನವರಾಗುವಂತೆ ಕುವೆಂಪು ಅವರು ಕೊಟ್ಟ ದೊಡ್ಡ ಸಂದೇಶ ಪ್ರಸ್ತುತ ದಿನಗಳಲ್ಲಿ ಅತ್ಯಗತ್ಯ.

–ಬೆಸಗರಹಳ್ಳಿ ರವಿ ಪ್ರಸಾದ್, ಮೈಸೂರು.

ಹೊಸ ವರ್ಷ ಸಂಭ್ರಮಾಚರಣೆಗೆ ಕಟ್ಟೆಚ್ಚರ ಅಗತ್ಯ

ಮಾನ್ಯರೆ,

ಸಾಂಸ್ಕೃತಿಕ ನಗರ ಎಂದೇ ಪ್ರಸಿದ್ಧವಾಗಿರುವ ಮೈಸೂರಿನಲ್ಲೂ ಡಿಸೆಂಬರ್ ಕೊನೆಯ ದಿನದ ಮಧ್ಯ ರಾತ್ರಿಯಿಂದಲೂ ಜರುಗುವ ಹೊಸ ವರ್ಷದ ಸಂಭ್ರಮಾಚರಣೆಗೆ ಭದ್ರತೆ, ಕಟ್ಟೆಚ್ಚರ ವಹಿಸಬೇಕಾಗಿದೆ. ಬೆಂಗಳೂರಿನಂತಹ ಬೃಹತ್ ನಗರದಲ್ಲಿ ಹೊಸ ವರ್ಷದಂದು ಬಿಗಿ ಭದ್ರತೆಯನ್ನು ರಾಜ್ಯ ಪೊಲೀಸ್ ಇಲಾಖೆಯೂ ಹೇಗೆ ಕೊಡುತ್ತದೆಯೋ ಅದೇ ರೀತಿ ಮೈಸೂರು ನಗರದಲ್ಲೂ ಬಿಗಿ ಭದ್ರತೆ ಒದಗಿಸಬೇಕಾಗಿದೆ. ಏಕೆಂದರೆ ಬೃಹತ್ ನಗರಗಳ ಸಾಲಿನಲ್ಲಿ ಮೈಸೂರು ನಗರ ಕೂಡ ಸೇರುತ್ತದೆ. ಹೆಚ್ಚು ಹೆಚ್ಚು ಅಭಿವೃದ್ಧಿ ಹೊಂದುತ್ತಿರುವ ನಗರವಾಗಿದೆ. ಜನಸಂಖ್ಯೆಯಲ್ಲೂ ಏರಿಕೆಯಾಗುತ್ತಿದೆ. ಅಲ್ಲದೆ ತಮ್ಮ ಕೆಲಸ ಕಾರ್ಯನಿರ್ವಹಣೆಗೆ ಬೇರೆ ಬೇರೆ ಪ್ರದೇಶಗಳಿಂದ ಮೈಸೂರು ನಗರಕ್ಕೆ ಬಂದು ಸಾಕಷ್ಟು ಜನ ವಾಸ್ತವ್ಯ ಹೂಡಿರುವುದರಿಂದ ಇಂಥ ಒಂದು ಐತಿಹಾಸಿಕ ನಗರವಾಗಿರುವ ಮೈಸೂರಿನಲ್ಲೂ ಹೊಸ ವರ್ಷದ ಸಂಭ್ರಮಾಚರಣೆಯಲ್ಲಿ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಕಟ್ಟುನಿಟ್ಟಿನ ಕ್ರಮವನ್ನು ಒದಗಿಸಬೇಕೆಂದು ರಾಜ್ಯ ಪೊಲೀಸ್ ಇಲಾಖೆಗೆ ಈ ಮೂಲಕ ಮನವಿ.

–ಸಾಯಿ ಸಂದೇಶ್ ಬಿ.ಎಸ್., ಮೈಸೂರು

ರಸ್ತೆ ಜೊತೆಗೆ ಸಾರ್ವಜನಿಕ ಶೌಚಾಲಯ ಅಭಿವೃದ್ಧಿಯಾಗಲಿ



ಮಾನ್ಯರೆ,

ಚಾಮರಾಜನಗರ ಜಿಲ್ಲೆ ಗುಂಡ್ಲುಪೇಟೆ ಪಟ್ಟಣದ ವಾರ್ಡ್ 23 ರ ಹೊಸೂರು ಜನನಿಬಿಡ ಪ್ರದೇಶವಾಗಿದೆ. ಈ ರಸ್ತೆಯಲ್ಲಿ ನಡೆಯುತ್ತಿದ್ದ ಕಾಮಗಾರಿ ಸರಿಯಾದ ಸಮಯಕ್ಕೆ ಪೂರ್ಣಗೊಳ್ಳದೆ ಅರ್ಧಕ್ಕೆ ನಿಂತು ಹೋಗಿರುವ ಕಾರಣ ಸಾರ್ವಜನಿಕರಿಗೆ ತೊಂದರೆಯಾಗುತ್ತಿದೆ. ಜೊತೆಗೆ ಇಲ್ಲಿರುವ ಸಾರ್ವಜನಿಕ ಶೌಚಾಲಯವು ಬಳಕೆಯಾಗದೆ ಗಿಡಗಂಟಿಗಳು ಬೆಳೆದು ನಿಂತಿರುವ ಹಿನ್ನೆಲೆಯಲ್ಲಿ ಸೊಳ್ಳೆಗಳು, ವಿಷಜಂತುಗಳ ಆವಾಸ ಸ್ಥಾನವಾಗಿದೆ. ಇದರಿಂದ ರೋಗ ರುಜಿನಗಳು ಹರಡುವ ಭೀತಿಯುಂಟಾಗಿದೆ. ಆದ್ದರಿಂದ ಈ ವಿಷಯಕ್ಕೆ ಸಂಬಂಧಪಟ್ಟ ಗುಂಡ್ಲುಪೇಟೆ ಪಟ್ಟಣದ ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳು ಈ ಕೂಡಲೇ ಸಾರ್ವಜನಿಕರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಅಭಿವೃದ್ಧಿ ಪಡಿಸಲು ಮುಂದಾಗಬೇಕೆಂದು ಈ ಮೂಲಕ ಮನವಿ.

–ನಾಗೇಶ್, ಮಾನಸಗಂಗೋತ್ರಿ, ಮೈಸೂರು.

ಚಲನಚಿತ್ರ ರಂಗದಲ್ಲಿ ಏನಿದು ಗದ್ದಲ

ಮಾನ್ಯರೆ,

ಹಿಂದೆ 60ರ ದಶಕದ ಸಿನಿಮಾರಂಗದಲ್ಲಿ ಯಾವ ಗಲಾಟೆ ಇಲ್ಲದೆ ಚಿತ್ರರಂಗ ಸಾಗಿತ್ತು. ರಾಜಕುಮಾರ್ ಅವರ ಸಮಕಾಲಿನ ನಟರಾದ ಕಲ್ಯಾಣ್ ಕುಮಾರ್, ಶ್ರೀನಾಥ್, ನರಸಿಂಹರಾಜು, ದ್ವಾರಕೀಶ್, ರಾಜೇಶ್, ವಜ್ರಮುನಿ, ಅಶ್ವಥ್ ಹಲವಾರು ನಟರು ಆಳಿದ ಚಿತ್ರರಂಗ ಆ ದಿನ ಯಾವ ನಟರ ಗುಂಪುಗಳಾಗಿ ಬೇರ್ಪಟ್ಟಿರಲಿಲ್ಲ. ಆ ದಿನ ಯಾವ ನಟರ ಸಿನಿಮಾಗಳು ಗೆದ್ದರೂ ಎಲ್ಲರೂ ಒಂದೆಡೆ ಸೇರಿ ಸಂಭ್ರಮಿಸುತಿದ್ದರು. ಡಾ. ರಾಜಕುಮಾರ್ ಮಾಡಿದ ಸಿನಿಮಾಗಳೆಲ್ಲ 100 ದಿನದ ಮೇಲು ಓಡುತ್ತಿದ್ದವು. ಅಲ್ಲಿನ ಬೇರೆ ನಟರಿಗೆ ಯಾವ ದ್ವೇಷ ಇಲ್ಲದೆ ಒಂದೇ ಕುಟುಂಬದಂತಿದ್ದರು. ರಂಗಭೂಮಿ ಕಲಾವಿದರು ಗೌರವ ಕೊಡುತ್ತಿದ್ದರು. ಆಗ ಅಲ್ಲಿ ಸ್ನೇಹ, ಪ್ರೀತಿ, ವಿಶ್ವಾಸ ಎಲ್ಲೆಡೆ ಮನೆ ಮಾಡಿದ್ದು, ಯಾವುದೇ ಸಿನಿಮಾ ಗೆದ್ದರೂ ನಟ–ನಟಿಯರೆಲ್ಲ ಸೇರಿ ಸಂತೋಷಕೂಟದಲ್ಲಿ ಭಾಗಿಯಾಗುತ್ತಿದ್ದರು. ಆದರೆ, ಈಗ ಹಲವಾರು ನಟರ ಗುಂಪುಗಳು, ಒಬ್ಬರ ಕಂಡರೆ ಮತ್ತೊಬ್ಬರಿಗೆ ಆಗುವುದಿಲ್ಲ. ಸ್ವಾರ್ಥದಿಂದ ನನ್ನ ಸಿನಿಮಾ ಮಾತ್ರ ಗೆಲ್ಲಬೇಕು. ಬೇರೆಯವರ ಸಿನಿಮಾ ಗೆದ್ದರೆ ಅಸೂಯೆ ಬೆಳೆದು ಹೆಮ್ಮರವಾಗಿ ನಿಲ್ಲುತ್ತದೆ. ಈ ದ್ವೇಷ ಎಲ್ಲಾ ಕಡೆ ಹಬ್ಬುತ್ತದೆ. ಹೀಗೆ ಮುಂದುವರೆದರೆ ಸಿನಿಮಾ ರಂಗದ ಮೇಲೆ ಪರಿಣಾಮ ಬೀರು ತ್ತದೆ. ಯಾವುದೇ ನಟನ ಸಿನಿಮಾ ಚೆನ್ನಾಗಿದ್ದರೆ ಗೆಲ್ಲುತ್ತದೆ. ಜನರಿಗೆ ವಿಮರ್ಶೆ ಮಾಡುವ ತಿಳುವಳಿಕೆ ಬಂದಿದೆ. ಹೀಗೆ ಜಗಳ, ದ್ವೇಷ ಮಾಡಿ ನೆಚ್ಚಿನ ನಟರ ಅಭಿಮಾನಿಗಳ ಮನಸ್ಸನ್ನು ನೋಯಿಸಬೇಡಿ. ನಾವೆಲ್ಲರೂ ಒಂದೇ ಎನ್ನುವ ಭಾವನೆ ಮೂಡಲಿ. ಇದು ಬೆಳೆಯುತ್ತಾ ಹೋದರೆ ಸಿನಿಮಾ ರಂಗದ ಮೇಲು ಪರಿಣಾಮ ಬೀರುತ್ತದೆ.


–ಎಂ. ಎಸ್. ಉಷಾ ಪ್ರಕಾಶ್, ಲೇಖಕಿ ಹಾಗೂ ಕವಯಿತ್ರಿ, ಮೈಸೂರು.



ಸದ್ಗುರು
ಸಂಸ್ಥಾಪಕರು,
ಇಶಾ ಫೌಂಡೇಷನ್

ಅನುಭಾವದ ಚಿಂತನೆಗಳು

ಸೊರಗಿದ ಮನಸ್ಸು ಒಂದು ಶತ್ರು



"ನೀವು ನೆನೆದಂತೆ ಪ್ರಪಂಚ ನಡೆಯಬೇಕು, ಬೇರೆಯವರು ನೀವು ಹೇಳಿದಂತೆ ನಡೆಯಬೇಕು ಎಂದು ನಿರೀಕ್ಷಿಸುವ ನಿಮ್ಮ ಅಹಂಕಾರ ವ್ಯರ್ಥವಾದ ಒಂದು ಹೊರೆ. ಅದನ್ನು ಕಾಲಡಿಯಲ್ಲಿ ಹೊಸಕಿ ಹಾಕಿ ಮುಂದುವರಿಯದಿದ್ದರೆ ನೀವು ಇಡುವ ಪ್ರತಿಹೆಜ್ಜೆಯೂ ನೋವುಂಟು ಮಾಡುತ್ತದೆ. ಒಂದೊಂದು ತಿರುವಿನಲ್ಲಿಯೂ ಹೆದರಿಕೆಯುಂಟಾಗುತ್ತದೆ. ನಂಬಿಕೆ ಕಡಮೆಯಾಗುತ್ತಾ ಮನಸ್ಸು ಸೊರಗುತ್ತದೆ. ಮನಸ್ಸು ಸೊರಗಿದಾಗಲೆಲ್ಲಾ ಬೇರೆಯವ ರತ್ತ ಕೋಪಗೊಳ್ಳುವುದನ್ನು ನಿಲ್ಲಿಸಿ, ಅದಕ್ಕೆ ಕಾರಣ ನೀವೇ ಎಂಬುದನ್ನು ತಿಳಿದುಕೊಳ್ಳಿ.

ಉತ್ಸಾಹದಿಂದ ಸಾಲುಗಟ್ಟಿ ಹೋಗುವ ಇರುವೆಗಳನ್ನು ಗಮನಿಸಿ. ಅದರಲ್ಲಿ ಒಂದು ಇರುವೆಯ ದಾರಿಯಲ್ಲಿ ಸುಮ್ಮನೆ ಬೆರಳನ್ನು ಅಡ್ಡವಿರಿಸಿ ನೋಡಿ. ಅದು ನಿಲ್ಲುವುದಿಲ್ಲ. ಬೆರಳಿನ ಸುತ್ತಲೂ ಬರುತ್ತದೆ. ದಾರಿ ಎಲ್ಲಿದೆ ಎಂದು ಹುಡುಕಾಡುತ್ತದೆ. ಎಷ್ಟೇ ತಡೆಗಳನ್ನು ಇಟ್ಟರೂ ಹೇಗಾದರೂ ತನ್ನ ಪ್ರಯಾಣವನ್ನು ಮುಂದುವರಿಸುತ್ತದೆ. ಸಾಯುವವರೆಗೂ ಅದು ತನ್ನ ಉತ್ಸಾಹವನ್ನು ಕಡಮೆಗೊಳಿಸುವುದಿಲ್ಲ. ಹಾಗೆಯೇ ನಂಬಿಕೆಯನ್ನು ಸಹ ಬಿಡುವುದಿಲ್ಲ.

ಮಾನವನ ಸಂಕುಚಿತ ಮನಸ್ಸಿನಲ್ಲಿ ಮಾತ್ರ ಆಯಾಸ, ಅಸೂಯೆ, ಅಪನಂಬಿಕೆ ಇವೆಲ್ಲವೂ ನೆಲೆಯೂರಿ ನಿಂತಿವೆ. ಮನಸ್ಸನ್ನು ಸೊರಗುವಂತೆ ಮಾಡಿಕೊಳ್ಳುವವನು ಮನುಷ್ಯ ಮಾತ್ರ. ಇಂತಹ ಶತ್ರುವನ್ನು ಒಳಗೆ ಬಿಟ್ಟುಕೊಳ್ಳಲು ಅನುಮತಿ ನೀಡಿರುವವನು ಮನುಷ್ಯನಲ್ಲದೆ ಬೇರೆ ಯಾರೂ ಇಲ್ಲ. ಮನಸ್ಸಿಗೆ ಕ್ಷೋಭೆ ಏಕಾಗುತ್ತದೆ? ಮೂಲಭೂತವಾಗಿ ನಿಮ್ಮಲ್ಲಿ ಆಗ ಏನು ಸಂಭವಿಸುತ್ತದೆ?

ನಿಮ್ಮ ಇಷ್ಟದಂತೆ ಯಾರೋ ನಡೆದುಕೊಳ್ಳಲಿಲ್ಲ. ನಿರೀಕ್ಷಿಸಿದಂತೆ ಯಾವುದೂ ನಡೆಯಲಿಲ್ಲ. ಆಸೆಪಟ್ಟಂತೆ ಜೀವನ ರೂಪುಗೊಳ್ಳಲಿಲ್ಲ. ಸುಲಭವಾಗಿ ಹೇಳಬೇಕೆಂದರೆ ನಿಮಗೆ ಏನು ದೊರೆತಿದೆಯೋ ಅದನ್ನು ಅನುಭವಿಸಲು ಸಾಧ್ಯವಾಗದೆ, ನೀವು ಮನಸ್ಸಿನಲ್ಲಿಯೇ ಕೊರಗುತ್ತಿದ್ದು ಘರ್ಷಣೆಯಲ್ಲಿ ತೊಡಗಿರುತ್ತೀರಿ. ನನ್ನಲ್ಲಿ ಒಬ್ಬರು ಹೀಗೆ ಕೇಳಿದರು: ಸೋಲನ್ನು ಸಹಿಸಲಾರದೆ ಅಸೂಯೆ, ವಂಚನೆ ಬಂದರೆ ತಾನೆ, ಗೆಲ್ಲಬೇಕೆಂಬ ಹಂಬಲ ಹಾಗೂ ಹಠ ಹೊರಬರುವುದು? ಸೋಲಿನಿಂದ ಅಸೂಯೆಯುಂಟಾಗುತ್ತದೆ, ವಂಚನೆಯೂ ಬರುತ್ತದೆ. ಅವು ನಿಮ್ಮನ್ನು ಗೆಲುವಿನತ್ತ ಕೊಂಡೊಯ್ಯುತ್ತದೆಂಬುದು ಮಾತ್ರ ತಮಾಷೆಯ ಲೆಕ್ಕಾಚಾರ. ಮನಃಪೂರ್ವಕವಾಗಿ ಪಡೆದ ಅಂತಹದೊಂದು ಗೆಲುವು ಹೆಸರಿಗೆ ಮಾತ್ರ ಗೆಲುವೆನ್ನಿಸಿಕೊಳ್ಳುವುದೇ ಹೊರತು ಅದು ನಿಮ್ಮ ಜೀವನಕ್ಕೆ ಎಂತಹುದೇ ಒಳಿತನ್ನುಂಟುಮಾಡುವುದಿಲ್ಲ.

ಒಬ್ಬ ವ್ಯಕ್ತಿ ಮರದ ರೆಂಬೆಯೊಂದಕ್ಕೆ ಹಗ್ಗವನ್ನು ಕಟ್ಟಿ ತನ್ನ ತಲೆಯನ್ನು ಅದರಲ್ಲಿ ತೂರಿಸಲು ಪ್ರಯತ್ನಮಾಡುತ್ತಿದ್ದ.

ಏಯ್ .... ಏನು ಮಾಡ್ತಾ ಇದ್ದೀಯೆ? ಎಂದು, ಗಾಬರಿಯಿಂದ ಪ್ರಶ್ನಿಸಿದವರಿಗೆ ಅವನು ಹೇಳಿದ.

ಹೆಚ್ಚು ದಿನಗಳು ಬಾಳಬೇಕೆಂಬುದಕ್ಕಾಗಿ ನಾನು ಆತ್ಮಹತ್ಯೆ ಮಾಡಿಕೊಳ್ಳುತ್ತೇನೆ........

ಆ ಬುದ್ಧಿವಂತನು ಯಾತನೆಗಳು, ವಿರಕ್ತಿ, ಗೆಲುವಿಗೆ ದಾರಿ ಮಾಡಿಕೊಡುತ್ತವೆಯೆಂದು ನಂಬಿದ್ದಾನೆ. ಹೀಗೆ ನಂಬುವವರ ಮಧ್ಯೆ ಹೆಚ್ಚು ವ್ಯತ್ಯಾಸ ಕಂಡುಬರುವುದಿಲ್ಲ.

ತನ್ನ ಹೆಂಡತಿಯ ಅಂತ್ಯಸಂಸ್ಕಾರ ಮಾಡಿ ಮುಗಿಸಿದ್ದ ಗಂಡ, ಅವಳ ಗೋರಿಯನ್ನು ನೋಡುತ್ತಾ ಮಂದಹಾಸದಿಂದ ನಗುತ್ತಿದ್ದ.

ಪಕ್ಕದಲ್ಲಿದ್ದವನು ಏನಯ್ಯ, ಇಷ್ಟೊಂದು ಸಂತೋಷ? ಎಂದು ಕೇಳಿದ.

ತನ್ನ ಜೀವನದ ಕೊನೆಯ ನಿಮಿಷದವರೆಗೂ ಯಾವಾಗಲೂ ನನ್ನ ಬಳಿ ಜಗಳವಾಡುತ್ತಲೇ ಇದ್ದಳು. ನನ್ನನ್ನು ಹೂಳಿದರೂ, ಆ ಮಣ್ಣನ್ನು ತೋಡಿಕೊಂಡು ಹೊರಗೆ ಬರುತ್ತೇನೆ. ಬಿಡುವುದಿಲ್ಲ. ನಿನ್ನನ್ನು ಅಟ್ಟಿಸಿಕೊಂಡು ಬರುತ್ತೇನೆ. ನೆಮ್ಮದಿಯಿಲ್ಲದಂತೆ ಮಾಡುತ್ತೇನೆ ಎಂದು ಸಾಯುವಾಗಲೂ ಹೆದರಿಸಿದಳು. ಒಂದು ವೇಳೆ ಅವಳು ಹೇಳಿದಂತೆ ಮಣ್ಣನ್ನು ತೋಡಲು ಪ್ರಾರಂಭಿಸಿದರೆ ಏನಾಗಬಹುದೆಂದು ಯೋಚಿಸಿದೆ. ನಗು ಬಂತು.

ಅದರಲ್ಲಿ ನಗುವುದಕ್ಕೆ ಏನಿದೆ?

ಅವಳನ್ನು ಬೋರಲಾಗಿ ಮಲಗಿಸಿ ಹೂಳಿದ್ದೇನೆ...

ಜುಗುಪ್ಸೆ ಮತ್ತು ವಿರಕ್ತಿಯಿಂದ ಪ್ರೇರಿತರಾಗಿ, ಆ ಮೂಲಕ ಗೆಲುವಿಗಾಗಿ ಬದುಕುವುದು, ಬೋರಲಾಗಿ ಮಲಗಿಕೊಂಡು ಭೂಮಿಯನ್ನು ತೋಡಿ ಹೊರಬರುವ ಪ್ರಯತ್ನ ಮಾಡುವಂತೆಯೇ ಆಗುತ್ತದೆ. ವಿರುದ್ಧ ದಿಕ್ಕಿನಿಂದ ಪ್ರಯಾಣ ಸಾಗುವುದು ಒಂದು, ಹಾಗೂ ಯಾವುದೇ ಸಂದರ್ಭದಲ್ಲಿಯೂ ತಲುಪ ಬೇಕಾದ ಗುರಿಯನ್ನು ಮುಟ್ಟಲಾಗದು. ಸೋಲಿನಿಂದ, ಮನಸ್ಸಿನಲ್ಲಿ ಉದ್ವೇಗ ಹಾಗೂ ನೋವು ನಿಮ್ಮನ್ನು ಸುತ್ತುವರಿದಾಗ, ನಿಮಗೆ ಸರಿಯಾಗಿ ಸುತ್ತಮುತ್ತ ನೋಡಲೂ ಸಹ ಆಗುವುದಿಲ್ಲ.

ಈ ಒರಟಾದ ಜೀವನ ಮಾರ್ಗದಲ್ಲಿ ಏನಾದರೂ ಸರಿಯಾದದ್ದು ಕಂಡು ಬಂದರೂ ಬೋರಲಾಗಿ ಬಿದ್ದು ಗಾಯಗೊಳ್ಳುತ್ತೀರಿ. ಹೀಗೆ ಮನಸ್ಸು ಸೊರಗಿದಾಗಲೆಲ್ಲ ಬೇರೆಯವರು ನಿಮ್ಮನ್ನು ಅರ್ಥಮಾಡಿಕೊಳ್ಳಬೇಕೆಂದು ಆಸೆಪಡುತ್ತೀರಿ. ನಿಮ್ಮೊಂದಿಗೆ ಇತರರು ಸಹ ಅಳುತ್ತಿರಬೇಕೆಂದು ನೀವು ಇಚ್ಛಿಸುತ್ತೀರಿ. ಅನುಕಂಪವನ್ನು ಯಾಚಿಸುತ್ತೀರಿ. ಇದೆಂತಹ ಹುಚ್ಚುತನ? ನಿಮ್ಮ ಮೂರ್ಖ ಅಹಂಕಾರದಂತೆ ಪ್ರಪಂಚವೇಕೆ ನಡೆದುಕೊಳ್ಳಬೇಕು? ನಿಮ್ಮ ಇಷ್ಟದಂತೆ ಬೇರೆಯವರೆಲ್ಲರೂ ತಪ್ಪು ದಾರಿಗೆ ಹೋಗಲು, ನಿಮಗೇಕೆ ಅನುಮತಿ ನೀಡಬೇಕು?

ನಿಮ್ಮ ಮನಕ್ಷೋಭೆ ನಿಮ್ಮ ಬಗೆಗಿರುವ ಎಲ್ಲ ನಂಬಿಕೆಗಳನ್ನು ಛಿದ್ರಗೊಳಿಸುತ್ತದೆ. ಹೊರಗಿನಿಂದ ಆಯುಧಗಳನ್ನು ಹಿಡಿದು ಆಕ್ರಮಣ ಮಾಡುವವರಿಂದ ತತ್‌ಕ್ಷಣವೇ ಆಪತ್ತು ಒದಗಿಬರಬಹುದು. ಆದರೆ ಸರಿಯಾದ ರೀತಿಯಲ್ಲಿ ಸಿದ್ಧತೆ ಮಾಡಿಕೊಂಡರೆ ಅವರ ಅತಿಕ್ರಮಣವನ್ನು ತಡೆದು ಓಡಿಸಬಹುದು. ಮನಸ್ಸಿನಲ್ಲಿ ಏಳುವ ಕ್ಲೇಶವೆಂಬುದು, ಒಳಗಿದ್ದುಕೊಂಡೇ ನಿಮ್ಮನ್ನು ಹರಿದು ಚೂರುಚೂರು ಮಾಡಿ, ನಿಮ್ಮನ್ನು ನಿಷ್ಪ್ರಯೋಜಕರನ್ನಾಗಿ ಮಾಡಿ ಅಳಿಸಿಹಾಕುವಂತಹ ವಿಷಪೂರಿತ ಆಯುಧ. ನಿಮ್ಮ ವಿರುದ್ಧ ನೀವೇ ಆಕ್ರಮಣ ಮಾಡುವಂತಹ ಮೂರ್ಖತನ ಬೇರೇನಾದರೂ ಇದೆಯೇ?

ತನ್ನ ಉದ್ಯೋಗವನ್ನು ನಿಲ್ಲಿಸಿಬಿಡೋಣವೆಂದು ಸೈತಾನ್ ಒಮ್ಮೆ ತೀರ್ಮಾನಿಸಿದ. ಅವನು ಬಳಸುತ್ತಿದ್ದ ಎಲ್ಲ ಸಾಧನಗಳನ್ನೂ ಸಂತೆಯಲ್ಲಿ ಮಾರಾಟಕ್ಕಿರಿಸಿದ. ಕೋಪ, ಕಾಮ, ಅಹಂಕಾರ, ದುರಾಸೆ, ಅಸೂಯೆ, ಹಗೆತನ, ಜಂಬ ಮುಂತಾದ ಅನೇಕ ಉಪಕರಣಗಳನ್ನು ಅಂಗಡಿಯಲ್ಲಿ ಹರಡಿದ. ಆದರೆ, ಒಂದು ಚೀಲ ಮಾತ್ರ ಬಿಚ್ಚದೆ ಇರುವುದನ್ನು ಜನರು ನೋಡಿ ಅದೇನೆಂದು ಕೇಳಿದರು.

ನನ್ನ ಬಳಿ ಇರುವ ಉಪಕರಣಗಳಲ್ಲಿ ಅತ್ಯಂತ ಶಕ್ತಿದಾಯಕವಾದ ಸಲಕರಣೆಗಳು ಅವು. ಒಂದು ವೇಳೆ ಮತ್ತೆ ಉದ್ಯೋಗಕ್ಕೆ ಹಿಂತಿರುಗುವುದಾದರೆ ಇರಲಿ ಎಂದು ಅವುಗಳನ್ನು ಮಾತ್ರ ಹಾಗೆಯೇ ಇರಿಸಿಕೊಂಡಿದ್ದೇನೆ, ಇವು ಜೀವನದ ಸಾರವನ್ನೇ ಅಳಿಸಿಹಾಕುವಂತಹವು, ಒಮ್ಮೆಯೂ ಸೋತಿಲ್ಲ ಎಂದು ಸೈತಾನ್ ತೆರೆದು ತೋರಿಸಿದ.

ಆ ಉಪಕರಣಗಳು ಯಾವುವು, ಗೊತ್ತೆ? ಜುಗುಪ್ಸೆ, ನಿರುತ್ಸಾಹ, ವಿರಕ್ತಿ ಮುಂತಾದವು!.

ಸೈತಾನನ ಉಪಕರಣಗಳನ್ನು ಕೊಂಡು ತಂದಿರುವವರಲ್ಲಿ ಕೆಲವರನ್ನು, ನೀವು ಜೀವನದಲ್ಲಿ ಕಂಡಿರಬಹುದು. ಅಷ್ಟೇ ಅಲ್ಲ, ಕೆಲವು ಉಪಕರಣಗಳನ್ನು ನೀವೂ ಕೊಂಡು ತಂದಿರಬಹುದು. ಅವು ಉಚಿತವಾಗಿ ದೊರೆತಿದ್ದರೂ ಸರಿ, ಅವುಗಳನ್ನು ದೂರ ಎಸೆದುಬಿಡಿ. ಜೀವನವೆಂಬುದೇ ಒಂದು ಉತ್ಸಾಹವಲ್ಲವೆ? ಒಂದು ಮುಕ್ತಾಯವನ್ನು ಕಂಡು ಅದೇ ಸೋಲು ಎಂದು ಏತಕ್ಕಾಗಿ ಕೋಪಗೊಳ್ಳಬೇಕು?

ನೀವು ಗೆಲ್ಲುವುದಕ್ಕಾಗಿ ಕಷ್ಟಪಟ್ಟು ದುಡಿದಿರಿ. ಆದರೆ, ಮುಕ್ತಾಯ ಬೇರೆ ಬಗೆಯಲ್ಲಿ ನಡೆದುಹೋಯಿತೆಂದು ಭಾವಿಸೋಣ. ಜುಗುಪ್ಸೆ ಏತಕ್ಕೆ? ಅದಕ್ಕಾಗಿ ನೋವು ಪಡುವುದೇಕೆ? ಮೊಟ್ಟಮೊದಲು ನಿಮಗೆ ದೊರೆತಿರುವ ತೀರ್ಮಾನ ಒಂದು ಸೋಲು ಎಂದು ಪರಿಗಣಿಸಬೇಕಾಗಿಲ್ಲ. ಅದನ್ನು ಸೋಲು ಎಂದು ತಿಳಿದು, ಮನಸ್ಸಿನಲ್ಲಿ ನೊಂದು ವೇದನೆಯನ್ನು ಅನುಭವಿಸುತ್ತಿದ್ದೀರಲ್ಲವೆ, ಅದು ನಿಜವಾದ ಸೋಲು. ಹೌದು, ಅದೇ ನಿಮ್ಮನ್ನು ನೀವೇ ಸೋಲಿಸಲು ಮಾರ್ಗದರ್ಶಿ. ಆಗಿಹೋದುದನ್ನು ನೆನೆಯುತ್ತಾ ಸುಮ್ಮನೆ ವ್ಯಥೆಪಡುವುದರಲ್ಲಿ ಏನೂ ಪ್ರಯೋಜನವಿಲ್ಲ. ವ್ಯಥೆ, ಕಷ್ಟ ಇವುಗಳು ವ್ಯಕ್ತಿಯಿಂದ ವ್ಯಕ್ತಿಗೆ ಬೇರೆಯಾಗುತ್ತವೆ. ಒಬ್ಬರಿಗೆ ಬೆಂಕಿಕಡ್ಡಿ ಹತ್ತಿ ಉರಿಯದಿದ್ದರೆ ಅಷ್ಟಕ್ಕೆ ದುಃಖ, ಮತ್ತೊಬ್ಬರಿಗೆ ಮನೆ ಹತ್ತಿಕೊಂಡು ಉರಿದರೆ ಮಾತ್ರ ದುಃಖವುಂಟಾಗುತ್ತದೆ.

ಪ್ರಪಂಚದ ಎರಡನೆಯ ಮಹಾಯುದ್ಧ ಮುಗಿದ ಅನಂತರ ಒಂದು ದಿನ ಜನರಲ್ ಐಸೆನ್‌ಹೋವರ್ ಸ್ವರ್ಗಕ್ಕೆ ಹೋದರು.

ವಾರಾಂತ್ಯದಲ್ಲಿ ನಾನು ನರಕವನ್ನು ಸುತ್ತಾಡಿಕೊಂಡು ಬರಬೇಕು ಎಂದು ದೇವರಲ್ಲಿ ಕೇಳಿದರು. ನರಕದಲ್ಲಿರುವವರು ಸ್ವರ್ಗವನ್ನು ನೋಡಬೇಕೆಂಬುದರಲ್ಲಿ ಅರ್ಥವಿದೆ. ನಿನಗೆ ನರಕವನ್ನು ನೋಡಲು ಅದೇಕೆ ಆಸೆ? ಎಂದು ದೇವರು ಕೇಳಿದನು.

ಅಲ್ಲಿ ಹಿಟ್ಲರ್ ಏನೆಲ್ಲಾ ನೋವುಗಳನ್ನು ಅನುಭವಿಸುತ್ತಿದ್ದಾನೆಂದು ನೋಡಬೇಕು ಎಂದರು ಐಸೆನ್ ಹೋವರ್. ದೇವರು ಅವರಿಗೆ ನರಕಕ್ಕೆ ಹೋಗಲು ಪಾಸ್ ನೀಡಿದನು. ನರಕದಲ್ಲಿ ಹಿಟ್ಲರನಿಗೆ ಚಿತ್ರವಧೆ ನೀಡುತ್ತಿದ್ದ ಜಾಗಕ್ಕೆ ಐಸೆನ್‌ಹೋವರನ್ನು ಕರೆದೊಯ್ಯಲಾಯಿತು. ಅಸಹ್ಯಕರವಾದುದೆಲ್ಲವನ್ನು ತುಂಬಿರುವ ಎರಡಾಳೆತ್ತರದ ತೊಟ್ಟಿಯೊಂದರಲ್ಲಿ ಹಿಟ್ಲರ್‌ನನ್ನು ಹೂಳಲಾಗಿತ್ತು. ತೊಟ್ಟಿಯ ಹೊರಗೆ ಕಾಣುತ್ತಿದ್ದ ಅವನ ಮುಖದಲ್ಲಿ ಎದ್ದು ಕಾಣುವಂತಹ ಮುಗುಳ್ನಗೆಯನ್ನು ನೋಡಿ ಐಸೆನ್‌ಹೋವರಿಗೆ ಅತ್ಯಂತ ಆಶ್ಚರ್ಯವಾಯಿತು.

ಸಹಿಸಲಸಾಧ್ಯವಾದ ದುರ್ನಾತದಲ್ಲಿ ಹೇಸಿಗೆಯಿಂದ ಕೂಡಿದ ರಾಶಿಯಲ್ಲಿ ಹೂತು ಹೋಗಿದ್ದರೂ, ಏತಕ್ಕಾಗಿ ನೀನು ಈ ರೀತಿ ನಾಚಿಕೆಯಿಲ್ಲದೆ ನಗುತ್ತಿದ್ದೀಯೆ? ಎಂದು ಐಸೆನ್‌ಹೋವರ್ ಕೇಳಿದರು.

ನನ್ನ ಕೆಳಗೆ ಸಿಕ್ಕಿಹಾಕಿಕೊಂಡಿರುವವರು ಯಾರು ಗೊತ್ತೆ? ಮುಸೊಲಿನಿ, ಅವನ ತೋಳಿನ ಮೇಲೆಯೇ ನಾನು ನಿಂತಿರುವುದು. ಅವನ ಪರಿಸ್ಥಿತಿಯನ್ನು ನೆನೆದು ನೋಡು.

ದುಃಖವೆಂಬುದು, ವ್ಯಥೆಯೆಂಬುದು ಹೀಗೆ ಬೇರೆಯವರೊಂದಿಗೆ ಹೋಲಿಸಿಕೊಂಡಾಗ ಹೆಚ್ಚಾಗುತ್ತದೆ, ಕಡಿಮೆಯೂ ಆಗುತ್ತದೆ. ಅದು ಹೊರಗಿನಿಂದ ಬರುತ್ತದೆಯೆ? ಇಲ್ಲ, ಅದು ನಿಮ್ಮ ಮನಸ್ಸಿನಲ್ಲಿಯೇ ಉತ್ಪತ್ತಿಯಾಗುತ್ತದೆ. ಮನಸ್ಸೆಂಬುದು ನಿಮ್ಮ ಬಳಿಯೇ ಇರುವಂತಹುದು. ಅದನ್ನು ಸಂತೋಷಕರವಾಗಿರಿಸಿಕೊಳ್ಳುವುದು ಅಥವಾ ಆಘಾತವಾಗುವಂತೆ ಇರಿಸಿಕೊಳ್ಳುವುದು ನಿಮ್ಮ ಕೈಯಲ್ಲಿಯೇ ಇದೆ.

ನೀವು ನೆನೆದಂತೆ ಪ್ರಪಂಚ ನಡೆಯಬೇಕು, ಬೇರೆಯವರು ನೀವು ಹೇಳಿದಂತೆ ನಡೆಯಬೇಕು ಎಂದು ನಿರೀಕ್ಷಿಸುವ ನಿಮ್ಮ ಅಹಂಕಾರ ವ್ಯರ್ಥವಾದ ಒಂದು ಹೊರೆ. ಅದನ್ನು ಕಾಲಡಿಯಲ್ಲಿ ಹೊಸಕಿಹಾಕಿ ಮುಂದುವರಿಯದಿದ್ದರೆ ನೀವು ಇಡುವ ಪ್ರತಿಹೆಜ್ಜೆಯೂ ನೋವುಂಟು ಮಾಡುತ್ತದೆ. ಒಂದೊಂದು ತಿರುವಿನಲ್ಲಿಯೂ ಹೆದರಿಕೆಯುಂಟಾಗುತ್ತದೆ. ನಂಬಿಕೆ ಕಡಮೆಯಾಗುತ್ತಾ ಮನಸ್ಸು ಸೊರಗುತ್ತದೆ. ಮನಸ್ಸು ಸೊರಗಿದಾಗಲೆಲ್ಲಾ ಬೇರೆಯವರತ್ತ ಕೋಪಗೊಳ್ಳುವುದನ್ನು ನಿಲ್ಲಿಸಿ, ಅದಕ್ಕೆ ಕಾರಣ ನೀವೇ ಎಂಬುದನ್ನು ತಿಳಿದುಕೊಳ್ಳಿ.

(ಸದ್ಗುರುಗಳು ಒಬ್ಬ ಯೋಗಿ, ಅನುಭಾವಿ ಹಾಗೂ ದಾರ್ಶನಿಕ. isha.sadhguru.org/in/kn)
(ಸದ್ಗುರುಗಳ ಇತರ ಪುಸ್ತಕ/ವಿವರಗಳಿಗೆ ಸಂಪರ್ಕಿಸಿ – kannadapublications@ishafoundation.org)

ಎಸ್‌ಎಸ್‌ಎಲ್‌ಸಿ, ಪಿಯುಸಿಯಲ್ಲಿ ಹೆಚ್ಚು ಅಂಕ ಪಡೆದ ಎಲ್ಲಾ ಸಮಾಜದ 90ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ



ಕರ್ನಾಟಕ ಪ್ರತಿಭಾ ಅಕಾಡೆಮಿ ಗುರುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಗಳಲ್ಲಿ ಹೆಚ್ಚು ಅಂಕ ಗಳಿಸಿದ ಜಿಲ್ಲೆಯ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ, ಹಿಂದುಳಿದವರ್ಗ, ಅಲ್ಪಸಂಖ್ಯಾತ ಸೇರಿದಂತೆ ಎಲ್ಲ ಸಮುದಾಯಗಳ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಅಭಿನಂದಿಸಲಾಯಿತು.

ಮೈಸೂರು, ಡಿ.25(ಜಿಎ)–ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ರೋಟರಿ ಸಭಾಂಗಣದಲ್ಲಿ ಕರ್ನಾಟಕ ಪ್ರತಿಭಾ ಅಕಾಡೆಮಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಗಳಲ್ಲಿ ಹೆಚ್ಚು ಅಂಕ ಗಳಿಸಿದ ಜಿಲ್ಲೆಯ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ, ಹಿಂದುಳಿದವರ್ಗ, ಅಲ್ಪಸಂಖ್ಯಾತ ಸೇರಿದಂತೆ ಎಲ್ಲ ಸಮುದಾಯಗಳ 90ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಅಭಿನಂದಿಸಲಾಯಿತು.

ಕಾರ್ಯಕ್ರಮವನ್ನು ಶಾಸಕ ಕೆ.ಹರೀಶ್ ಗೌಡ ಉದ್ಘಾಟಿಸಿ ಮಾತನಾಡಿ, ಪ್ರತಿಭಾ ಪುರಸ್ಕಾರ ಪಡೆದಿರುವ ನಿಮಗೆಲ್ಲರಿಗೂ ಜವಾಬ್ದಾರಿ ಹೆಚ್ಚಾಗಿದ್ದು ಮುಂದಿನ ದಿನದಲ್ಲಿ ಬುದ್ಧ, ಬಸವ, ಅಂಬೇಡ್ಕರ್ ಅವರ ತತ್ವಗಳನ್ನು ಮೈಗೂಡಿಸಿಕೊಂಡು ಸಾಂಸ್ಕೃತಿಕ ಹಾಗೂ ಶಿಕ್ಷಣ ಕ್ಷೇತ್ರದಲ್ಲಿ ಮುಂದುವರೆದು ಉತ್ತಮವಾದ ವ್ಯಕ್ತಿಗಳಾಗಬೇಕು. ಜಾತ್ಯಾತೀತವಾಗಿ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಗುರುತಿಸಿ ಅವರಿಗೆ ಪುರಸ್ಕಾರ ನೀಡಿ ಅವರ ಜವಾಬ್ದಾರಿಯನ್ನು ಮತ್ತಷ್ಟು ಹೆಚ್ಚಿಸುತ್ತಿದ್ದು ಇತರೆ, ವಿದ್ಯಾರ್ಥಿಗಳಿಗೆ ಇದು ಪ್ರೇರಣೆಯಾಗುತ್ತದೆ ಎಂದು ಹೇಳಿದರು.

ಸತೀಶ್ ಜಾರಕಿಹೊಳಿ ಅವರು ಡಾ.ಬಿ.ಆರ್.ಅಂಬೇಡ್ಕರ್ ಅವರ ತತ್ವದಂತೆ ಪ್ರತಿಯೊಬ್ಬ ಬಡ ವಿದ್ಯಾರ್ಥಿಗಳ ಶಿಕ್ಷಣ ಕ್ಷೇತ್ರಕ್ಕೆ ಹೆಚ್ಚು ಒತ್ತು ನೀಡುವುದರ ಮುಖಾಂತರ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಉಚಿತವಾಗಿ ತರಬೇತಿಯನ್ನು ನೀಡಿ ವಿದ್ಯಾರ್ಥಿಗಳ ಬೆನ್ನೆಲುಬಾಗಿ ನಿಂತಿದ್ದಾರೆ. ರಾಜ್ಯದಲ್ಲಿರುವಂತಹ ಪ್ರತಿಯೊಬ್ಬ ವಿದ್ಯಾರ್ಥಿಯೂ ಸಮಾಜದಲ್ಲಿ ಉತ್ತಮ ಶಿಕ್ಷಣ ಪಡೆದು ಜ್ಞಾನವಂತರಾಗಬೇಕೆಂಬ ಅವರ ಬಯಕೆಯನ್ನು ಎಲ್ಲರೂ ಈಡೇರಿಸೋಣ ಎಂದರು.

ಮೈಸೂರಿಗೂ ಸತೀಶ್ ಜಾರಕಿಹೊಳಿ ಅವರಿಗೂ ಅವಿನಾಭವ ಸಂಬಂಧವಿದ್ದು ಅವರು ಆರ್ಥಿಕವಾಗಿಯೂ ಸಹಾಯ ಮಾಡಿದಂತಹ ವ್ಯಕ್ತಿಯಾಗಿದ್ದು ಅವರ ಆದರ್ಶಗಳು ನಮಗೆಲ್ಲಾ ಮಾದರಿ. ನೂತನವಾಗಿ ಶಾಸಕರಾಗಿದ್ದಂತಹ ನಮಗೆಲ್ಲಾ ರಾಜಕಾರಣದಲ್ಲಿ ಯಾವ ರೀತಿ ಇರಬೇಕು. ಜನಪ್ರತಿನಿಧಿಗಳಿಗೆ ಹೇಗೆ ಸ್ಪಂದಿಸಬೇಕು ಎಂಬ ತಿಳುವಳಿಕೆ ನೀಡಿದ್ದಂತಹ ರಾಜಕೀಯದ ಗುರುಗಳು ಎಂದು ಹೇಳಿದರೆ ತಪ್ಪಾಗಲಾರದು. ನಾಯಕ ಸಮುದಾಯಕ್ಕೆ ಸೇರಿದ ವ್ಯಕ್ತಿಯಾಗಿದ್ದರು ಸಹ ಜಾತ್ಯಾತೀತವಾಗಿ ಎಲ್ಲಾ ಸಮುದಾಯದವರನ್ನು ಸಮಾಜದಲ್ಲಿ ಮುಂದೆ ತೆಗೆದುಕೊಂಡು ಹೋಗುವಂತಹ ವಿಶೇಷ ರಾಜಕಾರಣಿಯಾಗಿದ್ದಾರೆ ಎಂದು ವರ್ಣಿಸಿದರು.

ಕಾರ್ಯಕ್ರಮದಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಗಳಲ್ಲಿ ಹೆಚ್ಚು ಅಂಕ ಗಳಿಸಿದ ಜಿಲ್ಲೆಯ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ, ಹಿಂದುಳಿದವರ್ಗ, ಅಲ್ಪಸಂಖ್ಯಾತ ಸೇರಿದಂತೆ ಎಲ್ಲ ಸಮುದಾಯಗಳ 90ಕ್ಕೂ ಹೆಚ್ಚು ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ನಗದು, ಪ್ರಮಾಣ ಪತ್ರ ಹಾಗೂ ಪುರಸ್ಕಾರ ನೀಡಿ ಅಭಿನಂದಿಲಾಯಿತು.

ಈ ಸಂದರ್ಭದಲ್ಲಿ ಮಾಜಿ ಮೇಯರ್ ಪುರುಷೋತ್ತಮ್, ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ಎಸ್.ಸಿ.ಬಸವರಾಜು ಮಾನವ ಬಂಧುತ್ವ ವೇದಿಕೆಯ ದ್ಯಾವಪ್ಪ ನಾಯಕ, ಮನೋನ್ಮಣಿ, ಎಸ್.ಪರಮೇಶ್,ಸಂಚಾಲಕ ಎ.ಬಿ.ರಾಮಚಂದ್ರಪ್ಪ, ಮುಖಂಡರಾದ ನಾಗರಾಜ, ಮಹೇಶ್, ಬಿ.ಜಿ.ಕೇಶವ ಕುಮಾರ್, ಕುಮಾರ್, ಶ್ರೀನಿವಾಸ ನಾಯಕ, ಪ್ರಭಾಕರ್, ನಾಗರಾಜು ಉಪಸ್ಥಿತರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ
ಶುಕ್ರವಾರ 26 ಡಿಸೆಂಬರ್ 2025

ಕುಸುಮ್-ಬಿ ಯೋಜನೆ; ವಂತಿಗೆ ಪಾವತಿಗೆ ಡಿ.31 ಕಡೇ ದಿನ



ಬೆಂಗಳೂರು, ಡಿ.25(ಎಂಕೆ)- ಅರ್ಹ ರೈತರು ಕುಸುಮ್-ಬಿ ಯೋಜನೆಯಿಂದ ವಂಚಿತರಾಗಬಾರದೆಂಬ ಉದ್ದೇಶದೊಂದಿಗೆ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ಬೆಂಗಳೂರಿನ ನಾಗರಬಾವಿ ಕೇಂದ್ರ ಕಚೇರಿಯಲ್ಲಿ ಸಹಾಯವಾಣಿ ಕೇಂದ್ರ ಸ್ಥಾಪಿಸಲಾಗಿದೆ. ಡಿ.31ರವರೆಗೆ ಪ್ರತಿದಿನ ಬೆಳಗ್ಗೆ 6ರಿಂದ ರಾತ್ರಿ 9ರವರೆಗೆ ಸಹಾಯವಾಣಿ ಕೇಂದ್ರ ಕಾರ್ಯನಿರ್ವಹಿಸಲಿದ್ದು, ರೈತರು ಅಧಿಕೃತ ಸಹಾಯವಾಣಿ ದೂ.ಸಂಖ್ಯೆ 080-22202100, ಮೊ.. 8095132100ಗೆ ನೇರವಾಗಿ ಸಂಪರ್ಕಿಸಿ ಕುಸುಮ್-ಬಿ ಯೋಜನೆ ಕುರಿತಂತೆ ತಮ್ಮ ಸಮಸ್ಯೆಗಳನ್ನು ದೂರವಾಣಿ ಮೂಲಕ ಪರಿಹರಿಸಿಕೊಳ್ಳಬಹುದಾಗಿದೆ. ಇಲ್ಲಿವರೆಗೆ ಕುಸುಮ್-ಬಿ ಯೋಜನೆಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದ್ದು, www.souramitra.com ಮೂಲಕ 83,204 ರೈತರು ಆನ್‌ಲೈನ್‌ನಲ್ಲಿ ನೋಂದಾಯಿಸಿಕೊಂಡಿದ್ದಾರೆ. ವಂತಿಗೆ ಪಾವತಿಗೆ ಡಿ.31 ಕೊನೆಯ ದಿನ. ಪಾವತಿಸಲು ವಿಫಲವಾದರೆ ಯೋಜನೆಗೆ ಅನರ್ಹ ಎಂಬುದನ್ನು ಪ್ರಕಟಣೆ ಮೂಲಕ ಸ್ಪಷ್ಟಪಡಿಸಲಾಗಿದೆ.

ಡಿ.29ರಂದು ವಿವಿಧೆಡೆ ವಿದ್ಯುತ್ ವ್ಯತ್ಯಯ



ಮೈಸೂರು,ಡಿ.25-ದಕ್ಷಿಣ ವಿದ್ಯುತ್ ವಿತರಣಾ ಕೇಂದ್ರ ಹಾಗೂ ಮಂಡಕಳ್ಳಿ ವಿದ್ಯುತ್ ವಿತರಣಾ ಕೇಂದ್ರದಲ್ಲಿ ನಿರ್ವಹಣಾ ಕಾಮಗಾರಿ ನಿಮಿತ್ತ ಡಿ.29ರಂದು ಬೆಳಿಗ್ಗೆ 10ರಿಂದ ಸಂಜೆ 6ರವರೆಗೆ ವಿದ್ಯಾರಣ್ಯಪುರಂ, 25ರಿಂದ 30ನೇ ಕ್ರಾಸ್, ಕನಕಗಿರಿ, ವೀವರ್ಸ್ ಕಾಲೋನಿ, ಸ್ಟರ್ಲಿಂಗ್ ಥಿಯೇಟರ್, ಸುತ್ತ-ಮುತ್ತ, ಇಂಡಸ್ಟ್ರಿಯಲ್ ಸಬರ್ಬ್ 1ರಿಂದ 3ನೇ ಹಂತ, ಚಾಮುಂಡಿಪುರಂ ಸರ್ಕಲ್, ಸಿಲ್ಕ್ ಫ್ಯಾಕ್ಟರಿ ಸುತ್ತ-ಮುತ್ತಾ, ಅಶೋಕಪುರಂ, ಕೃಷ್ಣಮೂರ್ತಿಪುರಂ, ಮೇದರಕೇರಿ, RTO ಸುತ್ತ-ಮುತ್ತ, ಬಲ್ಲಾಳ್ ಸರ್ಕಲ್, ನಂಜುಮಳಿಗೆ, ಬಂಡಿಪಾಳ್ಯ, ಹೊಸಹುಂಡಿ, ಗುಡುಮಾದನಹಳ್ಳಿ, ಏಳಿಗೆಹುಂಡಿ, ಆಲನಹಳ್ಳಿ ರಿಂಗ್‌ರೋಡ್, ನಾಡನಹಳ್ಳಿ, ಕವಿತಾ ಬೇಕರಿ ಸರ್ಕಲ್, ಗೊಬ್ಬಳಿಮರ, ಜೆ.ಪಿ. ನಗರ, ಎಬಿಸಿಡಿ & ಇ ಬ್ಲಾಕ್, ಓಂಕಾರ್ ಲೇಔಟ್, ಪೊಲೀಸ್ ಬೂತ್ ಸರ್ಕಲ್, ಸಿದ್ದಲಿಂಗೇಶ್ವರ ಲೇಔಟ್, ಅಮೋಘ ಪ್ಯಾಲೇಸ್ ಹಾಗೂ ಸುತ್ತ-ಮುತ್ತ.

ಮಂಡಕಳ್ಳಿ, ಗೆಜ್ಜಗಳ್ಳಿ ಐಪಿ ಪ್ರದೇಶ, ಎಸ್.ಉತ್ತನಹಳ್ಳಿ ಸುತ್ತ-ಮುತ್ತಲಿನ ಪ್ರದೇಶಗಳು, ಜೆ.ಪಿ.ನಗರ, ಶ್ರೀನಗರ, ರೇಷ್ಮೆನಗರ, ಮಹಾಲಕ್ಷ್ಮಿ ಬಡಾವಣೆ, ಟೀಚರ್ಸ್ ಬಡಾವಣೆ, ಆರ್.ಕೆ.ಬಡಾವಣೆ, ಭವಾನಿ ಬಡಾವಣೆ, ವಿನಾಯಕ ಬಡಾವಣೆ, ಕೊಪ್ಪಲೂರು, ಮಹಾಲಕ್ಷ್ಮಿ ದೃಷ್ಟಿ ಬಡಾವಣೆ ಹಾಗೂ ಸುತ್ತ-ಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.

ಮೈಸೂರಿನ ಚರ್ಚ್‌ಗಳಲ್ಲಿ ಕ್ರಿಸ್‌ಮಸ್ ಸಂಭ್ರಮ



ಕ್ರಿಸ್‌ಮಸ್ ಹಿನ್ನೆಲೆಯಲ್ಲಿ ಸಂತಫಿಲೋಮಿನಾ ಚರ್ಚ್ ಆವರಣದಲ್ಲಿ ಅಪಾರ ಜನ ಸೇರಿರುವುದು.



ಕ್ರೈಸ್ತ ಬಾಂಧವರು ಸಂತ ಫಿಲೋಮಿನಾ ಚರ್ಚ್‌ನಲ್ಲಿ ಕ್ರಿಸ್‌ಮಸ್ ಹಬ್ಬದ ವಿಶೇಷ ಪ್ರಾರ್ಥನೆ ಸಲ್ಲಿಸಿದರು.

ವಿಶೇಷ ಪ್ರಾರ್ಥನೆ; ಯೇಸು ದೇವರಲ್ಲಿ ಭಕ್ತಿ ನಮನ

ಮೈಸೂರು,ಡಿ.25(ಎಂಟಿವೈ)- ಮೈಸೂರಿನ ಸಂತ ಫಿಲೋಮಿನಾ ಚರ್ಚ್ ಸೇರಿದಂತೆ ವಿವಿಧ ಚರ್ಚ್‌ಗಳಲ್ಲಿ ಗುರುವಾರ ಮುಂಜಾನೆಯಿಂದಲೇ ಕ್ರಿಸ್‌ಮಸ್ ಹಿನ್ನೆಲೆಯಲ್ಲಿ ವಿಶೇಷ ಪ್ರಾರ್ಥನೆ ಜರುಗಿದ್ದು, ಕ್ರೈಸ್ತ ಧರ್ಮೀಯರು ಚರ್ಚ್‌ಗಳಿಗೆ ಭೇಟಿ ನೀಡಿ ಶಿಲುಬೆ ಏರಿದ ಏಸುವಿನ ಮುಂದೆ ಪ್ರಾರ್ಥಿಸಿದರು.

ಸಂತ ಫಿಲೋಮಿನಾ ಚರ್ಚ್‌ನಲ್ಲಿ ಧರ್ಮಗುರು ಬಿಷಪ್ ಫ್ರಾನ್ಸಿಸ್ ಸೆರಾವೊ ಎಸ್.ಜೆ. ಅವರು ಬೆಳಗ್ಗೆ 5 ಗಂಟೆಗೆ ತಮಿಳಿನಲ್ಲಿ, ಬಳಿಕ ಬೆಳಗ್ಗೆ 6 ಗಂಟೆಗೆ ಕನ್ನಡದಲ್ಲಿ, ಬೆಳಗ್ಗೆ 7ಕ್ಕೆ ಇಂಗ್ಲೀಷ್‌ನಲ್ಲಿ, ಮತ್ತೆ ಬೆಳಗ್ಗೆ 8 ಗಂಟೆಗೆ ತಮಿಳು, ಸಂಜೆ 6ಕ್ಕೆ ಕನ್ನಡದಲ್ಲಿ ಪ್ರಾರ್ಥನೆ ಸಲ್ಲಿಸಿದರು. ಧರ್ಮಗುರುಗಳ ನೇತೃತ್ವದಲ್ಲಿ ನಡೆದ ಪ್ರಾರ್ಥನಾ ಸಭೆಯಲ್ಲಿ ವಿವಿಧೆಡೆಯಿಂದ ಸಾಕಷ್ಟು ಸಂಖ್ಯೆಯಲ್ಲಿ ಆಗಮಿಸಿದ್ದ ಭಕ್ತರು ಪ್ರಾರ್ಥನೆ ಸಲ್ಲಿಸಿದರು.

ಜನ ಜಂಗುಳಿ: ಚರ್ಚ್ ಒಳಗೆ ವಿಶೇಷ ಪ್ರಾರ್ಥನಾ ಸಭೆ ನಡೆಯುತ್ತಿದ್ದರೆ, ಹೊರಗೆ ಕ್ರಿಸ್‌ಮಸ್ ವೈಭವವನ್ನು ಕಣ್ತುಂಬಿಕೊಳ್ಳಲು ಅಪಾರ ಸಂಖ್ಯೆಯ ಜನ ಜಮಾಯಿಸಿದ್ದರು. ವಿವಿಧೆಡೆಯಿಂದ ಮೈಸೂರಿಗೆ ಆಗಮಿಸಿದ್ದ ಪ್ರವಾಸಿಗರೂ ಸೇರಿದಂತೆ ವಿವಿಧ ಧರ್ಮೀಯರು ಸಂತ ಫಿಲೋಮಿನಾ ಚರ್ಚ್‌ಗೆ ಆಗಮಿಸಿದ್ದರು. ಕ್ರಿಸ್‌ಮಸ್ ಅಂಗವಾಗಿ ಚರ್ಚ್ ಆವರಣದಲ್ಲಿ ನಿರ್ಮಿಸಿದ್ದ ಗೋದಲಿ, ಬಾಲ ಏಸು ಪ್ರತಿಮೆ, ಐಫೆಲ್ ಟವರ್ ಸೇರಿದಂತೆ ಕ್ರಿಸ್‌ಮಸ್ ಹಬ್ಬದ ಹಿನ್ನೆಲೆಯಲ್ಲಿ ನಡೆಸಿದ ಧಾರ್ಮಿಕ ಚಟುವಟಿಕೆಗಳನ್ನು ಕಣ್ತುಂಬಿಕೊಂಡರು.

ಪರಸ್ಪರ ಶುಭಾಶಯ ವಿನಿಮಯ: ಕ್ರಿಸ್‌ಮಸ್ ಹಬ್ಬದ ಅಂಗವಾಗಿ ವಿವಿಧೆಡೆಯಿಂದ ಸಂತ ಫಿಲೋಮಿನಾ ಚರ್ಚ್‌ಗೆ ಆಗಮಿಸಿದ್ದ ಕ್ರೈಸ್ತ ಧರ್ಮೀಯರು ಪ್ರಾರ್ಥನೆ ಸಲ್ಲಿಸಿ, ಶಿಲುಬೆ ಏರಿದ ಏಸು ಮೂರ್ತಿಗೆ ನಮಿಸಿದ ನಂತರ ಪರಸ್ಪರ ಶುಭಾಶಯ ಕೋರುವ ಮೂಲಕ ಕ್ರಿಸ್‌ಮಸ್ ಹಬ್ಬದ ಸಂಭ್ರಮವನ್ನು ಹಂಚಿಕೊಂಡರು. ಕೆಲವರು ಮಕ್ಕಳಿಗೆ ಕೇಕ್ ನೀಡಿ ಶುಭ ಕೋರುತ್ತಿದ್ದರು.

ಕ್ರಿಸ್‌ಮಸ್ ಕಾರ್ನಿವಲ್‌ಗೆ ಮುಗಿಬಿದ್ದ ಜನ: ಸಂತ ಫಿಲೋಮಿನಾ ಚರ್ಚ್ ಆವರಣದಲ್ಲಿ ಆಯೋಜಿಸಿರುವ ಕ್ರಿಸ್‌ಮಸ್ ಕಾರ್ನಿವಲ್‌ನಲ್ಲಿ ಸುಮಾರು 40ಕ್ಕೂ ಹೆಚ್ಚು ಮಳಿಗೆಗಳಿದ್ದು, ಆ ಮಳಿಗೆಗಳಲ್ಲಿ ಕೇಕ್, ಐಸ್‌ಕ್ರೀಂ, ಅಲಂಕಾರಿಕ ವಸ್ತು, ಉಡುಪು ಸೇರಿದಂತೆ ವಿವಿಧ ವಸ್ತುಗಳನ್ನು ಮಾರಾಟಕ್ಕಿಡಲಾಗಿದೆ. ಚರ್ಚ್ ನೋಡಲು ಬಂದ ಸಾರ್ವಜನಿಕರು ಕಾರ್ನಿವಲ್‌ನಲ್ಲಿರುವ ಮಳಿಗೆಗಳಿಗೆ ಭೇಟಿ ನೀಡಿ ಬೇಕಾದ ವಸ್ತುಗಳನ್ನು ಖರೀದಿಸಿ ಸವಿದು, ಸಂಭ್ರಮಿಸಿದರು.

ವಿವಿಧ ಚರ್ಚ್‌ಗಳಲ್ಲಿ ಜಂಗುಳಿ: ಮೈಸೂರಿನ ವಿವಿಧ ಚರ್ಚ್‌ಗಳಲ್ಲಿ ಕ್ರಿಸ್‌ಮಸ್ ಸಂಭ್ರಮ ಮನೆ ಮಾಡಿತ್ತು. ಸಾಡೇ ಮೆಮೋರಿಯಲ್ ಚರ್ಚ್, ವೆಸ್ಲಿ ಚರ್ಚ್, ಸಿಎಸ್‌ಐ ಬಾರ್ತೊಲೋಮಿಯಾ ಚರ್ಚ್, ಸಿಎಸ್‌ಐ ಹಾರ್ಡ್ವಿಕ್ ಚರ್ಚ್, ಇನ್ಫೆಂಟ್ ಜೀಸಸ್, ಸೇಕ್ರೆಡ್ ಹಾರ್ಟ್, ಸೇಂಟ್ ಜೋಸೆಫ್, ಸೇಂಟ್ ಥಾಮಸ್, ಸೇಂಟ್ ಮೇರಿಸ್ ಚರ್ಚ್ ಸೇರಿದಂತೆ ನಗರ ಹಾಗೂ ಗ್ರಾಮೀಣ ಪ್ರದೇಶದಲ್ಲಿರುವ ಚರ್ಚ್‌ಗಳಲ್ಲಿ ಕ್ರಿಸ್‌ಮಸ್ ಹಬ್ಬದ ಸಂಭ್ರಮ ಜೋರಾಗಿತ್ತು.

ಗಾಣಿಗ ಮಹಾಸಭಾದಿಂದ ಪ್ರತಿಭಾ ಪುರಸ್ಕಾರ; ಸಾಧಕರಿಗೆ ಸನ್ಮಾನ



ಗಾಣಿಗ ಸಮುದಾಯದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ, ಸಾಧಕರನ್ನು ಸನ್ಮಾನಿಸಲಾಯಿತು.

ಮೈಸೂರು, ಡಿ.25(ಎಂಕೆ)- ಮೈಸೂರಿನ ಸರಸ್ವತಿಪುರಂನಲ್ಲಿರುವ ಗಾಣಿಗರ ವಿದ್ಯಾರ್ಥಿನಿಲಯದ ಆವರಣದಲ್ಲಿ ಗಾಣಿಗ ಮಹಾಸಭಾ ವತಿಯಿಂದ ಮೈಸೂರು, ಮಂಡ್ಯ ಹಾಗೂ ಚಾಮರಾಜನಗರ ಜಲ್ಲೆಯ ಗಾಣಿಗ ಸಮುದಾಯದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ, ಸಮುದಾಯದ ಸಾಧಕರನ್ನು ಸನ್ಮಾನಿಸಿ ಗೌರವಿಸಲಾಯಿತು.

ಕಾರ್ಯಕ್ರಮ ಉದ್ಘಾಟಿಸಿ ಶಾಸಕ ಕೆ.ಹರೀಶ್‌ಗೌಡ, ಕಳೆದ ಶೈಕ್ಷಣಿಕ ಸಾಲಿನ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿಯಲ್ಲಿ ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾದ 80ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಹಾಗೂ ಸಮುದಾಯದ 50ಕ್ಕೂ ಹೆಚ್ಚು ಮಂದಿ ಸಾಧಕರನ್ನು ಸನ್ಮಾನಿಸಿ ಅಭಿನಂದಿಸಿದರು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಮಾತನಾಡಿ, ಹಿಂದುಳಿದ ಸಮುದಾಯಗಳು ಸಂಘಟಿತರಾದರೆ ಮಾತ್ರವೇ ಸಮಾಜದ ಮುಖ್ಯವಾಹಿನಿಗೆ ಬರಲು ಸಾಧ್ಯ. ಗಾಣಿಗ ಸಮಾಜ ಹಿಂದುಳಿದ ವರ್ಗಗಳ ಸಾಲಿನಲ್ಲಿ ಬರುವಂತಹ ಸಮಾಜವಾಗಿದ್ದು, ಆರ್ಥಿಕ, ಶೈಕ್ಷಣಿಕ, ಸಾಮಾಜಿಕವಾಗಿ ಪ್ರಗತಿ ಕಾಣಬೇಕಾಗಿದೆ ಎಂದರು.

ಸಣ್ಣ ಸಣ್ಣ ಸಮುದಾಯಗಳು ಮುಖ್ಯವಾಹಿನಿಗೆ ಬರಲು ಹರಸಾಹಸ ಪಡುತ್ತಿರುವುದನ್ನು ಕಾಣುತ್ತಿದ್ದೇವೆ. ಆದರೆ, ಸಂಘಟಿತರಾದಾಗ, ಶಿಕ್ಷಿತರಾದಾಗ ಮಾತ್ರ ಹಿಂದುಳಿದ ವರ್ಗಗಳು ಮೇಲೆ ಬರಲು ಸಾಧ್ಯವಾಗುತ್ತದೆ. ಹಿಂದೆ ಕುಲ-ಕಸುಬುಗಳನ್ನು ಅವಲಂಬಿಸಿ ಬದುಕಬೇಕಾದ ಅನಿವಾರ್ಯತೆ ಇತ್ತು. ಆದರೆ, ಇವತ್ತಿನ ಸ್ಪರ್ಧಾತ್ಮಕ ಪ್ರಪಂಚದಲ್ಲಿ ಜ್ಞಾನಾರ್ಜನೆ ಬಹಳ ಮುಖ್ಯ ಪಾತ್ರವಹಿಸುತ್ತದೆ. ಶಿಕ್ಷಣವಿಲ್ಲದಿದ್ದರೆ ಭವಿಷ್ಯದಲ್ಲಿ ಬಹಳ ಕಷ್ಟಗಳನ್ನು ಎದುರಿಸಬೇಕಾಗುತ್ತದೆ ಎಂದು ಎಚ್ಚರಿಸಿದರು.

ವಿಧಾನ ಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ಸಾಹಿತಿ ಕೃಷ್ಣಮೂರ್ತಿ, ನಿವೃತ್ತ ಪ್ರಾಂಶುಪಾಲ ಪುಟ್ಟಶೆಟ್ಟಿ, ಡಾ.ಪೂರ್ಣಿಮಾ, ಗೋಲ್ಡನ್ ಸುರೇಶ್, ಗಾಣಿಗ ಮಹಾಸಭಾ ಅಧ್ಯಕ್ಷ ವಿಜಯ್‌ಕುಮಾರ್, ಮುಖಂಡರಾದ ಪಾರ್ಥಸಾರಥಿ, ಡಾ.ಯೋಗೇಂದ್ರ, ಬಾಬು, ರಾಮಚಂದ್ರ, ಶಿವಣ್ಣ ಇದ್ದರು.

ಈಗಿನ ನಟರು ಡಾ.ರಾಜ್‌ಕುಮಾರ್‌ರವರ ಮಾದರಿಯಲ್ಲಿ ಕನ್ನಡ ನಾಡಿಗೆ ಹೋರಾಡಲಿ

● ಹಿರಿಯ ನಟ ಮುಖ್ಯಮಂತ್ರಿ ಚಂದ್ರು ಕಿವಿಮಾತು ● ರಾಜ್ಯಮಟ್ಟದ ಶ್ರೀಕೃಷ್ಣ ಆಲನಹಳ್ಳಿ ಪ್ರಶಸ್ತಿ ಪ್ರದಾನ



ಜನಪರ ಸಾಹಿತ್ಯ ಪರಿಷತ್ ವತಿಯಿಂದ ಹಿರಿಯ ನಟ ಮುಖ್ಯಮಂತ್ರಿ ಚಂದ್ರು ಹಾಗೂ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಅವರಿಗೆ 'ಶ್ರೀಕೃಷ್ಣ ಆಲನಹಳ್ಳಿ, ರಾಜ್ಯ ಮಟ್ಟದ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಮೈಸೂರು, ಡಿ.25(ಎಂಕೆ)-ಈಗಿನ ನಟರು ವರನಟ ಡಾ.ರಾಜಕುಮಾರ್ ಅವರನ್ನು ಮಾದರಿಯಾಗಿಟ್ಟುಕೊಂಡು ಕನ್ನಡ ನಾಡು-ನುಡಿಗೆ ಹೋರಾಡಲಿ ಎಂದು ರಂಗಕರ್ಮಿ, ಹಿರಿಯ ನಟ ಮುಖ್ಯಮಂತ್ರಿ ಚಂದ್ರು ಹೇಳಿದರು.

ಮೈಸೂರು-ಗದ್ದಿಗೆ ಮುಖ್ಯ ರಸ್ತೆಯಲ್ಲಿರುವ ಆಲನಹಳ್ಳಿಯ ಎಸ್‌ಸಿಎಂಎಸ್ ಶಾಲಾ ಆವರಣದಲ್ಲಿ ಜನಪರ ಸಾಹಿತ್ಯ ಪರಿಷತ್ತಿನ ವತಿಯಿಂದ ಆಯೋಜಿಸಿದ್ದ ಕನ್ನಡ ರಾಜ್ಯೋತ್ಸವ ಮತ್ತು ರಾಜ್ಯಮಟ್ಟದ 'ಶ್ರೀಕೃಷ್ಣ ಆಲನಹಳ್ಳಿ' ಪ್ರಶಸ್ತಿ ಪ್ರದಾನ ಹಾಗೂ ಮನೆ ಮನೆ ಕವಿಗೋಷ್ಠಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ನಟರು ಕನ್ನಡದಲ್ಲಿ ನಾಮಫಲಕಗಳಿರುವಂತೆ ನೋಡಿಕೊಳ್ಳಲಿ. ಜನರ ಪ್ರೀತಿ-ವಿಶ್ವಾಸಗಳಿಸಿಕೊಳ್ಳಲಿ. ನಡವಳಿಕೆ ಮುಖ್ಯವೇ ಹೊರತು ಹಣಗಳಿಕೆ ಮುಖ್ಯವಲ್ಲ ಎಂಬುದನ್ನು ಮೊದಲು ಅರಿತುಕೊಳ್ಳಬೇಕು. ಪರಸ್ಪರ ಸ್ನೇಹ-ಪ್ರೀತಿಯಿಂದಿರಬೇಕೆ ಹೊರತು ಸ್ಪರ್ಧೆಗಿಳಿಯಬಾರದು ಎಂದು ಕಿವಿಮಾತು ಹೇಳಿದರು.

ಕನ್ನಡ ಸಿನಿಮಾಗಳ ಪೈಪೋಟಿಯಿಂದ ಕನ್ನಡ ಚಿತ್ರರಂಗ ಸೊರಗುತ್ತಿದೆ. ಸ್ಪರ್ಧೆಗಿಳಿದಂತೆ ಕನ್ನಡ ಸಿನಿಮಾಗಳನ್ನು ಬಿಡುಗಡೆ ಮಾಡದಿದ್ದರೆ, ಸಿನಿಮಾಗಳು ಹೆಚ್ಚು ದಿನ ಓಡುತ್ತವೆ. ಜೊತೆಗೆ ಬೇರೆ ಭಾಷೆಯ ಸಿನಿಮಾಗಳ ಕುರಿತು ಎಚ್ಚರದಿಂದ ಇರಬೇಕು. ಇಂಥದರಲ್ಲಿ ಬದ್ಧ... ಯುದ್ಧಕ್ಕೆ ಸಿದ್ಧವೆನ್ನುವ ನಟ ಸುದೀಪ್ ಅವರು ನೇರವಾಗಿ ಪೈರಸಿ ವಿರುದ್ಧ ಯುದ್ಧ ಎನ್ನಬೇಕಿತ್ತು ಎಂದು ಕಿವಿಮಾತು ಹೇಳಿದರು.

ಕನ್ನಡ ವಿರೋಧಿಗಳಿಗೇಕೆ ಪ್ರೋತ್ಸಾಹ: ಇತ್ತೀಚಿನ ಕನ್ನಡ ಸಿನಿಮಾಗಳ ಶೀರ್ಷಿಕೆಗಳೇ ಕನ್ನಡದಲ್ಲಿರುವುದಿಲ್ಲ. ಡೆವಿಲ್, ಮಾರ್ಕ್, 45 ಎಂಬಿತ್ಯಾದಿ ಹೆಸರುಗಳನ್ನಿಡಲಾಗುತ್ತಿದೆ. ಇಂತಹ ಕನ್ನಡ ವಿರೋಧಿಗಳಿಗೇಕೆ ಪ್ರೋತ್ಸಾಹ ನೀಡಬೇಕು ಎಂದು ಪ್ರಶ್ನಿಸಿದರು.

ಓದುವ ಅಗತ್ಯವಿದೆ: ಕನ್ನಡದ ಲೇಖಕ ಶ್ರೀಕೃಷ್ಣ ಆಲನಹಳ್ಳಿ ಅವರ ಹೆಸರನ್ನು ಉಳಿಸುವ ಪ್ರಯತ್ನ ಅವರ ಊರಾದ ಆಲನಹಳ್ಳಿ ಮೂಲಕ ಆರಂಭವಾಗಿದ್ದು ಸ್ತುತ್ಯಾರ್ಹ. ಅವರ ಕೃತಿಗಳನ್ನು ಈಗಿನ ತಲೆಮಾರು ಓದುವ ಅಗತ್ಯವಿದೆ ಎಂದು ತಿಳಿಸಿದರು.

ಪ್ರಶಸ್ತಿ ಪ್ರದಾನ: ಬಳಿಕ ಹಿರಿಯ ನಟ ಮುಖ್ಯಮಂತ್ರಿ ಚಂದ್ರು ಹಾಗೂ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಅವರಿಗೆ ವಿಧಾನಪರಿಷತ್ ಮಾಜಿ ಉಪಸಭಾಪತಿ ಮರಿತಿಬ್ಬೇಗೌಡ, 'ಶ್ರೀಕೃಷ್ಣ ಆಲನಹಳ್ಳಿ' ರಾಜ್ಯ ಮಟ್ಟದ ಪ್ರಶಸ್ತಿ ಪ್ರದಾನ ಮಾಡಿದರು. ನಂತರ ನಡೆದ ಮನೆ ಮನೆ ಕವಿಗೋಷ್ಠಿಯಲ್ಲಿ ಪರಮೇಶ ಕೆ.ಉತ್ತನಹಳ್ಳಿ, ಬಿ.ಎನ್.ಮಾರುತಿ ಪ್ರಸನ್ನ, ಕಾತ್ಯಾಯಿನಿ ಯಶೋಮಿತ್ರ ಮತ್ತಿತರರು ಪ್ರೇಮಾ ಕವಿತೆಗಳನ್ನು ವಾಚಿಸಿದರು.

ಮಲೆ ಮಹದೇಶ್ವರ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಎ.ಇ.ರಘು, ಕಲಾವಿದ ಮೈಸೂರು ಆನಂದ್, ಕನ್ನಡ ಉಪನ್ಯಾಸಕಿ ಡಾ.ಎಂ.ಎಸ್.ಅನಿತಾ, ಜನಪರ ಸಾಹಿತ್ಯ ಪರಿಷತ್ತಿನ ರಾಜ್ಯಾಧ್ಯಕ್ಷ ಡಾ.ಎಂ.ಮಹೇಶ ಚಿಕ್ಕಲ್ಲೂರು, ರಾಜ್ಯ ಉಪಾಧ್ಯಕ್ಷ ಸಾಲುಂಡಿ ದೊರೆಸ್ವಾಮಿ, ನಿರ್ದೇಶಕ ವೀರಭದ್ರಸ್ವಾಮಿ ಮತ್ತಿತರರಿದ್ದರು.

ಜ.2ಕ್ಕೆ ಪಾಲಹಳ್ಳಿಯಲ್ಲಿ 'ಪ್ರಭುಲಿಂಗ ಲೀಲೆ' ನಾಟಕ



'ಪ್ರಭುಲಿಂಗ ಲೀಲೆ ಅಥವಾ ಅಲ್ಲಮ ಶರಣ ಸಂದರ್ಶನ' ನಾಟಕದ ಪೋಸ್ಟರ್ ಬಿಡುಗಡೆ ಮಾಡಲಾಯಿತು.

ಮೈಸೂರು, ಡಿ.25(ಎಂಕೆ)- ಮಾಜಿ ಸಚಿವ ದಿವಂಗತ ಹೆಚ್.ಎಸ್.ಮಹದೇವ ಪ್ರಸಾದ್ ಅವರ 9ನೇ ವರ್ಷದ ಸಂಸ್ಮರಣೋತ್ಸವದ ಅಂಗವಾಗಿ 2026ರ ಜ.2ರಂದು ರಾತ್ರಿ 9 ಗಂಟೆಗೆ ಪಾಲಹಳ್ಳಿಯಲ್ಲಿ ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಕಲಾ ಬಳಗದ ವತಿಯಿಂದ ಏರ್ಪಡಿಸಿರುವ 'ಪ್ರಭುಲಿಂಗ ಲೀಲೆ ಅಥವಾ ಅಲ್ಲಮ ಶರಣ ಸಂದರ್ಶನ' ನಾಟಕದ ಪೋಸ್ಟರ್ ಅನ್ನು ಬಿಡುಗಡೆ ಮಾಡಲಾಯಿತು.

ಜೆಎಸ್‌ಎಸ್ ಮಹಾವಿದ್ಯಾಪೀಠದ ಸಭಾಂಗಣದಲ್ಲಿ ನಾಟಕದ ಪೋಸ್ಟರ್ ಬಿಡುಗಡೆ ಮಾಡಿದ ಮಹಾವಿದ್ಯಾಪೀಠದ ಕಾರ್ಯದರ್ಶಿ ಎಸ್.ಪಿ.ಮಂಜುನಾಥ್ ಮಾತನಾಡಿ, ಪ್ರಭುಲಿಂಗ ಲೀಲೆ ನಾಟಕವೂ ಶರಣ ಪರಂಪರೆಯನ್ನು ಸಾರುವ ನಾಟಕವಾಗಿದೆ. ಹೆಚ್ಚಿನ ಸಂಖ್ಯೆಯಲ್ಲಿ ಕಲಾ ಪ್ರೋತ್ಸಾಹಕರು ಆಗಮಿಸಿ ಯಶಸ್ವಿಗೊಳಿಸಬೇಕೆಂದು ಮನವಿ ಮಾಡಿದರು. ಈ ವೇಳೆ ಚಾಮರಾಜ ಜಿಲ್ಲಾ ಸಹಕಾರ ಯೂನಿಯನ್ ಅಧ್ಯಕ್ಷ ನಂಜುಂಡ ಪ್ರಸಾದ್, ಕಲಾ ಬಳಗದ ಸಂಸ್ಥಾಪಕ ಕಲ್ಮಳ್ಳಿ ನಟರಾಜು, ಮುಖಂಡರಾದ ಮಾಲಂಗಿ ಸುರೇಶ್, ಬಿ.ಎಂ. ಪರಮೇಶ್, ಮಾಸ್ಟರ್ ಸುರೇಶ್ ಉಮ್ಮತ್ತೂರು, ಡಾ.ಮಲ್ಲು, ಶಿವಕುಮಾರ್, ಹಿರಿಯ ಕಲಾವಿದರಾದ ಲೋಹಿತ್, ಸಂತೋಷ, ಮಹೇಶ್ ಬಿಳಿಗೆರೆ ಇನ್ನಿತರರಿದ್ದರು.

ಪಿಎಚ್.ಡಿ ಪದವಿ



ಮೈಸೂರು,ಡಿ.25-ಡಾ. ಜಮುನಾ ಪ್ರಕಾಶ್ ಅವರ ಮಾರ್ಗದರ್ಶನದಲ್ಲಿ ರಾಜೇಶ್ ದೇವಿಶೆಟ್ಟಿ ಅವರು ಆಹಾರ ವಿಜ್ಞಾನ ಮತ್ತು ನ್ಯೂಟ್ರಿಷನ್ ವಿಷಯ ದಲ್ಲಿ ಸಂಶೋಧನೆ ನಡೆಸಿ ಸಾದರ ಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ. ಪದವಿಗೆ ಅಂಗೀಕರಿಸಿದೆ.



ಅಭಿನಂದನೆ...

ಮೈಸೂರಲ್ಲಿ ನಡೆದ ಮಹರ್ಷಿ ವಾಲ್ಮೀಕಿ ಜಾತ್ರೆಯ ಪೂರ್ವಭಾವಿ ಸಭೆಯಲ್ಲಿ ಭಾಗವಹಿಸಿದ್ದ ಶ್ರೀ ಪ್ರಸನ್ನ ನಂದಪುರಿ ಸ್ವಾಮೀಜಿ ಅವರನ್ನು ಅಭಿನಂದಿಸಲಾಯಿತು. ರಾಜ್ಯ ಅಹಿಂದ ಒಕ್ಕೂಟದ ಅಧ್ಯಕ್ಷ ದ್ಯಾವಪ್ಪನಾಯಕ, ಕೆ.ಆರ್.ಆಸ್ಪತ್ರೆ ಅಧೀಕ್ಷಕಿ ಡಾ.ಶೋಭಾ, ಡಾ.ಸೋಮಣ್ಣ, ಜಗದೀಶ್‌ಮೂರ್ತಿ ಈ ವೇಳೆ ಇದ್ದರು.

ವಾಜಪೇಯಿ ಅವರ 101ನೇ ಜನ್ಮ ದಿನಾಚರಣೆ

ಚಾಮುಂಡೇಶ್ವರಿ ಗ್ರಾಮಾಂತರ ಮಂಡಲದಿಂದ ಸಂಸದರ ಕ್ರೀಡಾ ಮಹೋತ್ಸವ, ಕ್ರಿಕೆಟ್ ಪಂದ್ಯಾವಳಿ



ಸಂಸದರ ಕ್ರೀಡಾ ಮಹೋತ್ಸವದ ಕ್ರಿಕೆಟ್ ಪಂದ್ಯಾವಳಿಯಲ್ಲಿ ವಿಜೇತರಾದವರಿಗೆ ಸಂಸದ ಯದುವೀರ್ ಬಹುಮಾನ ವಿತರಿಸಿದರು.

ಮೈಸೂರು,ಡಿ.25-ಭಾರತ ರತ್ನ ಅಟಲ್ ಬಿಹಾರಿ ವಾಜಪೇಯಿ ಅವರ 101ನೇ ಜನ್ಮ ದಿನಾಚರಣೆ ಪ್ರಯುಕ್ತ ಚಾಮುಂಡೇಶ್ವರಿ ಗ್ರಾಮಾಂತರ ಮಂಡಲ ವತಿಯಿಂದ ಸಂಸದರ ಕ್ರೀಡಾ ಮಹೋತ್ಸವ ಕಾರ್ಯಕ್ರಮದಡಿ ಕ್ರಿಕೆಟ್ ಪಂದ್ಯಾವಳಿ ಆಯೋಜಿಸಲಾಗಿತ್ತು.

ಪಂದ್ಯಾವಳಿಯಲ್ಲಿ ಕಡಕೊಳ ಮಹಾಶಕ್ತಿ ಕೇಂದ್ರ ತಂಡ, ಜಯಪುರ ಮಹಾಶಕ್ತಿ ಕೇಂದ್ರ ತಂಡದ ವಿರುದ್ಧ 85 ರನ್‌ಗಳ ಭರ್ಜರಿ ಅಂತರದಿಂದ ಗೆಲುವು ಸಾಧಿಸಿ ಪ್ರಥಮ, ಸ್ಪರ್ಧಾತ್ಮಕ ಹೋರಾಟ ನೀಡಿದ ಜಯಪುರ ತಂಡ ರನ್ನರ್‌ಅಪ್ ಆಗಿ ದ್ವಿತೀಯ ಬಹುಮಾನ ಪಡೆದುಕೊಂಡಿತು.

ಬಿಜೆಪಿ ಕಚೇರಿಯಲ್ಲಿ ನಡೆದ ಸಮಾರಂಭದಲ್ಲಿ ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ವಿಜೇತ ಹಾಗೂ ರನ್ನರ್‌ಅಪ್ ತಂಡಗಳಿಗೆ ಬಹುಮಾನಗಳನ್ನು ಪ್ರದಾನ ಮಾಡಿದರು. ಈ ಸಂದರ್ಭದಲ್ಲಿ ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ ಉಪಸ್ಥಿತರಿದ್ದು, ಕ್ರೀಡಾಪಟುಗಳನ್ನು ಅಭಿನಂದಿಸಿದರು.

ಗ್ರಾಮಾಂತರ ಜಿಲ್ಲಾಧ್ಯಕ್ಷರಾದ ಕುಂಬರಹಳ್ಳಿ ಸುಬ್ಬಣ್ಣ, ರಾಜ್ಯ ಪ್ರಕೋಷ್ಠ ಸಂಚಾಲಕ ಎನ್.ವಿ.ಫಣೀಶ್, ಎಸ್.ಡಿ. ಮಹೇಂದ್ರ, ಪ್ರಧಾನ ಕಾರ್ಯದರ್ಶಿ ಬಿ.ಎಂ.ರಘು, ಪರೀಕ್ಷಿತ್‌ರಾಜೇ ಅರಸ್, ಉಪಾಧ್ಯಕ್ಷ ಎನ್.ಅರುಣ್‌ಕುಮಾರ್ ಗೌಡ, ದಯಾನಂದ ಪಟೇಲ್, ಚಾಮುಂಡೇಶ್ವರಿ ಮಂಡಲದ ಅಧ್ಯಕ್ಷ ವೈ.ಟಿ.ರವಿ, ನಿಕಟಪೂರ್ವ ಅಧ್ಯಕ್ಷ ಗೆಜ್ಜಗಳ್ಳಿ ಮಹೇಶ್, ಹಿನಕಲ್ ಗಣೇಶ್, ಬೋಗಾದಿ ನಂದೀಶ್, ಗೋಪಾಲ್‌ಗೌಡ, ದಾರಿಪುರ ಡಿ. ಚಂದ್ರಶೇಖರ್, ರಾಮೇಗೌಡ, ರಾಘವೇಂದ್ರ, ತಳೂರು ನಂಜುಂಡಸ್ವಾಮಿ, ಬರಡನಪುರ ಗಿರೀಶ್, ಮಹೇಶ್ ಹಾಗೂ ತಂಡದ ಆಟಗಾರರಾದ ನಾಯಕ ಈರಪ್ಪ, ಉಪನಾಯಕ ಬ್ಯಾತಹಳ್ಳಿ ಮಧುಕುಮಾರ್, ಸಹ ಆಟಗಾರರಾದ ಶಿವಕುಮಾರ್ ಚಿಕ್ಕಾನ್ಯ, ಪ್ರದೀಪ್, ಕಿರಣ್, ರಾಹುಲ್, ರಂಗ, ದಿಕ್ಷೀತ್, ರಾಜೇಶ್, ಯೋಗಿಶ್, ಚಂದು, ರವಿ ಮುಂತಾದವರು ಉಪಸ್ಥಿತರಿದ್ದರು.

ಸಂಸದರ ಕ್ರೀಡಾ ಮಹೋತ್ಸವದಲ್ಲಿ ವಿಜೇತರಿಗೆ ಪ್ರಶಸ್ತಿ ಪ್ರಮಾಣಪತ್ರ, ಪದಕ ವಿತರಣೆ



'ಸಂಸದರ ಕ್ರೀಡಾ ಮಹೋತ್ಸವ'ದ ಬ್ಯಾಸ್ಕೆಟ್ ಬಾಲ್ ಪಂದ್ಯಾವಳಿಯಲ್ಲಿ ವಿಜೇತ ಒಡೆಯರ್ ತಂಡಕ್ಕೆ ಆಕರ್ಷಕ ಟ್ರೋಫಿ ನೀಡಿ ಅಭಿನಂದಿಸಲಾಯಿತು. ಸಂಸದ ಯದುವೀರ್, ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ ಮತ್ತಿತರರಿದ್ದರು.

ಮೈಸೂರು,ಡಿ.25(ಎಂಕೆ)-ಫಿಟ್ ಯುವ ಫಾರ್ ವಿಕಸಿತ್ ಭಾರತದ ಯೋಜನೆಯಡಿ ಕಳೆದೊಂದು ತಿಂಗಳಿಂದ ನಗರದ ವಿವಿಧೆಡೆ ನಡೆದ 'ಸಂಸದರ ಕ್ರೀಡಾ ಮಹೋತ್ಸವ'ದ ಸಮಾರೋಪ ಸಮಾರಂಭದಲ್ಲಿ ವಿವಿಧ ಕ್ರೀಡೆಗಳಲ್ಲಿ ವಿಜೇತ ತಂಡಗಳಿಗೆ ಪ್ರಶಸ್ತಿ ಪ್ರಮಾಣ ಪತ್ರ ಹಾಗೂ ಆಕರ್ಷಕ ಪದಕಗಳನ್ನು ನೀಡಿ ಅಭಿನಂದಿಸಲಾಯಿತು.

ಮೈಸೂರಿನಲ್ಲಿರುವ ಭಾರತೀಯ ಭಾಷಾ ಸಂಸ್ಥಾನದ ಸಭಾಂಗಣದಲ್ಲಿ ಬುಧವಾರ ಆಯೋಜಿಸಿದ್ದ ಸಮಾರೋಪ ಕಾರ್ಯಕ್ರಮದಲ್ಲಿ ಮೈಸೂರು-ಕೊಡಗು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ವಿಜೇತ ಕ್ರೀಡಾಪಟುಗಳಿಗೆ ಪದಕಗಳನ್ನು ನೀಡಿ ಅಭಿನಂದಿಸಿದರು.

ಹಾಕಿ ಪಂದ್ಯಾವಳಿಯಲ್ಲಿ ಡಿವೈಇಎಸ್ ಮೈಸೂರು ತಂಡ ಪ್ರಥಮ ಸ್ಥಾನ ಗೆದ್ದರೆ, ಟೆರೇಸಿಯನ್ ಪಿಯು ಕಾಲೇಜು ತಂಡದ ರನ್ನರ್ ಅಪ್ ಆಯಿತು. ಹಾಗೆಯೇ ಬ್ಯಾಸ್ಕೆಟ್ ಬಾಲ್ ಪಂದ್ಯಾವಳಿಯಲ್ಲಿ ಒಡೆಯರ್ ತಂಡ ಪ್ರಥಮ ಸ್ಥಾನ ಪಡೆದರೆ, ಇಮ್ಮಡಿ ಪುಲಕೇಶಿ ತಂಡ ರನ್ನರ್ ಅಪ್ ಆಯಿತು. ವಿಶೇಷವಾಗಿ ಬಿಜೆಪಿ ಪಕ್ಷದ ಪದಾಧಿಕಾರಿಗಳು ಹಾಗೂ ಕಾರ್ಯಕರ್ತರಿಗಾಗಿ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಆಯೋಜಿಸಿದ್ದ ಕ್ರಿಕೆಟ್ ಪಂದ್ಯಾವಳಿಯಲ್ಲಿ ವಿಜೇತ ಕಡಕೊಳ ಮಹಾಶಕ್ತಿ ತಂಡಕ್ಕೆ ಆಕರ್ಷಕ ಟ್ರೋಫಿ ನೀಡಿ ಪ್ರೋತ್ಸಾಹಿಸಲಾಯಿತು.

ವಿಜೇತ ಕ್ರೀಡಾಪಟುಗಳನ್ನು ಅಭಿನಂದಿಸಿ ಮಾತನಾಡಿದ ಸಂಸದ ಯದುವೀರ್, 'ಸಂಸದರ ಕ್ರೀಡಾ ಮಹೋತ್ಸವ'ದ ಉದ್ದೇಶ ಕ್ಷೇತ್ರದಲ್ಲಿರುವ ಕ್ರೀಡಾಪಟುಗಳಿಗೆ ಉತ್ತೇಜನ ನೀಡುವುದಾಗಿದೆ. ಮೊದಲೆಲ್ಲಾ ಮಕ್ಕಳು ಕ್ರೀಡೆಗಳಲ್ಲಿ ಭಾಗವಹಿಸಿದರೆ, ಸಮಯ ವ್ಯರ್ಥ ಎನ್ನುತ್ತಿದ್ದರು. ಆದರೆ, ಇತ್ತೀಚಿನ ವರ್ಷಗಳಲ್ಲಿ ಕ್ರೀಡೆಯು ಮಹತ್ವದ ಗುಣಮಟ್ಟದ ಜೀವನಕ್ಕೆ ಅತ್ಯುತ್ತಮ ಆಯ್ಕೆಯಾಗಿದೆ ಎಂದರು.

ನಗರದ ಪ್ರದೇಶದಲ್ಲಾಗುತ್ತಿರುವ ಕ್ರೀಡಾ ಪ್ರೋತ್ಸಾಹ ಚಟುವಟಿಕೆಗಳು ಗ್ರಾಮೀಣ ಪ್ರದೇಶಗಳಲ್ಲಿಯೂ ಆಗಬೇಕು. ಈ ನಿಟ್ಟಿನಲ್ಲಿ ಕಾರ್ಯಕ್ರಮಗಳನ್ನು ರೂಪಿಸಲಾಗುವುದು. ಪ್ರಧಾನಿ ನರೇಂದ್ರಮೋದಿ ಅವರು ಹೇಳಿದಂತೆ ಕಾಮನ್‌ವೆಲ್ತ್ ಗೇಮ್ಸ್ 2030ರಲ್ಲಿ ಅಹಮದಬಾದ್‌ನಲ್ಲಿ ಆಯೋಜನೆಯಾದ ನಂತರ 2036ಕ್ಕೆ ಒಲಂಪಿಕ್ಸ್ ಆತಿಥ್ಯ ವಹಿಸುವ ಗುರಿ ಹೊಂದಲಾಗಿದೆ. ಇದೊಂದು ಸಮಸ್ತ ಭಾರತೀಯರಿಗೆ ಹೆಮ್ಮೆಯ ವಿಚಾರವಾಗಿದ್ದು, ಇದನ್ನು ಸವಾಲಾಗಿ ಸ್ವೀಕರಿಸಿ, ಯಶಸ್ವಿಗೊಳಿಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ ಎಂದರು.


ಭಾರತೀಯ ಭಾಷಾ ಸಂಸ್ಥಾನದ ನಿರ್ದೇಶಕ ಪ್ರೊ.ಶೈಲೇಂದ್ರ ಮೋಹನ್, ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ, ಜಿಲ್ಲಾಧ್ಯಕ್ಷ ಕುಂಬ್ರಳ್ಳಿ ಸುಬ್ಬಣ್ಣ, ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಮಂಡಲ ಅಧ್ಯಕ್ಷ ರವಿ ಮತ್ತಿತರರು ಉಪಸ್ಥಿತರಿದ್ದರು.

ಮಡುವಿನಕೋಡಿಯಲ್ಲಿ ವಿದ್ಯುತ್ ವಿತರಣಾ ಕೇಂದ್ರ ಉದ್ಘಾಟನೆ

ರಾಜ್ಯದ ವಿದ್ಯುತ್ ಸಮಸ್ಯೆ ನಿವಾರಿಸಿದ ಕೀರ್ತಿ ಜೆಡಿಎಸ್‌ಗೆ ಸಲ್ಲುತ್ತೆ: ಶಾಸಕ ಹೆಚ್.ಟಿ.ಮಂಜು ಅಭಿಪ್ರಾಯ

ಕೆ.ಆರ್.ಪೇಟೆ, ಡಿ.25– ಈ ಹಿಂದೆ ಜೆಡಿಎಸ್, ಬಿಜೆಪಿ ಸರ್ಕಾರದಲ್ಲಿ ಇಂಧನ ಸಚಿವರಾಗಿದ್ದ ಹೆಚ್.ಡಿ.ರೇವಣ್ಣ ಅವರ ಅಧಿಕಾರಾವಧಿಯಲ್ಲಿ ರಾಜ್ಯಾದ್ಯಂತ ವಿದ್ಯುತ್ ಕ್ರಾಂತಿ ಆಗಿದೆ. ಅಗತ್ಯವಿರುವ ಕಡೆ ವಿದ್ಯುತ್ ಸಬ್ ಸ್ಟೇಷನ್‌ಗಳನ್ನು ನಿರ್ಮಿಸಲಾಗಿದೆ. ಪರಿಣಾಮ ರಾಜ್ಯದಲ್ಲಿ ಬೇಸಿಗೆಯಲ್ಲೂ ವಿದ್ಯುತ್ ಸಮಸ್ಯೆ ಕಂಡು ಬರುವುದಿಲ್ಲ. ಇದಕ್ಕೆ ಮಾಜಿ ಸಿಎಂ ಹೆಚ್.ಡಿ. ಕುಮಾರಸ್ವಾಮಿ ಮತ್ತು ಮಾಜಿ ಸಚಿವ ಹೆಚ್.ಡಿ.ರೇವಣ್ಣ ಕಾರಣ ಎಂದು ಶಾಸಕ ಹೆಚ್.ಟಿ.ಮಂಜು ಅಭಿಪ್ರಾಯಪಟ್ಟರು.

ತಾಲೂಕಿನ ಬೂಕನಕೆರೆ ಹೋಬಳಿ ಮಡುವಿನಕೋಡಿ ಗ್ರಾಮದಲ್ಲಿ 66/11 ಕೆವಿ ಸಾಮರ್ಥ್ಯದ ವಿದ್ಯುತ್ ವಿತರಣಾ ಕೇಂದ್ರ ಉದ್ಘಾಟಿಸಿ ಮಾತನಾಡಿದ ಅವರು, ಮೈತ್ರಿ ಸರ್ಕಾರ ಅಧಿಕಾರಕ್ಕೆ ಬರುವುದಕ್ಕೂ ಮುನ್ನಾ ರಾಜ್ಯಾದ್ಯಂತ ವಿದ್ಯುತ್ ಸಮಸ್ಯೆ ವ್ಯಾಪಕವಾಗಿತ್ತು. ಬಳಿಕ ಬಂದ ಮೈತ್ರಿ ಸರ್ಕಾರದಲ್ಲಿ ಇಂಧನ ಸಚಿವರಾಗಿದ್ದ ಹೆಚ್.ಡಿ.ರೇವಣ್ಣ ಅವರ ಅಧಿಕಾರಾವಧಿಯಲ್ಲಿ ರಾಜ್ಯದಲ್ಲಿದ್ದ ವಿದ್ಯುತ್ ಸಮಸ್ಯೆ ಬಗೆಹರಿಸುವ ಸಲುವಾಗಿ ಪ್ರತಿ ತಾಲೂಕಿನಲ್ಲಿ ಅಗತ್ಯವಿರುವ ಕಡೆ ಹತ್ತಾರು ಸಬ್ ಸ್ಟೇಷನ್‌ಗಳನ್ನು ನಿರ್ಮಿಸಿ ವಿದ್ಯುತ್ ಸಮಸ್ಯೆ ಹೋಗಲಾಡಿಸಿದ ಕೀರ್ತಿ ನಮ್ಮ ಜೆಡಿಎಸ್ ಪಕ್ಷಕ್ಕೆ ಸಲ್ಲುತ್ತದೆ ಎಂದರು.



ವಿದ್ಯುತ್ ವಿತರಣಾ ಕೇಂದ್ರವನ್ನು ಶಾಸಕ ಹೆಚ್.ಟಿ.ಮಂಜು ಉದ್ಘಾಟಿಸಿದರು.

ರಾಜ್ಯ ಸರ್ಕಾರ ಕೃಷಿ ಪಂಪಸೆಟ್‌ಗಳಿಗೆ ಸ್ಮಾರ್ಟ್ ಮೀಟರ್ ಅಳವಡಿಸಲು ಮುಂದಾಗಿದೆ. ಇದನ್ನು ತಕ್ಷಣ ಕೈ ಬಿಡಬೇಕು. ರೈತರು ಕಷ್ಟ ಪಟ್ಟು ಬೋರ್‌ವೆಲ್ ಕೊರೆಸಿ ಹಾಕಿಕೊಂಡಿರುವ ವಿದ್ಯುತ್ ಸಂಪರ್ಕವನ್ನು ಅಕ್ರಮ ಸಕ್ರಮ ಯೋಜನೆಯಡಿ ಸಕ್ರಮ ಮಾಡಿಕೊಳ್ಳಲು ಅವಕಾಶ ಮಾಡಿಕೊಡಬೇಕು. ಕೃಷಿ ಪಂಪ್ ಸೆಟ್‌ಗಳಿಗೆ ಉಚಿತ ವಿದ್ಯುತ್ ನೀಡುವ ಯೋಜನೆ ಮುಂದುವರೆಸಬೇಕು. ಒಂದು ವೇಳೆ ಉಚಿತ ವಿದ್ಯುತ್ ನಿಲ್ಲಿಸಿದರೆ ರೈತರ ಕೊಳವೆ ಬಾವಿ ಆಶ್ರಿತ ನೀರಾವರಿ ಯೋಜನೆ ಬಂದ್ ಆಗಲಿದೆ. ಆಗ ಆಹಾರ ಉತ್ಪಾದನೆ ಗಣನೀಯವಾಗಿ ಕುಂಠಿತಗೊಂಡು ಆಹಾರ ಸಮಸ್ಯೆ ಹೆಚ್ಚಾಗಿ ಬೆಲೆ ಗಗನಕ್ಕೆ ಏರಿಕೆಯಾಗಲಿದೆ. ಹಾಗಾಗಿ ಕೃಷಿ ಪಂಪ್ ಸೆಟ್ ಆಧಾರಿತ ನೀರಾವರಿ ಯೋಜನೆಗೆ ಉಚಿತ ವಿದ್ಯುತ್ ನೀಡುವುದನ್ನು ಮುಂದು ವರೆಸಬೇಕು. ಆ ಮೂಲಕ ಆಹಾರ ಉತ್ಪಾದನೆ ಸಮತೋಲನ ಕಾಪಾಡಬೇಕು.


- ಹೆಚ್.ಟಿ.ಮಂಜು, ಶಾಸಕ.

ಅದೇ ರೀತಿ ತಾಲೂಕಿನ ವಿವಿಧೆಡೆ ಸಬ್ ಸ್ಟೇಷನ್‌ಗಳನ್ನು ನಿರ್ಮಿಸಲಾಗಿದ್ದು, ಸಮರ್ಪಕವಾಗಿ ವಿದ್ಯುತ್ ಪೂರೈಕೆಯಾಗುತ್ತಿದೆ. ಇದರಿಂದ ತಾಲೂಕಿನಲ್ಲಿ ವಿದ್ಯುತ್ ಸಮಸ್ಯೆ ನಿವಾರಣೆಯಾಗಿದೆ. ಜನಸಾಮಾನ್ಯರಿಗೆ ರಸ್ತೆ, ವಿದ್ಯುತ್, ಕುಡಿಯುವ ನೀರು ಸೌಲಭ್ಯ ನೀಡಿದರೆ ಉಳಿದ ಸಮಸ್ಯೆಯನ್ನು ಹಂತ ಹಂತವಾಗಿ ಬಗೆಹರಿಸಬಹುದು ಎಂದರು.

ಚೆಸ್ಕಾಂ ಕಾರ್ಯ ನಿರ್ವಾಹಕ ಇಂಜಿನಿಯರ್ ಮಲ್ಲಸ್ವಾಮಿ, ಕಿರಿಯ ಇಂಜಿನಿಯರ್ ಫಾಜಿಲ್, ಗ್ರಾಪಂ ಅಧ್ಯಕ್ಷೆ ಪ್ರೀತಿ, ಉಪಾಧ್ಯಕ್ಷ ನಾಗರಾಜು, ಪಿಡಿಓ ಮಹೇಶ್, ತಾಲೂಕು ಜೆಡಿಎಸ್ ಮಹಿಳಾ ಘಟಕದ ಪ್ರಧಾನ ಕಾರ್ಯದರ್ಶಿ ರತಿ, ಗ್ರಾಪಂ ಸದಸ್ಯರಾದ ರವಿ, ಚಂದ್ರಹಾಸ, ಮುಖಂಡರಾದ ಪಿಎಲ್‌ಡಿ ಬ್ಯಾಂಕ್ ಸಂದೇಶ್, ವಿಜಯ್ ಕುಮಾರ್, ಎಂ.ಕೆ.ಸಂಜು, ನಾಗರಾಜು, ರವಿಕುಮಾರ್, ಗಂಗಾಧರ್, ಡೇರಿ ನಿರ್ದೇಶಕರಾದ ಅನ್ವೇಶ್, ಸತೀಶ್, ಶಾಸಕರ ಆಪ್ತ ಸಹಾಯಕ ಧ್ರುವ ಮತ್ತಿತರರಿದ್ದರು.

ಶಾಸಕ ಜಯಚಂದ್ರ ಕುಟುಂಬದ ವಿರುದ್ಧ ಭೂಕಬಳಿಕೆ ಆರೋಪ ಸತ್ಯಕ್ಕೆ ದೂರ

ಹಲಗೂರು, ಡಿ.25– ಮಂಡ್ಯದ ಜಿಲ್ಲಾಧಿಕಾರಿ ಕಚೇರಿ ಎದುರು ಇತ್ತೀಚೆಗೆ ನಡೆದ ಪ್ರತಿಭಟನೆ ವೇಳೆ ಕರ್ನಾಟಕ ಪ್ರಾಂತ ರೈತ ಸಂಘದ ಎನ್.ಎಲ್.ಭರತ್ ರಾಜ್ ಅವರು ಶಾಸಕ ಟಿ.ಬಿ.ಜಯಚಂದ್ರ ಕುಟುಂಬದ ವಿರುದ್ಧ ಮಾಡಿರುವ ಭೂಕಬಳಿಕೆ ಆರೋಪ ಸತ್ಯಕ್ಕೆ ದೂರ ಎಂದು ಜಯಚಂದ್ರ ಅವರ ಸಹೋದರ ಸಂಬಂಧಿ ಹಾಗೂ ವಕೀಲ ಟಿ.ಜೆ. ಚಂದನ್ ಸ್ಪಷ್ಟಪಡಿಸಿದರು.



ಹಲಗೂರಿನಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಡಿ.22ರಂದು ಕರ್ನಾಟಕ ಪ್ರಾಂತ ರೈತ ಸಂಘದ ಕಾರ್ಯಕರ್ತರು ಮಳವಳ್ಳಿ ತಾಲೂಕಿನ ಗಾಣಾಳು ಗ್ರಾಮದ ಸರ್ವೇ ನಂ.48ರ ಜಮೀನಿಗೆ ಸಂಬಂಧಿಸಿದಂತೆ ಶಾಸಕ ಟಿ.ಬಿ.ಜಯಚಂದ್ರ ಕುಟುಂಬ ಬಡ ರೈತರ ಮೇಲೆ ದಬ್ಬಾಳಿಕೆ ನಡೆಸುತ್ತಿದೆ ಎಂದು ಆರೋಪಿಸಿ ಪ್ರತಿಭಟನೆ ನಡೆಸಿದ್ದಾರೆ. ಆದರೆ ಈ ಆರೋಪ ದಲ್ಲಿ ಯಾವುದೇ ಸತ್ಯವಿಲ್ಲ. ನಾವು ಯಾವುದೇ ರೈತರ ಮೇಲೆ ದಬ್ಬಾಳಿಕೆ ಅಥವಾ ದೌರ್ಜನ್ಯ ನಡೆಸಿಲ್ಲ. ಹಲವು ವರ್ಷಗಳ ಹಿಂದೆಯೇ ಕಾನೂನು ಮತ್ತು ನಿಯಮಾನುಸಾರ ಜಮೀನು ಖರೀದಿ ಮಾಡಲಾಗಿದೆ ಎಂದರು.

ಶಾಸಕ ಟಿ.ಬಿ.ಜಯಚಂದ್ರ ಅವರ ಪುತ್ರ ಮತ್ತು ಪತ್ನಿ ಹೆಸರಿನಲ್ಲಿ ಗಾಣಾಳು ಗ್ರಾಮದ ಸರ್ವೇ ನಂಬರ್ 48ರಲ್ಲಿ 57 ಎಕರೆ ಜಮೀನು ಖರೀದಿಸಲಾಗಿದೆ. ಆದರೆ ಆ ಜಮೀನಿನಲ್ಲಿ ಬಡ ರೈತರು ನೂರಾರು ವರ್ಷಗಳಿಂದ ಅನುಭವದಲ್ಲಿದ್ದಾರೆ ಹಾಗೂ ಸರ್ಕಾರದಿಂದ ಸಾಗುವಳಿ ಪತ್ರ ನೀಡಲಾಗಿದೆ ಎಂಬ ಆರೋಪವೂ ಸುಳ್ಳಾಗಿದೆ ಎಂದರು.

ಜಯಚಂದ್ರ ಅವರ ಸೊಸೆ ರಂಜಿತಾ ಕೋಂ ಟಿ.ಜೆ.ಸಂತೋಷ್ ಅವರ ಹೆಸರಿನಲ್ಲಿ ಗಾಣಾಳು ಸರ್ವೇ ನಂ.200, 202, 203, 206, 208, 211 ಮತ್ತು 212ರಲ್ಲಿ ನಿಯಮಾನುಸಾರ 48 ಎಕರೆ ಜಮೀನು ಖರೀದಿಸಲಾಗಿದೆ. ಜಿ.ಮಹೇಶ್ವರಯ್ಯ ಬಿನ್ ಗಂಗಪ್ಪ ಅವರ ಹೆಸರಿನಲ್ಲಿ ಗಾಣಾಳು ಸರ್ವೇ ನಂ.50, 51, 52, 202ರಲ್ಲಿ 9.10 ಎಕರೆ ಜಮೀನು ಖರೀದಿಸಿದ್ದು, ಮಗಳಾದ ರಂಜಿತಾ ಅವರಿಗೆ ದಾನಪತ್ರ ಮಾಡಲಾಗಿದೆ ಎಂದರು.

ಬಡ ರೈತರು ಸಾಗುವಳಿದಾರರಿಗೆ ರಕ್ಷಣೆ ನೀಡಿ ಅನುಭವದಂತೆ ಪೋಡಿ ಮಾಡಬೇಕು. ಜಿಲ್ಲಾಧಿಕಾರಿ ಹಾಗೂ ಸರ್ವೇ ಇಲಾಖೆಯ ಡಿಡಿಎಲ್‌ಆರ್ ಮಧ್ಯ ಪ್ರವೇಶಿಸಿ ನಕಲಿ ಪೋಡಿ ರದ್ದುಪಡಿಸಬೇಕು ಎಂಬ ಬೇಡಿಕೆ ನಿಯಮ ಬಾಹಿರವಾಗಿದೆ. ಇಲ್ಲಿ ಯಾವುದೇ ರೈತರನ್ನು ಒಕ್ಕಲೆಬ್ಬಿಸುವ ಉದ್ದೇಶವೇ ಇಲ್ಲ ಎಂದು ಸ್ಪಷ್ಟಪಡಿಸಿದರು.

ಟಿ.ಬಿ.ಜಯಚಂದ್ರ ಕುಟುಂಬದವರು ನಕಲಿ ಪೋಡಿ ಮಾಡಿಸಿಕೊಂಡು ಬಡ ರೈತರ ಮೇಲೆ ದಬ್ಬಾಳಿಕೆ ನಡೆಸುತ್ತಿದ್ದಾರೆ. ಕಂದಾಯ ಇಲಾಖೆ ಅಧಿಕಾರಿಗಳು, ಸರ್ವೇಯರ್ ಮತ್ತು ಪೊಲೀಸ್ ಇಲಾಖೆ ಅಧಿಕಾರಿಗಳ ಬೆಂಬಲ ಇದೆ ಎಂಬ ಆರೋಪ ನಿರಾಧಾರವಾಗಿವೆ. ಸಮಾಜದಲ್ಲಿ ಗೌರವಯುತ ಸ್ಥಾನದಲ್ಲಿರುವ ವ್ಯಕ್ತಿಗಳ ಮೇಲೆ ಇಂತಹ ಸುಳ್ಳು ಆರೋಪ ನೀಡುವುದು ಸಮಂಜಸವಲ್ಲ. ಕೂಡಲೇ ಹೇಳಿಕೆ ವಾಪಸ್ ಪಡೆಯಬೇಕು ಎಂದು ಆಗ್ರಹಿಸಿದರು.

ಕಾರು ಪಲ್ಟಿ: ಯುವಕ ಸ್ಥಳದಲ್ಲೇ ಸಾವು



ಕೆ.ಆರ್.ಪೇಟೆ, ಡಿ.25– ರಸ್ತೆಯಲ್ಲಿ ಒಕ್ಕಣೆ ಮಾಡುತ್ತಿದ್ದ ರಾಗಿ ಮೇಲೆ ಕಾರು ಚಲಿಸುವಾಗ ನಿಯಂತ್ರಣ ತಪ್ಪಿ ಪಲ್ಟಿಯಾಗಿ ಯುವಕ ಸ್ಥಳದಲ್ಲೇ ಸಾವನ್ನಪ್ಪಿ, ಯುವತಿ ಗಾಯ ಗೊಂಡಿರುವ ಘಟನೆ ತಾಲೂಕಿನ ಬಣ್ಣೇನಹಳ್ಳಿ ಕೈಗಾರಿಕಾ ಪ್ರದೇಶದ ಬೂಕನಕೆರೆ–ಡಿಂಕಾ–ಅಶೋಕನಗರ ಮುಖ್ಯ ರಸ್ತೆಯಲ್ಲಿ ಗುರುವಾರ ನಡೆದಿದೆ.



ಪ್ರಜ್ವಲ್

ತಾಲೂಕಿನ ಪಿ.ಬಿ.ಮಂಚನಹಳ್ಳಿ ಗ್ರಾಮದ ನಿವಾಸಿ ಪ್ರಜ್ವಲ್(19) ಸಾವನ್ನಪ್ಪಿದ ಯುವಕ. ಈತನ ಸಂಬಂಧಿ ಕಾವ್ಯ(26) ಗಾಯಗೊಂಡವರು. ಕಳೆದ ಒಂದು ತಿಂಗಳಿಂದ ನಿತ್ಯ ರೈತರು ರಸ್ತೆಯಲ್ಲಿ ರಾಗಿ ಹುಲ್ಲು ಹಾಕಿ ಒಕ್ಕಣೆ ಮಾಡುತ್ತಿದ್ದರು. ಈಗಾಗಲೇ ಹಲವು ಅಪಘಾತ ಸಂಭವಿಸಿದರೂ ಪೊಲೀಸರು ಯಾವುದೇ ಕ್ರಮ ಕೈಗೊಂಡಿರಲಿಲ್ಲ. ಹೀಗಾಗಿ ಇಂದು ಸಹ ರೈತರು ರಸ್ತೆಯಲ್ಲಿ ರಾಗಿ ಹುಲ್ಲು ಹರಡಿ ಒಕ್ಕಣೆ ಮಾಡುತ್ತಿದ್ದ ವೇಳೆ ಪ್ರಜ್ವಲ್ ಕಾರನ್ನು ರಾಗಿ ಮೇಲೆ ಚಾಲನೆ ಮಾಡಿದ್ದಾರೆ. ಈ ವೇಳೆ ನಿಯಂತ್ರಣ ಕಳೆದುಕೊಂಡ ಕಾರು ಪಲ್ಟಿಯಾಗಿದೆ. ಪರಿಣಾಮ ತೀವ್ರ ಗಾಯಗೊಂಡ ಪ್ರಜ್ವಲ್ ಸ್ಥಳದಲ್ಲೇ ಸಾವನ್ನಪ್ಪಿದರೇ, ಅವರ ಹತ್ತಿರದ ಸಂಬಂಧಿ ಕಾವ್ಯ ಅವರು ಗಂಭೀರವಾಗಿ ಗಾಯಗೊಂಡು ಆಸ್ಪತ್ರೆಗೆ ದಾಖಲಾಗಿದ್ದಾರೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಗ್ರಾಮಾಂತರ ಠಾಣೆ ಇನ್ಸ್‌ಪೆಕ್ಟರ್ ಆನಂದೇಗೌಡ ಹಾಗೂ ಸಿಬ್ಬಂದಿ ಪರಿಶೀಲನೆ ನಡೆಸಿದರು. ಬಳಿಕ ರಾಗಿ ಒಕ್ಕಣೆ ಮಾಡುತ್ತಿದ್ದ ರೈತರ ವಿರುದ್ಧ ಪ್ರಕರಣ ದಾಖಲಿಸಿಕೊಂಡು ಮುಂದಿನ ತನಿಖೆ ಕೈಗೊಂಡು, ನಾಳೆಯಿಂದ ರಸ್ತೆಯಲ್ಲಿ ಒಕ್ಕಣೆ ಮಾಡಿದರೆ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದ್ದಾರೆ. ಈ ಸಂಬಂಧ ಕೆ.ಆರ್.ಪೇಟೆ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪತ್ನಿ ಬಗ್ಗೆ ಅಪಪ್ರಚಾರ ಮಾಡುತ್ತಿದ್ದ ಸ್ನೇಹಿತನ ಹತ್ಯೆಗೈದ ಪತಿ

ಶ್ರೀರಂಗಪಟ್ಟಣ, ಡಿ.25– ತನ್ನ ಪತ್ನಿ ಬಗ್ಗೆ ಅಪಪ್ರಚಾರ ಮಾಡುತ್ತಿದ್ದ ಸ್ನೇಹಿತನನ್ನು ಪತಿ ಹತ್ಯೆ ಮಾಡಿರುವ ಘಟನೆ ಪಟ್ಟಣದಲ್ಲಿ ಬುಧವಾರ ಮಧ್ಯಾಹ್ನ ನಡೆದಿದೆ.



ಬೆಂಗಳೂರು ಮೂಲದ ಕೆ.ಜಿ.ಹಳ್ಳಿಯ ಸೂರಿ ಅಲಿಯಾಸ್ ಸುರೇಶ್ ಹತ್ಯೆಯಾದವರು. ನಿಖಿಲ್ ಕೊಲೆ ಆರೋಪಿ. ಈತ ಈ ಹಿಂದೆ ಯಾವುದೋ ಪ್ರಕರಣದಲ್ಲಿ ಭಾಗಿಯಾಗಿ ಬಾಲ ಮಂದಿರದಲ್ಲಿ ಬೆಳೆದಿದ್ದ ಎನ್ನಲಾಗಿದೆ. ಬಳಿಕ ನಿಖಿಲ್ ಕಳೆದ 6 ವರ್ಷಗಳ ಹಿಂದೆ ರಾಮನಗರ ಮೂಲದ ಯುವತಿಯೊಬ್ಬಳನ್ನು ಮದುವೆಯಾಗಿದ್ದ. ಆದರೆ ಆಕೆ 3 ವರ್ಷಗಳ ಹಿಂದೆ ಬೇರೆಯೊಬ್ಬನ ಜೊತೆ ಓಡಿ ಹೋಗಿದ್ದಳು. ಬಳಿಕ ಶ್ರೀರಂಗಪಟ್ಟಣಕ್ಕೆ ಆಗಮಿಸಿ ವಾಸವಿದ್ದ ನಿಖಿಲ್ ಸಣ್ಣ ಪುಟ್ಟ ಕೆಲಸ ಮಾಡಿಕೊಂಡಿದ್ದ. ಆದರೆ ಪತ್ನಿ ಓಡಿ ಹೋಗಿರುವ ವಿಚಾರ ತಿಳಿದಿದ್ದ ಈತನ ಸ್ನೇಹಿತ ಸೂರಿ ಪದೇ ಪದೆ ಸಾರ್ವಜನಿಕವಾಗಿ ಅವಹೇಳನ ಮಾಡುವ ಮೂಲಕ ಮರ್ಯಾದೆ ಕಳೆಯುವ ಕೆಲಸ ಮಾಡುತ್ತಿದ್ದ ಎನ್ನಲಾಗಿದೆ. ಇದರಿಂದ ಆಕ್ರೋಶಗೊಂಡಿದ್ದ ನಿಖಿಲ್ ಬುಧವಾರ ಮಧ್ಯಾಹ್ನ ಕುಡಿದ ಮತ್ತಿನಲ್ಲಿ ಪಟ್ಟಣದ ಹಳೇ ರೈಲ್ವೆ ಹಳಿ ಮೇಲೆ ಸೂರಿಯನ್ನು ಹತ್ಯೆ ಮಾಡಿ ಪರಾರಿಯಾಗಲು ಯತ್ನಿಸಿದ್ದ. ಸಾರ್ವಜನಿಕರು ಹಳೇ ರೈಲ್ವೆ ಹಳಿ ಮೇಲೆ ಗಲಾಟೆ ನಡೆಯುತ್ತಿದೆ ಎಂದು ನೀಡಿದ ಮಾಹಿತಿ ಮೇರೆಗೆ ಆಗಮಿಸಿದ ಪೊಲೀಸರು ನಿಖಿಲ್‌ನನ್ನು ವಶಕ್ಕೆ ಪಡೆದು ವಿಚಾರಣೆಗೆ ಒಳಪಡಿಸಿದಾಗ ಕೊಲೆ ಮಾಡಿರುವುದು ಬೆಳಕಿಗೆ ಬಂದಿದ್ದು, ಆರೋಪಿಯನ್ನು ಬಂಧಿಸಿ, ಕೋರ್ಟ್‌ಗೆ ಹಾಜರುಪಡಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ ಹಾಗೂ ಶ್ರೀರಂಗಪಟ್ಟಣ ಠಾಣೆ ಇನ್ಸ್‌ಪೆಕ್ಟರ್ ಬಿ.ಜಿ.ಕುಮಾರ್ ಹಾಗೂ ಸಿಬ್ಬಂದಿ ಪರಿಶೀಲನೆ ನಡೆಸಿದರು. ಈ ಸಂಬಂಧ ಪಟ್ಟಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಡಿ.29, ಉದ್ಯೋಗ ಮೇಳ

ಮಂಡ್ಯ, ಡಿ.25– ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ ವತಿಯಿಂದ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರದಲ್ಲಿ ಡಿ.29 ರಂದು ಉದ್ಯೋಗ ಮೇಳ ಆಯೋಜಿಸಲಾಗಿದೆ. ಮೇಳದಲ್ಲಿ 8 ರಿಂದ 10 ಕಂಪನಿಗಳು ಭಾಗವಹಿಸಲಿದ್ದು, ಜಿಲ್ಲೆಯ ಅರ್ಹ ನಿರುದ್ಯೋಗಿಗಳ ನೇಮಕಾತಿ ಪ್ರಕ್ರಿಯೆ ಜರುಗಲಿದೆ. ಪ್ರಮುಖವಾಗಿ ಯುವನಿಧಿ ಫಲಾನುಭವಿಗಳು ಮೇಳದಲ್ಲಿ ಭಾಗವಹಿಸಿ ಉದ್ಯೋಗ ಪಡೆಯಲು ಅವಕಾಶ ಕಲ್ಪಿಸಿಕೊಡಲಾಗುತ್ತದೆ. ಮೇಳದಲ್ಲಿ ಎಸ್‌ಎಸ್‌ಎಲ್‌ಸಿ, ಪಿಯುಸಿ ಪದವಿ, ಐಟಿಐ ಹಾಗೂ ಸ್ನಾತಕೋತ್ತರ ಪದವಿ ಪಡೆದ ಅಭ್ಯರ್ಥಿಗಳು ಭಾಗವಹಿಸಬಹುದಾಗಿದೆ. ಮಂಡ್ಯ, ಮೈಸೂರು, ಬೆಂಗಳೂರು ಹಾಗೂ ಹಲವು ಸ್ಥಳಗಳಲ್ಲಿ 2000 ಉದ್ಯೋಗಾವಕಾಶಗಳು ಲಭ್ಯವಿದ್ದು, ವೇತನವು ಕನಿಷ್ಠ 14,750 ರೂ. ನಿಂದ ಗರಿಷ್ಠ 50000 ರೂ. ಉದ್ಯೋಗಾವಕಾಶಗಳು ಲಭ್ಯವಿರುತ್ತದೆ. ಹೆಚ್ಚಿನ ಮಾಹಿತಿಗೆ ಮೊ.9113875775, 9741939716 ಮತ್ತು 9113500761 ಅನ್ನು ಸಂಪರ್ಕಿಸಬಹುದು.

ಪ್ರತ್ಯೇಕ ಪ್ರಕರಣದಲ್ಲಿ ಇಬ್ಬರ ಬಂಧನ

ಶ್ರೀರಂಗಪಟ್ಟಣ, ಡಿ.25– ಪ್ರತ್ಯೇಕ ಪ್ರಕರಣಗಳಲ್ಲಿ ಬಸ್‌ನಲ್ಲಿ ಚಿನ್ನದ ಸರ ಕಳವು ಮಾಡುತ್ತಿದ್ದ ಮಹಿಳೆ ಹಾಗೂ ಗಾಂಜಾ ಸೇವನೆ ಮಾಡುತ್ತಿದ್ದ ವ್ಯಕ್ತಿಯನ್ನು ಶ್ರೀರಂಗಪಟ್ಟಣ ಠಾಣೆ ಪೊಲೀಸರು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಸರಗಳ್ಳಿ ಬಂಧನ: ಡಿ.21ರಂದು ತಿಮ್ಮನಕೊಪ್ಪಲು ಗ್ರಾಮದ ಸೌಜನ್ಯ ಎಂಬುವರ 35 ಗ್ರಾಂ ತೂಕದ ಮಾಂಗಲ್ಯ ಸರವನ್ನು ಸಾರಿಗೆ ಬಸ್‌ನಲ್ಲಿ ಎಗರಿಸಿದ್ದ ಆಂಧ್ರ ಪ್ರದೇಶದ ಚಿತ್ತೂರು ಜಿಲ್ಲೆಯ ಲಕ್ಷ್ಮೀಪುರ ನಿವಾಸಿ ಮಾಧವಿ ಎಂಬಾಕೆಯನ್ನು ಶ್ರೀರಂಗಪಟ್ಟಣ ಠಾಣೆ ಪೊಲೀಸರು ಬಂಧಿಸಿ, ಆಕೆಯಿಂದ 2 ಸರಗಳ್ಳತನ ಪ್ರಕರಣಗಳಿಗೆ ಸಂಬಂಧಿಸಿದಂತೆ 8 ಲಕ್ಷ ರೂ. ಮೌಲ್ಯದ ಚಿನ್ನಾಭರಣ ವಶಪಡಿಸಿಕೊಂಡಿದ್ದಾರೆ.

ಮತ್ತೊಂದು ಪ್ರಕರಣದಲ್ಲಿ ತಾಲೂಕಿನ ಕರೀಘಟ್ಟದಲ್ಲಿ ಗಾಂಜಾ ಸೇವನೆ ಮಾಡುತ್ತಿದ್ದ ಮೊಹಮ್ಮದ್ ಕೈಫ್ ಎಂಬಾತನನ್ನು ಪೊಲೀಸರು ಬಂಧಿಸಿ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಜಿಲ್ಲಾ ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ, ಎಎಸ್ಪಿ ತಿಮ್ಮಯ್ಯ, ಡಿವೈಎಸ್ಪಿ ಶಾಂತಮಲ್ಲಪ್ಪ ಅವರ ಮಾರ್ಗದರ್ಶನದಲ್ಲಿ ಶ್ರೀರಂಗಪಟ್ಟಣ ಟೌನ್ ಇನ್ಸ್‌ಪೆಕ್ಟರ್ ಬಿ.ಜೆ.ಕುಮಾರ್, ಎಸ್‌ಐಗಳಾದ ಜನಾಬಾಯಿ ಕಡಪಟ್ಟಿ, ಗಂಗಾಧರ್ ಹಾಗೂ ಸಿಬ್ಬಂದಿಗಳಾದ ನಾಗರಾಜು, ಶ್ರೀನಿವಾಸ ಮೂರ್ತಿ, ಚಂದ್ರಶೇಖರ್, ಮಂಜುನಾಥ್, ಮಧು, ಸಿದ್ದರಾಜು, ಇಂದು, ಅರುಣ ಕುಮಾರಿ ಮತ್ತು ಅಶ್ವಿನಿ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದರು.

ಪತ್ರಕರ್ತ ಶೇಷಣ್ಣಗೆ ಪಿತೃವಿಯೋಗ



ಮಂಡ್ಯ, ಡಿ.25– ವರದಿಗಾರ, ಮಂಡ್ಯ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ನಿರ್ದೇಶಕ ಶೇಷಣ್ಣ ಅವರ ತಂದೆ ಮುನಿವೆಂಕಟಪ್ಪ (84) ಗುರುವಾರ ನಿಧನರಾದರು. ಮೃತರು ಇಬ್ಬರು ಪುತ್ರರು ಸೇರಿದಂತೆ ಬೆಂಗಳೂರಿನ ಗೆದ್ದಲಹಳ್ಳಿ ಗ್ರಾಮದ ಅವರ ಸ್ವಗೃಹದಲ್ಲಿ ಇಹಲೋಕ ತ್ಯಜಿಸಿದ್ದು, ಸ್ವಗ್ರಾಮದಲ್ಲಿ ಶುಕ್ರವಾರ ಮೃತರ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೂರನೇ ಪುಟದಿಂದ

ಆರು ಮಂದಿ ಸಜೀವ ದಹನ

ಎನ್ನಲಾಗಿದ್ದು, ಬಸ್ ಚಾಲಕನ ಸ್ಥಿತಿ ಗಂಭೀರವಾಗಿದೆ. ಗಾಯಾಳುಗಳನ್ನು ಚಿತ್ರದುರ್ಗ, ತುಮಕೂರು ಹಾಗೂ ಬೆಂಗಳೂರಿನ ಆಸ್ಪತ್ರೆಗಳಿಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ.

ದುರಂತದಲ್ಲಿ ಮೊದಲು ಮೂವರು ನಾಪತ್ತೆಯಾಗಿದ್ದರಾದರೂ ನಂತರ ಒಬ್ಬರ ಪತ್ತೆಯಾಗಿದ್ದು, ಇಬ್ಬರು ಯುವತಿಯರ ಪತ್ತೆ ಸಾಧ್ಯವಾಗಿಲ್ಲ ಎಂದು ವರದಿ ತಿಳಿಸಿದೆ. ಘಟನಾ ಸ್ಥಳಕ್ಕೆ ಆಗಮಿಸಿದ ಪ್ರಯಾಣಿಕರ ಪೋಷಕರು ಮತ್ತು ಸಂಬಂಧಿಗಳು ಕಣ್ಣೀರು ಹಾಕುತ್ತಾ ತಮ್ಮವರನ್ನು ಹುಡುಕುತ್ತಿದ್ದ ದೃಶ್ಯ ಕರುಳು ಹಿಂಡುವಂತಿತ್ತು.

ಪ್ರಧಾನಿ ಸಂತಾಪ: ಚಿತ್ರದುರ್ಗ ಬಳಿ ಬಸ್ ದುರಂತದಲ್ಲಿ ಸಾವಿಗೀಡಾದವರಿಗೆ ಪ್ರಧಾನಿ ನರೇಂದ್ರ ಮೋದಿ ಸೇರಿದಂತೆ ಅನೇಕ ನಾಯಕರು ಸಂತಾಪ ಸೂಚಿಸಿದ್ದಾರೆ. ಗಾಯಾಳುಗಳು ಶೀಘ್ರ ಗುಣಮುಖರಾಗಲಿ ಎಂದಿದ್ದಾರೆ ಮೃತಪಟ್ಟವರ ಕುಟುಂಬದವರಿಗೆ ಪ್ರಧಾನಮಂತ್ರಿ ರಾಷ್ಟ್ರೀಯ ಪರಿಹಾರ ನಿಧಿಯಿಂದ ತಲಾ 2 ಲಕ್ಷ ರೂ. ಪರಿಹಾರ ಘೋಷಿಸಲಾಗಿದೆ.

ಸಿಎಂ ಸಿದ್ದರಾಮಯ್ಯ ಪರಿಹಾರ: ಮುಖ್ಯಮಂತ್ರಿ ಸಿದ್ದರಾಮಯ್ಯ ದುರಂತದಲ್ಲಿ ಮಡಿದವರಿಗೆ ಸಂತಾಪ ಸೂಚಿಸಿ, ಮೃತರ ಕುಟುಂಬಕ್ಕೆ ತಲಾ 5 ಲಕ್ಷ ರೂ. ಹಾಗೂ ಗಾಯಾಳುಗಳಿಗೆ ತಲಾ 50 ಸಾವಿರ ರೂ. ಪರಿಹಾರ ಘೋಷಿಸಿದ್ದಾರೆ.

ಲಾರಿ ಮತ್ತು ಬಸ್ ನಡುವೆ ಸಂಭವಿಸಿದ ಅಪಘಾತ ಘಟನೆಯ ತನಿಖೆ ನಡೆಸಿ, ಕಾರಣ ಪತ್ತೆಹಚ್ಚಲಾಗುವುದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ.

ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಮೃತರಿಗೆ ಸಂತಾಪ ಸೂಚಿಸಿ, ಗಾಯಾಳುಗಳು ಶೀಘ್ರ ಗುಣಮುಖರಾಗಲಿ ಎಂದು ಆಶಿಸಿದ್ದಾರೆ.

ಹೆಚ್‌ಡಿಕೆ ಸಂತಾಪ: ಬಸ್ ದುರಂತಕ್ಕೆ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಆಘಾತ ವ್ಯಕ್ತಪಡಿಸಿದ್ದು, ದುರಂತದಲ್ಲಿ ಮೃತಪಟ್ಟವರ ಆತ್ಮಕ್ಕೆ ದೇವರು ಚಿರಶಾಂತಿ ಕರುಣಿಸಲಿ, ಗಾಯಾಳುಗಳು ಶೀಘ್ರ ಚೇತರಿಸಿಕೊಳ್ಳಲಿ. ಗಾಯಾಳುಗಳ ಚಿಕಿತ್ಸೆಗೆ ರಾಜ್ಯ ಸರ್ಕಾರ ಎಲ್ಲಾ ಅಗತ್ಯ ವ್ಯವಸ್ಥೆ ಕೈಗೊಳ್ಳಬೇಕು ಎಂದಿದ್ದಾರೆ. ಬಸ್ ಅಪಘಾತದಲ್ಲಿ ಸುಟ್ಟು ಕರಕಲಾಗಿರುವ ಮೃತದೇಹಗಳಲ್ಲಿ ಐವರದ್ದು ಪತ್ತೆಯಾಗಿದೆ.

15 ಜಿಲ್ಲೆಗೆ ಮೆಮು ರೈಲು ಅನುಕೂಲ

ಕನಿಷ್ಠ 10 ಹೊಸ ಮೆಮು ರೈಲುಗಳನ್ನು ಒದಗಿಸುವಂತೆ ಅವರು ಮನವಿ ಮಾಡಿದ್ದರು. ಇದಕ್ಕೆ ಪೂರಕವಾಗಿ ಸ್ಪಂದಿಸಿರುವ ರೈಲ್ವೆ ಸಚಿವಾಲಯ, ಈಗಾಗಲೇ ಮೂರು ಮೆಮು ರೈಲುಗಳನ್ನು ಮಂಜೂರು ಮಾಡಿದ್ದು, ಉಳಿದ ರೈಲುಗಳನ್ನು ಹಂತ ಹಂತವಾಗಿ ಶೀಘ್ರದಲ್ಲೇ ಒದಗಿಸುವ ಭರವಸೆ ನೀಡಿದೆ. ಇದು ಈ ಭಾಗದ ಸಾರಿಗೆ ವ್ಯವಸ್ಥೆಯಲ್ಲಿ ಹೊಸ ಕ್ರಾಂತಿಯನ್ನು ಉಂಟುಮಾಡಲಿದೆ ಎಂದು ನಿರೀಕ್ಷಿಸಲಾಗಿದೆ.

ಯಾವೆಲ್ಲಾ ಮಾರ್ಗದಲ್ಲಿ ಮೆಮು ರೈಲು?: ಬೆಂಗಳೂರು – ಚಾಮರಾಜನಗರ – ಬೆಂಗಳೂರು, ಹುಬ್ಬಳ್ಳಿ – ಗದಗ – ಹುಬ್ಬಳ್ಳಿ, ಹುಬ್ಬಳ್ಳಿ – ದಾಂಡೇಲಿ – ಹುಬ್ಬಳ್ಳಿ, ಹುಬ್ಬಳ್ಳಿ – ವಿಜಯಪುರ – ಹುಬ್ಬಳ್ಳಿ, ಹುಬ್ಬಳ್ಳಿ – ದಾವಣಗೆರೆ – ಹುಬ್ಬಳ್ಳಿ, ಹುಬ್ಬಳ್ಳಿ – ಬಳ್ಳಾರಿ – ಹುಬ್ಬಳ್ಳಿ, ಹೊಸ ಪೇಟೆ – ದಾವಣಗೆರೆ – ಹೊಸಪೇಟೆ, ಬಾಗಲಕೋಟೆ – ಲೋಕಾಪುರ – ಬಾಗಲ ಕೋಟೆ, ಹುಬ್ಬಳ್ಳಿ – ಸಿಂಧನೂರು – ಹುಬ್ಬಳ್ಳಿ, ಹುಬ್ಬಳ್ಳಿ – ಚಿತ್ರದುರ್ಗ – ಹುಬ್ಬಳ್ಳಿ, ಬಳ್ಳಾರಿ – ದೊಡ್ಡಹಳ್ಳಿ – ಬಳ್ಳಾರಿ, ಬೀದರ್ – ತಳಪ್ಪ– ಬೀದರ್, ಬೆಳಗಾವಿ – ಮಿರಜ್ – ಬೆಳಗಾವಿ, ವಿಜಯಪುರ – ಸೊಲ್ಲಾಪುರ – ವಿಜಯಪುರ

15 ಜಿಲ್ಲೆಗಳಿಗೆ ಅನುಕೂಲ: ಈ 14 ಮಾರ್ಗದಲ್ಲಿ ರೈಲು ಓಡಾಟದಿಂದ ರಾಜ್ಯದ 15 ಜಿಲ್ಲೆಗಳಿಗೆ ಅನುಕೂಲವಾಗಲಿದೆ ಪ್ರಮುಖವಾಗಿ ಚಾಮರಾಜನಗರ, ಧಾರವಾಡ, ವಿಜಯಪುರ, ಬೆಳಗಾವಿ, ಚಿಕ್ಕಮಗಳೂರು, ಬಳ್ಳಾರಿ, ಬೆಂಗಳೂರು, ಬಾಗಲಕೋಟೆ, ವಿಜಯ ನಗರ, ಉತ್ತರ ಕನ್ನಡ, ಗದಗ, ರಾಯಚೂರು, ಚಿತ್ರದುರ್ಗ, ಧಾರವಾಡ, ಶಿವಮೊಗ್ಗ ಜಿಲ್ಲೆಗಳಲ್ಲಿ ಈ ರೈಲುಗಳು ಸಂಚಾರ ನಡೆಸಲಿವೆ.

ದೆಹಲಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ

ಸಭೆಯಲ್ಲಿ ಭಾಗಿಯಾಗುವಂತೆ ಕಾಂಗ್ರೆಸ್ ಅಧಿಕಾರದಲ್ಲಿರುವ ಮೂರು ರಾಜ್ಯಗಳ ಮುಖ್ಯಮಂತ್ರಿಗಳಿಗೆ ಆಹ್ವಾನ ನೀಡಲಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಜೊತೆ ತೆಲಂಗಾಣದ ರೇವಂತ್ ರೆಡ್ಡಿ, ಹಿಮಾಚಲ ಪ್ರದೇಶದ ಸುಖ್ವಿಂದರ್ ಸಿಂಗ್ ಸುಖು ಭಾಗಿಯಾಗಲಿದ್ದಾರೆ. ಕರ್ನಾಟಕದ ಸಿಡಬ್ಲ್ಯುಸಿ ಸದಸ್ಯರಾದ ಬಿ.ಕೆ ಹರಿಪ್ರಸಾದ್, ನಾಸೀರ್ ಹುಸೇನ್ ಹಾಗೂ ವೀರಪ್ಪ ಮೊಯ್ಲಿ ಪಾಲ್ಗೊಳ್ಳಲಿದ್ದಾರೆ. ಈ ಮೊದಲು ಸಿಡಬ್ಲ್ಯುಸಿ ಸಭೆಗೆ ನನಗೆ ಆಹ್ವಾನವಿಲ್ಲ ಎಂದು ಸಿಎಂ ಹೇಳಿದ್ದರು. ಈಗ ನಾಳೆ ಸಿಎಂ ದೆಹಲಿಗೆ ಹೋಗುವುದು ಅಧಿಕೃತವಾಗಿದೆ. ಐದು ರಾಜ್ಯಗಳ ಚುನಾವಣೆ, ಮತಕಳ್ಳತನ, ನ್ಯಾಷನಲ್ ಹೆರಾಲ್ಡ್ ಮತ್ತು ಮನರೇಗಾ ಕಾಯ್ದೆ ತಿದ್ದುಪಡಿಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರದ ವಿರುದ್ಧ ಹೋರಾಟ ರೂಪಿಸುವ ಬಗ್ಗೆ ಸಭೆಯಲ್ಲಿ ಚರ್ಚೆ ನಡೆಯಲಿದೆ ಎಂದು ಹೇಳಲಾಗುತ್ತಿದೆ.

ಡಿಕೆಶಿಗೆ ಇಲ್ಲ ಆಹ್ವಾನ: ನಾಡಿದ್ದಿನ ಸಿಡಬ್ಲ್ಯುಸಿ ಸಭೆಗೆ ಉಪ ಮುಖ್ಯಮಂತ್ರಿ ಡಿ ಕೆ ಶಿವಕುಮಾರ್ ಅವರಿಗೆ ಆಹ್ವಾನವಿಲ್ಲ ಎಂದು ಹೇಳಿದ್ದಾರೆ.

ಭಾರೀ ಸ್ಫೋಟ; ವ್ಯಕ್ತಿ ಛಿದ್ರ ಛಿದ್ರ

ಹೋಗುವವರೂ ಈ ಭಾಗದಲ್ಲಿ ಓಡಾಡುತ್ತಿದ್ದರು. ದುರಾದೃಷ್ಟವಶಾತ್ ರಾತ್ರಿ 8.30ರ ವೇಳೆಯಲ್ಲಿ ಸಾಹಿಲ್, ಬಲೂನ್‌ಗೆ ಗ್ಯಾಸ್ ತುಂಬುವಾಗ ಏಕಾಏಕಿ ಸಿಲಿಂಡರ್ ಸ್ಫೋಟಗೊಂಡಿದೆ. ಪರಿಣಾಮ ಆತ ಸ್ಥಳದಲ್ಲಿ ಸಾವನ್ನಪ್ಪಿದ್ದು, ಸಮೀಪದಲ್ಲೇ ಹಾದು ಹೋಗುತ್ತಿದ್ದ ಲಕ್ಷ್ಮೀ ಹಾಗೂ ಮತ್ತೋರ್ವ ಮಹಿಳೆ ಗಂಭೀರ ಗಾಯಗಳಿಂದ ನೆಲಕ್ಕುರುಳಿದ್ದಾರೆ. ಇನ್ನೂ ಮೂರ್‍ನಾಲ್ಕು ಜನ ಗಾಯಗೊಂಡು ಆಘಾತದಿಂದ ಕುಸಿದಿದ್ದಾರೆ. ಅದೃಷ್ಟವಶಾತ್ ಲಕ್ಷ್ಮೀ ಅವರೊಂದಿಗಿದ್ದ ಇಬ್ಬರು ಮಕ್ಕಳು ಅಪಾಯದಿಂದ ಪಾರಾಗಿದ್ದಾರೆ ಎಂದು ತಿಳಿದುಬಂದಿದೆ. ಸಲೀಂ ದೇಹ ಛಿದ್ರ ಛಿದ್ರಗೊಂಡಿದ್ದು, ಕೆಲಭಾಗ ಹತ್ತಾರು ಅಡಿ ದೂರದಲ್ಲಿ ಬಿದ್ದಿದ್ದವು.

ಭೀಕರ ದೃಶ್ಯ: ಸಲೀಂ ಮೃತದೇಹ ಬಿದ್ದಿರುವುದು, ಇಬ್ಬರು ಮಹಿಳೆಯರು ಅತ್ಯಂತ ದಯನೀಯ ಸ್ಥಿತಿಯಲ್ಲಿ ಬಿದ್ದಿರುವ ಚಿತ್ರಣ ಭಯಭೀತಗೊಳಿಸುವಂತಿತ್ತು. ಮೃತದೇಹವನ್ನು ಶವಾಗಾರಕ್ಕೆ, ಗಾಯಾಳುಗಳನ್ನು ಆಸ್ಪತ್ರೆಗೆ ರವಾನಿಸಿದ ಬಳಿಕವೂ ಅಲ್ಲಿನ ದೃಶ್ಯ ಘಟನೆಯ ಭೀಕರತೆಗೆ ಸಾಕ್ಷಿಯಾಗಿತ್ತು. ಸ್ಥಳದಲ್ಲಿ ರಕ್ತ ಹರಿದಿತ್ತು. ಬಲೂನ್ ಮಾರಾಟ ಮಾಡುತ್ತಿದ್ದ ಸೈಕಲ್ ನಜ್ಜುಗುಜ್ಜಾಗಿತ್ತು. ಸಲೀಂ ತನ್ನ ಜೊತೆಗಿಟ್ಟುಕೊಂಡಿದ್ದ ಬ್ಯಾಗ್‌ಗಳು, ಸಿಲಿಂಡರ್‌ನ ಛಿದ್ರವಾದ ತುಂಡುಗಳು, ಗಾಯಾಳುಗಳ ಬ್ಯಾಗ್, ಕರವಸ್ತ್ರ, ಪಾದರಕ್ಷೆಗಳು ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದವು.

ಭಾರೀ ಸದ್ದಿಗೆ ಬೆಚ್ಚಿದ ಜನ: ಅರಮನೆ ಮುಂಭಾಗ ಸಂಗೀತ ಕಾರ್ಯಕ್ರಮ ನಡೆಯುತ್ತಿದ್ದರೂ ಸಿಲಿಂಡರ್ ಸ್ಫೋಟದ ಸದ್ದು ಸುತ್ತಮುತ್ತಲ ಪ್ರದೇಶಕ್ಕೆ ಕೇಳಿಸಿದೆ. ಇಟ್ಟಿಗೆಗೂಡು, ಶಂಕರಮಠದ ರಸ್ತೆ, ಹಾರ್ಡಿಂಜ್ ವೃತ್ತ ಸೇರಿದಂತೆ ಸುತ್ತಮುತ್ತಲು ಜನ ಸ್ಫೋಟದ ಸದ್ದಿಗೆ ಬೆಚ್ಚಿಬಿದಿದ್ದಾರೆ. ಹತ್ತಿರದಲ್ಲಿದ್ದವರು ಏನಾದರೂ ಬಾಂಬ್ ಸ್ಫೋಟಿಸಿರಬಹುದೇ ಎಂದು ಭಯಭೀತಗೊಂಡು, ಸ್ಥಳಕ್ಕೆ ದೌಡಾಯಿಸಿದ್ದರು.

ಸಕಾಲಕ್ಕೆ ಬಾರದ ಆಂಬುಲೆನ್ಸ್: ಸ್ಫೋಟ ಸಂಭವಿಸಿದ ಕೂಡಲೇ ಹತ್ತಿರದಲ್ಲೇ ಇದ್ದ ಪೊಲೀಸರು ಸ್ಥಳಕ್ಕೆ ದೌಡಾಯಿಸಿದ್ದಾರೆ. ಆದರೆ ಓರ್ವ ವ್ಯಕ್ತಿ ಭಯಾನಕ ರೀತಿಯಲ್ಲಿ ಮೃತಪಟ್ಟಿರುವುದು, ದೇಹದ ಅಂಗಾಂಗಗಳು ಹೊರಗೆ ಬಂದಿದ್ದ ಮಹಿಳೆ ರಕ್ತದ ಮಡುವಿನಲ್ಲಿ ಬಿದ್ದು ಸಹಾಯಕ್ಕೆ ಯಾಚಿಸುತ್ತಿದ್ದ ದಯನೀಯ ಸ್ಥಿತಿ, ಗಂಭೀರವಾಗಿ ಗಾಯಗೊಂಡಿದ್ದ ಮತ್ತೋರ್ವ ಮಹಿಳೆಯೂ ನರಳುತ್ತಿದ್ದ ದೃಶ್ಯ ನೋಡಿ, ಪೊಲೀಸರೇ ಆಘಾತಕ್ಕೊಳಗಾಗಿದ್ದಾರೆ. ಏನಾಗಿದೆ, ಏನು ಮಾಡಬೇಕೆಂಬ ತೊಳಲಾಟದ ನಡುವೆ ಆಂಬುಲೆನ್ಸ್‌ಗೆ ಕರೆ ಮಾಡಿದ್ದಾರೆ. ಆದರೆ ಆಂಬುಲೆನ್ಸ್ ಬರುವುದು ವಿಳಂಬವಾಗಿದ್ದರಿಂದ ಓರ್ವ ಗಾಯಾಳು ಮಹಿಳೆಯನ್ನು ಪೊಲೀಸ್ ಇಲಾಖೆಯ ಸಂಜೀವಿನಿ ವಾಹನದಲ್ಲೇ ಆಸ್ಪತ್ರೆಗೆ ಕರೆದೊಯ್ಯಲಾಯಿತು.



ಗಾಯಾಳುಗಳನ್ನು ಆಸ್ಪತ್ರೆಗೆ ಸಾಗಿಸುತ್ತಿರುವುದು.

ಸ್ಫೋಟಗೊಂಡ ಸಿಲಿಂಡರ್‌ನಲ್ಲೇನಿತ್ತು?

ಸಿಲಿಂಡರ್ ಸ್ಫೋಟದ ತೀವ್ರತೆಗೆ ವ್ಯಾಪಾರಿ ದೇಹ ಛಿದ್ರ ಛಿದ್ರವಾಗಿದೆ. ಹತ್ತಿರದಲ್ಲಿ ನಡೆದು ಹೋಗುತ್ತಿದ್ದ ಮಹಿಳೆಯ ಹೊಟ್ಟೆ ಭಾಗಕ್ಕೆ ತೀವ್ರ ಹಾನಿಯಾಗಿದೆ. ಲೋಹದ ಸಿಲಿಂಡರ್ ಕೂಡ ಛಿದ್ರ ಛಿದ್ರವಾಗಿದೆ. ಈ ಹಿಂದೆ ಬಲೂನ್‌ಗೆ ತುಂಬ ಲಾಗುತ್ತಿದ್ದ ನೈಟ್ರೋಜನ್ ಅಪಾಯಕಾರಿ ಎಂಬ ಕಾರಣಕ್ಕೆ ಅದರ ಬಳಕೆಯನ್ನು ನಿರ್ಬಂಧಿಸಲಾಗಿದೆ. ಅದಕ್ಕೆ ಪ್ರತಿಯಾಗಿ ಹೆಚ್ಚು ಅಪಾಯವಲ್ಲದ ಹೀಲಿಯಂ ಬಳಸಲಾಗುತ್ತಿದೆಯಂತೆ. ಆದರೆ ಸ್ಫೋಟದ ತೀವ್ರತೆ ಗಮನಿಸಿದರೆ ಆ ಸಿಲಿಂಡರ್‌ನಲ್ಲಿದ್ದ ಅನಿಲ ಯಾವು ದೆಂಬ ಸಂಶಯ ಸೃಷ್ಟಿಯಾಗಿದೆ.



ಪೊಲೀಸ್ ಆಯುಕ್ತರು, ಡಿಸಿಪಿಗಳಿಂದ ಸ್ಥಳ ಪರಿಶೀಲನೆ.

ರಾತ್ರಿ 8.54ರ ವೇಳೆಗೆ ದಾವಿಸಿದ ಆಕ್ಸಿಜನ್ ವ್ಯವಸ್ಥೆಯೂ ಇರದ ಆಂಬುಲೆನ್ಸ್‌ನಲ್ಲಿ ಚಿಂತಾಜನಕ ಸ್ಥಿತಿಯಲ್ಲಿದ್ದ ಮಹಿಳೆಯನ್ನು, ಉಳಿದ ಗಾಯಾಳುಗಳನ್ನು ಆಟೋಗಳಲ್ಲಿ ಆಸ್ಪತ್ರೆಗೆ ಕಳುಹಿಸಲಾಯಿತು. ಸುಮಾರು 9.15ರ ವೇಳೆಗೆ ಆಗಮಿಸಿದ 108 ಆಂಬುಲೆನ್ಸ್‌ನಲ್ಲಿ ವ್ಯಾಪಾರಿಯ ಛಿದ್ರಗೊಂಡ ಮೃತದೇಹವನ್ನು ಸಾಗಿಸಲಾಯಿತು. ನಗರದ ಹೃದಯ ಭಾಗದಲ್ಲಿ ಅದೂ ಅರಮನೆ ಬಳಿ ದುರಂತ ನಡೆದರೂ ತುರ್ತಾಗಿ ನಿಭಾಯಿಸುವಲ್ಲಿ ವ್ಯವಸ್ಥೆ ವಿಫಲವಾಗಿದೆ ಎಂದು ಸಾರ್ವಜನಿಕರು ಬೇಸರ ವ್ಯಕ್ತಪಡಿಸಿದ್ದಾರೆ.

ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್, ಡಿಸಿಪಿಗಳಾದ ಬಿಂದುಮಣಿ, ಸುಂದರ್‌ರಾಜ್, ಎಸಿಪಿಗಳು ಇನ್ನಿತರ ಅಧಿಕಾರಿಗಳು ಸ್ಥಳಕ್ಕೆ ದೌಡಾಯಿಸಿ, ಪರಿಶೀಲನೆ ನಡೆಸಿದರು. ಮಹಜರ್ ಪೂರ್ಣಗೊಳ್ಳುವವರೆಗೆ ಆ ರಸ್ತೆಯಲ್ಲಿ ವಾಹನ ಸಂಚಾರವನ್ನು ನಿರ್ಬಂಧಿಸಲಾಗಿತ್ತು. ಜಿಲ್ಲಾಧಿಕಾರಿ ಲಕ್ಷ್ಮೀಕಾಂತ ರೆಡ್ಡಿ ಸ್ಥಳಕ್ಕೆ ಬಂದು ಘಟನೆಯ ಮಾಹಿತಿ ಪಡೆದರು., ಶ್ವಾನದಳದವರೂ ಪರಿಶೀಲನೆ ನಡೆಸಿದ್ದು, ಅಲ್ಲಿ ಚೆಲ್ಲಾಪಿಲ್ಲಿಯಾಗಿದ್ದ ವಸ್ತುಗಳನ್ನು ಸಂಗ್ರಹಿಸಿದ್ದಾರೆ. ಘಟನೆ ನಡೆದ ಸಂದರ್ಭದಲ್ಲಿ ಹತ್ತಿರದಲ್ಲೇ ಇದ್ದ ವ್ಯಾಪಾರಿ ಯೋಗೇಶ್, ಗಾಯಾಳುಗಳನ್ನು ಆಸ್ಪತ್ರೆಗೆ ಕರೆದೊಯ್ಯಲು ನೆರವಾದ ಆಟೋ ಚಾಲಕರಾದ ಸುಹಾಸ್ ಹಾಗೂ ರವಿಕಿರಣ್, ಘಟನೆಯ ಭಯಾನಕತೆಯನ್ನು ಆತಂಕದಲ್ಲೇ ಹಂಚಿಕೊಂಡರು.

ಭಾಷಣ ಮಾಡಿಕೊಂಡು ಹೋದವನಲ್ಲ...!

ಮುಂದೆಯೂ ದುಡಿಯುತ್ತೇನೆ. ನಾನು ಸಾಮಾನ್ಯ ಕಾರ್ಯಕರ್ತನಂತೆ ಇರುತ್ತೇನೆ ಎಂಬುದಾಗಿ ದೆಹಲಿಯಲ್ಲಿ ನೀಡಿದ ಹೇಳಿಕೆ ಸಮರ್ಥಿಸಿಕೊಂಡ ಶಿವಕುಮಾರ್ ಪರೋಕ್ಷವಾಗಿ ಸಿದ್ದರಾಮಯ್ಯ ಕಾಲೆಳೆದರು.

ಅಧಿಕಾರ ಹಂಚಿಕೆ ಗೊಂದಲ ಮುಂದುವರೆದಿರುವ ಬೆನ್ನಲ್ಲೇ ಶಿವಕುಮಾರ್ ಇದೇ ಮೊದಲ ಬಾರಿಗೆ ಸಂಘಟನೆಯೇ ಮಾಡದವರು ಅಧಿಕಾರ ಅನುಭವಿಸುತ್ತಿದ್ದಾರೆ ಎಂಬ ತಮ್ಮ ಅಸಹನೆ ಹೊರಹಾಕಿದರು.

ಮುಖ್ಯಮಂತ್ರಿ ಗಾದಿಗಾಗಿ ಸದ್ಯಕ್ಕೆ ದೆಹಲಿಗೆ ಹೋಗುವುದಾಗಲೀ, ನಾಯಕರ ಭೇಟಿಯಾಗಲೀ ಇಲ್ಲ, ನನ್ನ ಕೆಲಸ ಇದ್ದರೆ ಮಾತ್ರ ಹೋಗುತ್ತೇನೆ. ನಾಯಕರು ಕರೆಯದೆ ನಾನಾಗಿ ಹೋಗುವುದಿಲ್ಲ. ಕಾಂಗ್ರೆಸ್ ಕಾರ್ಯಕಾರಿಣಿ ಸಭೆಗೆ ಮುಖ್ಯಮಂತ್ರಿ ಅವರನ್ನು ಆಹ್ವಾನಿಸಿದ್ದಾರೆ. ಉಪ ಮುಖ್ಯಮಂತ್ರಿಗೆ ಆಹ್ವಾನ ಇಲ್ಲ. ಮುಂದೆ ಪ್ರದೇಶ ಕಾಂಗ್ರೆಸ್ ಅಧ್ಯಕ್ಷರುಗಳ ವಿಸ್ತೃತ ಸಭೆಗೆ ಕರೆಯಬಹುದು. ಆಗ ಹೋಗುತ್ತೇನೆ ಎಂದರು.

ಅಧಿಕಾರ ಹಂಚಿಕೆ ಕುರಿತಂತೆ ಖರ್ಗೆ ಬಳಿ ಮಾತನಾಡಿಲ್ಲ. ಪಂಚಾಯತ್ ರಾಜ್ ವಿಷಯದಲ್ಲಿ ಕೇಂದ್ರ ಸರ್ಕಾರ ತಳೆದಿರುವ ನಿಲುವಿನಿಂದ ರಾಜ್ಯಗಳಿಗೆ ಹೇಗೆ ಅನ್ಯಾಯ ಆಗುತ್ತಿದೆ ಎಂಬ ಕುರಿತು ವಿವರಿಸಿದ್ದೇನೆ.

ನನ್ನ ದೆಹಲಿ ಪ್ರವಾಸದ ಬಗ್ಗೆ ಎಐಸಿಸಿ ಅಧ್ಯಕ್ಷರಿಗೆ ಮಾಹಿತಿ ನೀಡಿದ್ದೇನೆ ಎಂದಾಗ, ಸುದ್ದಿಗಾರರು ಅಧಿಕಾರ ಹಂಚಿಕೆ ಕುರಿತು ಕೇಳಿದ ಪ್ರಶ್ನೆಗೆ, ನಾನು ಹೇಳಿದ್ದನ್ನು ಬರೆದುಕೊಳ್ಳಿ, ನೀವು ಕೇಳುವುದಕ್ಕೆಲ್ಲಾ ಉತ್ತರಿಸಲಾಗದು ಎಂದು ಖಡಕ್ಕಾಗಿ ಉತ್ತರಿಸಿದರು. ನಮ್ಮಲ್ಲಿನ ಗೊಂದಲವನ್ನು ನೀವು ಮತ್ತು ಮುಖ್ಯಮಂತ್ರಿ ಬಗೆಹರಿಸಿಕೊಳ್ಳಿ ಎಂದಿದ್ದಾರೆ. ಆ ಬಗ್ಗೆ ಮಾತನಾಡುತ್ತೇವೆ ಎಂದರು.

ನನಗೆ ತೋಚಿದ್ದನ್ನ ಮಾಡ್ತೇನೆ...!

ಇಷ್ಟೆಲ್ಲಾ ತಿಳಿದಿದ್ದರೂ, ಕೊಟ್ಟ ಮಾತಿಗೆ ತಕ್ಕಂತೆ ನಡೆದುಕೊಳ್ಳದಿದ್ದರೆ ಹೇಗೆ ಎಂದು ಪ್ರಶ್ನಿಸಿದ್ದಾರೆ. ನನಗಾಗಿರುವ ಅನ್ಯಾಯ ಮತ್ತು ನೋವನ್ನು ಹೇಳಿಕೊಳ್ಳಲು ಹೋದರೆ, ದೆಹಲಿ ನಾಯಕರು ಸಮಯ ನೀಡುತ್ತಿಲ್ಲ. ಈಗ ನಾನು ಬೇಡವಾದೆನೇ. ಅಧಿಕಾರ ವಿಷಯದಲ್ಲಿ ಒಂದು ಸ್ಪಷ್ಟ ನಿಲುವು ಹೇಳಿಬಿಡಿ. ಆ ನಂತರ ನನ್ನ ನಿರ್ಧಾರ ತಿಳಿಸುತ್ತೇನೆ. ನೀವಿಬ್ಬರೇ ಇತ್ಯರ್ಥ ಪಡಿಸಿಕೊಳ್ಳಿ ಎಂದರೆ, ಸಿದ್ದರಾಮಯ್ಯ, ಪಕ್ಷದ ಅಧಿನಾಯಕ ರಾಹುಲ್ ಗಾಂಧಿ ಕಡೆ ಬೊಟ್ಟು ಮಾಡುತ್ತಾರೆ. ಅವರು ಕಳೆದ ಒಂದು ತಿಂಗಳಿಂದ ಅದನ್ನೇ ಮಾಡಿಕೊಂಡು ಬಂದಿದ್ದಾರೆ. ನಾನು ನಿಮ್ಮನ್ನಷ್ಟೇ ಭೇಟಿ ಮಾಡಿ ನನಗೆ ದಕ್ಕಬೇಕಾದ ಅಧಿಕಾರ ಕೊಡಿಸಿ ಎಂದು ಕೇಳುತ್ತೇನೆ. ನೀವು ಪಕ್ಷದ ರಾಷ್ಟ್ರೀಯ ಅಧ್ಯಕ್ಷರು, ದೆಹಲಿ ನಾಯಕರೂ ನಿಮ್ಮ ಹೆಗಲಿಗೆ ಹಾಕುತ್ತಾರೆ. ನಾನು ಯಾರ ಬಳಿ ಹೋಗಲಿ ಎಂದಿದ್ದಾರೆ. ದೆಹಲಿಯಿಂದ ಹಿಂತಿರುಗುತ್ತಿದ್ದಂತೆ ಇಂದು ಬೆಳಗ್ಗೆ ಖರ್ಗೆ ನಿವಾಸಕ್ಕೆ ತೆರಳಿ ಸುಮಾರು ಒಂದು ಗಂಟೆಗೂ ಹೆಚ್ಚು ಕಾಲ ಚರ್ಚಿಸಿದರು.

ಪ್ರವಾಸ; ಕೆಎಸ್‌ಆರ್‌ಟಿಸಿಗೆ ಶುಕ್ರದೆಸೆ

ನಿರಾಸೆಯಾಗಿದೆ. ಖಾಸಗಿ ಬಸ್‌ಗಳಲ್ಲಿ ಧ್ವನಿವರ್ಧಕ, ಟಿವಿ, ಹವಾನಿಯಂತ್ರಿತ ವ್ಯವಸ್ಥೆ ಇನ್ನಿತರ ಅತ್ಯಾಧುನಿಕ ಸೌಲಭ್ಯಗಳಿರುತ್ತವೆ. ಇದರಿಂದ ಮಕ್ಕಳಿಗೆ ಪ್ರವಾಸದ ಆಯಾಸ ಹೆಚ್ಚು ಬಾಧಿಸುವುದಿಲ್ಲ. ಆದರೆ ಸಾರಿಗೆ ಸಂಸ್ಥೆಗಳ ಸಾಮಾನ್ಯ ಬಸ್‌ಗಳಲ್ಲಿ ಇಂತಹ ಸೌಲಭ್ಯಗಳಿರುವುದಿಲ್ಲ. ದರದ ವಿಚಾರ ದಲ್ಲೂ ಖಾಸಗಿ ಬಸ್ ಮಾಲೀಕರನ್ನು ಮನವಿ ಮಾಡಿ, ಕಡಿಮೆ ಮಾಡಿಸಬಹುದು. ಆದರೆ ಸಾರಿಗೆ ಸಂಸ್ಥೆಯಲ್ಲಿ ನಿಗದಿತ ದರವನ್ನೇ ಪಾವತಿಸಬೇಕು. ಈ ವಿಚಾರಗಳನ್ನೂ ಶಿಕ್ಷಣ ಇಲಾಖೆ ಅವಲೋಕಿಸಬೇಕು ಎಂಬುದು ಖಾಸಗಿ ಶಾಲೆಯೊಂದರ ಆಡಳಿತ ಮಂಡಳಿ ಮುಖ್ಯಸ್ಥರು ಅಭಿಪ್ರಾಯಿಸಿದ್ದಾರೆ.

ನಮ್ಮ ಮೈಸೂರು ಸುರಕ್ಷಿತವಲ್ಲ ಅನ್ನಿಸುತ್ತಿದೆ...

ನಿಜಕ್ಕೂ ಬಹುತೇಕ ಕಡೆಗಳಲ್ಲಿ ಯಾವುದೇ ಸುರಕ್ಷತೆಯಿಲ್ಲ ಎಂದು ಜನ ಕಿಡಿಕಾರುವ ಮೂಲಕ ಇನ್ನಾದರೂ ವ್ಯವಸ್ಥೆ ಜಾಗರೂಕತೆಯಿಂದ ಕಾರ್ಯನಿರ್ವಹಿಸಬೇಕೆಂದು ಆಗ್ರಹಿಸಿದರು.

ಮೈಸೂರೀಗ ಮೃತ್ಯು ಕೂಪ: ಇತ್ತೀಚೆಗಿನ ದಿನಗಳಲ್ಲಿ ಮೈಸೂರು ನಗರ ಮೃತ್ಯು ಕೂಪವಾಗುತ್ತಿದೆ ಎಂದು ಕೆಲ ದುರ್ಘಟನೆಗಳನ್ನು ಮೆಲುಕು ಹಾಕಿ, ಆಡಳಿತ ವರ್ಗಕ್ಕೆ ಹಿಡಿಶಾಪ ಹಾಕಿದ್ದಾರೆ.


ಇದೇ ಅಕ್ಟೋಬರ್‌ನಲ್ಲಿ ಫಾಸ್ಟ್‌ಫುಡ್‌ನ ಬಾಣಲಿಯಲ್ಲಿ ಕುದಿಯುತ್ತಿದ್ದ ಎಣ್ಣೆ ನಾಲ್ಕು ವರ್ಷದ ಮಗುವಿನ ಮೇಲೆ ಚೆಲ್ಲಿದ್ದ ಪರಿಣಾಮ ಸುಟ್ಟ ಗಾಯಗಳಿಂದ ಆಸ್ಪತ್ರೆ ಸೇರಿದ್ದ ಆ ಮಗು, ಅ.4ರಂದು ಕೊನೆಯುಸಿರೆಳೆದಿತ್ತು. ಅ.2ರಂದು ಎನ್‌ಆರ್ ಮೊಹಲ್ಲಾದ ಮಾರುತಿ ಸರ್ಕಲ್ ಬಳಿಯಲ್ಲಿ ಈ ಅನಾಹುತ ನಡೆದಿತ್ತು. ಈ ಘಟನೆ ನೆನಪಿಸಿದ ಅನೇಕರು, ಇನ್ನಾದರೂ ಫಾಸ್ಟ್‌ಫುಡ್ ಗ್ಯಾಸ್ ಸಿಲಿಂಡರ್ ಸೇರಿದಂತೆ ಅಲ್ಲಿನ ಸುರಕ್ಷತಾ ಕ್ರಮಗಳ ಬಗ್ಗೆ ನಗರ ಪಾಲಿಕೆಯವರು ಪರಿಶೀಲನೆ ನಡೆಸುವರೇ ಎಂದು ಪ್ರಶ್ನಿಸಿದರು.

ಅದೇ ಅಕ್ಟೋಬರ್‌ನಲ್ಲಿ ಈಗ ಸ್ಫೋಟ ಸಂಭವಿಸಿರುವ ಆಸುಪಾಸಿನಲ್ಲೇ ಕೇವಲ ಮೂರು ದಿನಗಳಲ್ಲಿ ಎರಡು ಹತ್ಯೆ ನಡೆದಿತ್ತು. ಅಕ್ಟೋಬರ್ 7ರಂದು ಹಾಡಹಗಲೇ ಮೈಸೂರಿನ ದೊಡ್ಡಕೆರೆ ಮೈದಾನದ ಬಳಿಯ ದಸರಾ ವಸ್ತುಪ್ರದರ್ಶನ ರಸ್ತೆಯಲ್ಲಿ ಗುಂಪೊಂದು ಮಾರಕಾಸ್ತ್ರಗಳಿಂದ ವ್ಯಕ್ತಿಯೋರ್ವನನ್ನು ಬರ್ಬರವಾಗಿ ಹತ್ಯೆಗೈದು ಪರಾರಿಯಾಗಿತ್ತು. ಕೃತ್ಯವನ್ನು ಕಣ್ಣಾರೆ ಕಂಡ ಸಾರ್ವಜನಿಕರ ಭಯಭೀತರಾಗಿ ಆತಂಕದ ಛಾಯೆ ಮೂಡಿತ್ತು. ಇದರ ಬೆನ್ನಲೇ ಕೇವಲ ಒಂದು ದಿನದ ಅಂತರದಲ್ಲಿ ಇದೇ ದೊಡ್ಡಕೆರೆ ಮೈದಾನದ ಬಳಿಯೇ ಬಲೂನ್ ಮಾರಲು ಬಂದಿದ್ದ ಬಡ ಕುಟುಂಬದ ಬಾಲಕಿಯ ಮೇಲೆ ಅತ್ಯಾಚಾರಗೈದು ಹತ್ಯೆ ನಡೆಸಿ ವಿಕೃತಿ ಮೆರೆದಿದ್ದ ಘಟನೆ ಬೆಳಕಿಗೆ ಬಂದಿತ್ತು. ಗುರುವಾರದ ದುರ್ಘಟನೆ ನಡೆದ ಸ್ಥಳದಲ್ಲಿದ್ದ ಮಾರುತಿ, ಸುಬ್ರಹ್ಮಣ್ಯ ಹಾಗೂ ಸುರೇಶ್ ಎಂಬುವವರು ಈ ಘಟನೆಗಳನ್ನು ಉಲ್ಲೇಖಿಸಿ ಆಡಳಿತದ ವಿರುದ್ಧ ಕಿಡಿಕಾರಿದರು.

ನಗರದ ಸುರಕ್ಷತೆ ಹಾಗೂ ನಾಗರಿಕರ ರಕ್ಷಣೆಗೆ ಪೂರಕವಾಗಿ ಸ್ಥಳೀಯ ಆಡಳಿತ ಕಾರ್ಯನಿರ್ವಹಿಸುತ್ತಿಲ್ಲ ಎಂಬುದಕ್ಕೆ ಇಂತಹ ಸರಣಿ ಪ್ರಕರಣಗಳೇ ನಿದರ್ಶನವಾಗುತ್ತಿವೆ. ಮತ್ತೊಂದೆಡೆ ಮಾದಕ ವಸ್ತು ಪೂರೈಕೆ–ವ್ಯಸನದಂತಹ ಸಾಮಾಜಿಕ ಪಿಡುಗು ಮೈಸೂರು ನಗರದಲ್ಲಿ ಇತ್ತೀಚೆಗೆ ವ್ಯಾಪಕವಾಗುತ್ತಿದೆ ಎಂದು ಅವರು ಆಕ್ರೋಶ ವ್ಯಕ್ತಪಡಿಸಿದರು.

ಮೈಸೂರು ಮಿತ್ರ

ಮೈಸೂರಿಗೆ ಅಹೋಬಿಲ ಮಠದ ಶ್ರೀ ರಂಗನಾಥ ಯತೀಂದ್ರ ಮಹಾದೇಶಿಕನ್ ಸ್ವಾಮಿ



ಮೈಸೂರು: ಕರ್ನಾಟಕ ಪ್ರವಾಸದಲ್ಲಿರುವ ಅಹೋಬಿಲ ಮಠದ 46ನೇ ಪೀಠಾಧಿಪತಿ ಆಚಾರ್ಯ ಶ್ರೀಮತೇ ಶ್ರೀ ವಣ್ ಶಠಗೋಪ ಶ್ರೀ ರಂಗನಾಥ ಯತೀಂದ್ರ ಮಹಾದೇಶಿಕನ್ ಸ್ವಾಮಿ ಅವರು ಮೇಲುಕೋಟೆಯಿಂದ ಮೈಸೂರಿನ ರಮಾ ವಿಲಾಸ ರಸ್ತೆಯಲ್ಲಿರುವ ಅಹೋಬಿಲ ಮಠಕ್ಕೆ ನಾಳೆ(ಶುಕ್ರವಾರ) ಸಂಜೆ 4 ಗಂಟೆಗೆ ಆಗಮಿಸಲಿದ್ದಾರೆ. ಈ ಹಿನ್ನೆಲೆಯಲ್ಲಿ ಮಠದ ವತಿಯಿಂದ ಡೋಲೋತ್ಸವ ಹಮ್ಮಿಕೊಳ್ಳಲಾಗಿದ್ದು ಭಕ್ತರು ಹಾಗೂ ಶಿಷ್ಯರು ಭಾಗವಹಿಸಿ, ಆಚಾರ್ಯರ ಅನುಗ್ರಹಕ್ಕೆ ಪಾತ್ರರಾಗಬೇಕೆಂದು ಶ್ರೀ ರಾಮಾನುಜ ಸಹಕಾರ ಸಂಘದ ನಿರ್ದೇಶಕ ಟಿ.ಎಸ್.ಅರುಣ್ ಪ್ರಕಟಣೆಯಲ್ಲಿ ಮನವಿ ಮಾಡಿದ್ದಾರೆ.

ನಾಳೆ ಜುಲೂಸ್ ಚಿಸ್ತಿಯಾ ಮೆರವಣಿಗೆ

ಮೈಸೂರು,ಡಿ.25(ಎಂಕೆ)– ಸರ್ಕಾರ್ ಮೆಹಬೂಬ್–ಎ–ಸುಭಾನಿ ಫೌಂಡೇಶನ್ ವತಿಯಿಂದ ಡಿ.27ರಂದು ಮಧ್ಯಾಹ್ನ 2.45ಕ್ಕೆ ರಾಜಸ್ಥಾನದ ಹಜ್ಜರತ್ ಖ್ವಾಜಾ ಗರೀಬ್–ಉನ್–ನವಾಜ್, ಅಜ್ಮೀರ್ ಷರೀಫ್ ಅವರ 814ನೇ ವಾರ್ಷಿಕ ಗಂಧದ ಉರುಸ್ ಷರೀಫ್ ಅಂಗವಾಗಿ 'ಜುಲೂಸ್ ಚಿಸ್ತಿಯಾ' ಮೆರವಣಿಗೆ ಹಮ್ಮಿಕೊಳ್ಳಲಾಗಿದೆ. ನಗರದ ಅಶೋಕ ರಸ್ತೆಯಲ್ಲಿರುವ ಮಿಲಾದ್ ಪಾರ್ಕ್‌ನಿಂದ ಮೆರವಣಿಗೆ ಆರಂಭವಾಗಲಿದ್ದು, ಮೈಸೂರ್ ಸರ್‌ಖಾಜಿ ಹಜ್ಜರತ್ ಮೌಲಾನಾ ಮೊಹಮ್ಮದ್ ಉಸ್ಮಾನ್ ಷರೀಫ್ ನೇತೃತ್ವ ವಹಿಸಲಿದ್ದಾರೆ ಎಂದು ಫೌಂಡೇಶನ್ ಸಂಚಾಲಕ ಹಫೀಜ್ಜುಲ್ಲಾ ಷರೀಫ್ ಖಾದ್ರಿ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಆಧುನಿಕ ಮನುಸ್ಮೃತಿ ವಿರುದ್ಧ ಹೋರಾಟಕ್ಕೆ ಸಜ್ಜಾಗೋಣ

ವಿಚಾರ ಸಂಕಿರಣದಲ್ಲಿ ಹಿರಿಯ ವಿಚಾರವಾದಿ ಶಿವಸುಂದರ್ ಕರೆ



ಮೈಸೂರಿನ ರಾಣಿಬಹದ್ದೂರ್ ಸಭಾಂಗಣದಲ್ಲಿ ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ, ಮೈಸೂರು ವಿಶ್ವವಿದ್ಯಾನಿಲಯದ ಸಂಶೋಧಕರ ಸಂಘದ ವತಿಯಿಂದ 98ನೇ ವರ್ಷದ ಮನುಸ್ಮೃತಿ ದಹನ ದಿನದ ಅಂಗವಾಗಿ ಆಯೋಜಿಸಿದ್ದ ವಿಚಾರ ಸಂಕಿರಣವನ್ನು ಉರಿಲಿಂಗ ಪೆದ್ದಿ ಮಠದ ಪೀಠಾಧಿಪತಿ ಜ್ಞಾನ ಪ್ರಕಾಶ ಸ್ವಾಮೀಜಿ ಉದ್ಘಾಟಿಸಿದರು.

ಮೈಸೂರು, ಡಿ.25(ಜಿಎ)– ಇಂದಿನ ಕಾಲಘಟ್ಟದಲ್ಲಿಯೂ ಮನುಸ್ಮೃತಿ ಮುಂದುವರೆದಿದ್ದು, ಮತದಾರರ ಪಟ್ಟಿಯ ವಿಶೇಷ ಪರಿಷ್ಕರಣೆ ಮೂಲಕ ಹಿಂಬಾಗಿಲಿನಿಂದ ಮನುಸ್ಮೃತಿ ಬರಲು ಆರಂಭಿಸಿದೆ. ಇದು ಆಡಳಿತಕ್ಕೆ ಅತೀ ದೊಡ್ಡ ಸಾಧನವಾಗುತ್ತದೆ. ಈ ಹಿನ್ನೆಲೆಯಲ್ಲಿ ಆಧುನಿಕ ಮನುಸ್ಮೃತಿ ವಿರುದ್ಧ ಹೋರಾಟಕ್ಕೆ ಸಜ್ಜಾಗೋಣ ಎಂದು ಹಿರಿಯ ವಿಚಾರವಾದಿ ಶಿವಸುಂದರ್ ಕರೆ ನೀಡಿದರು.

ಮೈಸೂರಿನ ರಾಣಿಬಹದ್ದೂರ್ ಸಭಾಂಗಣದಲ್ಲಿ ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ, ಮೈಸೂರು ವಿಶ್ವವಿದ್ಯಾನಿಲಯದ ಸಂಶೋಧಕರ ಸಂಘದ ವತಿಯಿಂದ 98ನೇ ವರ್ಷದ ಮನುಸ್ಮೃತಿ ದಹನ ದಿನ ಅಂಗವಾಗಿ ಆಯೋಜಿಸಿದ್ದ ವಿಚಾರ ಸಂಕಿರಣದಲ್ಲಿ 'ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಮನುಸ್ಮೃತಿ ಸುಟ್ಟಿದ್ದು ಏಕೆ?' ಕುರಿತು ವಿಷಯ ಮಂಡಿಸಿದರು.

ಇಂದು ಕ್ರಿಸ್ಮಸ್ ಹಬ್ಬ. ಕ್ರೈಸ್ತನು ಕೂಡ ಬುದ್ಧ, ಬಸವ, ಅಂಬೇಡ್ಕರ್, ಬಾಫುಲೆ ಮೌಲ್ಯಗಳ ಪ್ರತಿಪಾದಕರಂತೆ ಪ್ರೀತಿ, ಪ್ರೇಮ, ಸಮಾನತೆಯ ಮೌಲ್ಯಗಳನ್ನು ಹಂಚಿದ್ದಾರೆ. ಆದರೆ, ಇಂದು ಕ್ರೈಸ್ತ ಹುಟ್ಟಿದ ನಾಡು ಪ್ಯಾಲೆಸ್ಟೈನ್‌ನಲ್ಲಿ ಗುಂಡಿನ ದಾಳಿ ಮೂಲಕ 65 ಸಾವಿರ ಮಕ್ಕಳನ್ನು ಕೊಲ್ಲುವ ಮೂಲಕ ಅದು ನರಮೇಧದ ನಾಡಾಗಿದೆ. ಅದರಂತೆ ಭಾರತವು ಬುದ್ಧನ ನಾಡಾಗಿದ್ದು, ಬುದ್ಧ ಸಮಾನತೆ ಮತ್ತು ಮಮತೆಯನ್ನು ಹೇಳಿಕೊಟ್ಟಿದ್ದರು. ಬುದ್ಧ ಅಸಮಾನತೆ, ಅನ್ಯಾಯ, ತಾರತಮ್ಯ, ಹಿಂಸೆ ವಿರುದ್ಧ ಯುದ್ಧ ಮಾಡಿದ್ದಾರೆ. ಬುದ್ಧನನ್ನು ಸೋಲಿಸಿದ ಮನುಧರ್ಮ ಇಂದು ಬ್ರಾಹ್ಮಣ್ಯದ ಮನುತ್ವದ ಮೋದಿ ನಾಡಾಗಿ ದೇಶ ಬದಲಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಮನುಸ್ಮೃತಿಯಲ್ಲಿರುವ ಶ್ಲೋಕವನ್ನು ಯಾರು ಓದುವುದಿಲ್ಲ ಎಂಬ ದೃಷ್ಟಿಯಿಂದ ರಾಮಾಯಣ ಸೃಷ್ಟಿಸಿದರು. ರಾಮನಿಗೆ ಮನುಸ್ಮೃತಿಯಲ್ಲಿ ಇರುವ ಅಂಶಗಳನ್ನು ತುಂಬಿಸಿದರು. ರಾಮ ಮಾಡಿದ್ದೆಲ್ಲ ಸರಿ ಎಂದು ಸೇರಿಸಿದರು. ಆದರೆ ದಕ್ಷಿಣ ಭಾರತದಲ್ಲಿ ರಾಮ ದೇವರಲ್ಲ. ದಕ್ಷಿಣ ಭಾರತದವರು ಶೂದ್ರರು, ಶೈವರು, ಭೈರವ ಪಂಥದವರು, ಶಿವನ ಆರಾಧಕರು. ದೇವಸ್ಥಾನ ಪದ್ಧತಿ ಬಂದಿದ್ದು ವಿಜಯನಗರ ಸಾಮ್ರಾಜ್ಯದ ನಂತರ. ರಾಮ ಅರಮನೆ ಬಿಟ್ಟು ಕಾಡಿಗೆ ಹೋಗಬೇಕಾದರೆ, ದಾರಿಯುದ್ದಕ್ಕೂ ಬ್ರಾಹ್ಮಣ ಧರ್ಮಕ್ಕೆ ವಿರೋಧ ಮಾಡಿ, ರಾಜೀ ಮಾಡಿಕೊಂಡವರಿಗೆ ರಾಜ್ಯ ನೀಡಿದ್ದಾನೆ. ಒಪ್ಪದವರನ್ನು ಕೊಂದಿದ್ದಾನೆ. ಈ ಹಿನ್ನೆಲೆಯಲ್ಲಿ ಸಂಘ ಪರಿವಾರದವರಿಗೆ ರಾಮ ಬೇಕಿತ್ತು. ಮನುಸ್ಮೃತಿಯಲ್ಲಿ ಇರುವುದನ್ನು ರಾಮನ ಬಾಯಲ್ಲಿ ಹೇಳಿಸಿದ್ದಾರೆ ಎಂದು ತಿಳಿಸಿದರು.

ಈ ಪದ್ಧತಿ ಇಂದಿಗೂ ಮುಂದುವರೆದಿದ್ದು, ಅದಕ್ಕೆ ಸಾಕ್ಷಿಯಂತೆ ಸಂಸತ್‌ನಲ್ಲಿ ನರೇಗಾ ಯೋಜನೆಯನ್ನು ಬದಲಾಯಿಸಿ, 'ವಿಕಸಿತ ಭಾರತ ರೋಜ್ಗಾರ್ ಅಜೀವಿಕ ಮಿಷನ್ ಗ್ರಾಮೀಣ್' ಎಂದು ಬದಲಾಯಿಸಿದ್ದಾರೆ. ಇದರ ಮೂಲಕ ಜನ ರಾಮ ಜಪ ಮಾಡಲಿ ಎಂದು ವಿಬಿ–ಜಿ ರಾಮ್ ಜಿ ಎಂದು ಹೆಸರು ಇಟ್ಟಿದ್ದಾರೆ. ಇದರಲ್ಲಿ 70 ಸಾವಿರ ಕೋಟಿ ರೂ. ವಹಿವಾಟು ಆಗುತ್ತಿತ್ತು. ಈಗ ಕೇಂದ್ರ ಶೇ.60 ಮತ್ತು ರಾಜ್ಯ ಶೇ.40ರಷ್ಟು ಮಾತ್ರ ಅನುದಾನ ನೀಡುತ್ತದೆ. ಇದ್ದರಿಂದ ರಾಜ್ಯ ಸರ್ಕಾರಗಳಿಗೆ 28 ಸಾವಿರ ಕೋಟಿ ರೂ. ಹೆಚ್ಚುವರಿ ಹೊರೆಯಾಗಲಿದೆ. ಕೇಂದ್ರಕ್ಕೆ 28 ಕೋಟಿ ಉಳಿತಾಯವಾಗಲಿದೆ. ಉಳಿತಾಯದ ಹಣವನ್ನು ಮೋದಿ ತೆಗೆದುಕೊಂಡು ಟಾಟಾದ ಚಿಪ್ ಸಂಸ್ಥೆಗೆ ಸಬ್ಸಿಡಿ ನೀಡುತ್ತಾರೆ ಎಂದು ವ್ಯಂಗ್ಯವಾಡಿದರು.

ಶಿಕ್ಷಣದಲ್ಲಿ ಹೊಸದಾಗಿ ಎನ್‌ಇಪಿ ತಂದಿದ್ದು, ಎಲ್‌ಕೆಜಿಯಿಂದ ಸಂಸ್ಕೃತಿಯನ್ನು ಕಲಿಸುತ್ತೇವೆ ಎಂದು ಹೇಳುತ್ತಿದ್ದಾರೆ. ಇತಿಹಾಸದ ಬಗ್ಗೆ ತಿಳಿಸುವಾಗ ಗುಪ್ತರ ಕಾಲ ಸುವರ್ಣಕಾಲ ಆ ಮಠಗಳು ಶಿಕ್ಷಣ ನೀಡುವಾಗ ಜಾತಿ ತಾರತಮ್ಯ ಇರಲಿಲ್ಲ ಎಂದು ತಿಳಿಸಲು ಮುಂದಾಗಿದ್ದಾರೆ.

ಮನೆಯಲ್ಲಿ ಮನುವಾದ ಬಾಯಲ್ಲಿ ಭೀಮವಾದ

ಅಗ್ರಹಾರದ ಬ್ರಾಹ್ಮಣರ ಬೀದಿಯಲ್ಲಿ ಮನಸ್ಮೃತಿ ಇಲ್ಲ. ನಮ್ಮ ಮೊಹಲ್ಲಗಳಲ್ಲಿ ವಿಜೃಂಭಿಸುತ್ತಿದೆ. ಧನುರ್ಮಾಸವನ್ನು ದೀಪ ಹಿಡಿದು ಆಚರಣೆ ಮಾಡುತ್ತಿದ್ದಾರೆ. ಹೀಗೆ ನಮ್ಮ ನಾಶವನ್ನು ನಾವೇ ಮಾಡಿಕೊಳ್ಳುತ್ತಿದ್ದೇವೆ ಎಂದು ಉರಿಲಿಂಗ ಪೆದ್ದಿ ಮಠದ ಪೀಠಾಧಿಪತಿ ಜ್ಞಾನ ಪ್ರಕಾಶ ಸ್ವಾಮೀಜಿ ತಿಳಿಸಿದರು.

ನಾವು ಈಗಾಗಲೇ ಎಲ್ಲಾ ಕ್ಷೇತ್ರವನ್ನು ಕಳೆದುಕೊಂಡಿದ್ದೇವೆ. ಎಲ್ಲಾ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳುವ ನಿಟ್ಟಿನಲ್ಲಿ ಈ ಕಾರ್ಯಕ್ರಮ ಆಯೋಜಿಸಲಾಗಿದೆ. ಮನುಸ್ಮೃತಿ ಮನಸ್ಸಿನಲ್ಲಿ ಹೆಮ್ಮರವಾಗಿ ಬೆಳೆದು ನಿಂತಿದೆ. ಈ ಹಿನ್ನೆಲೆಯಲ್ಲಿ ಮನುಸ್ಮೃತಿಯ ಪ್ರತಿ ಸುಡಬಾರದು ಬದಲಿಗೆ ಮನಸ್ಸಿನಲ್ಲಿರುವ ಮನಸ್ಮೃತಿಯನ್ನು ಸುಡಬೇಕಿದೆ ಎಂದರು.

ಸಂವಿಧಾನವನ್ನು ಮೌನವಾಗಿ ಮುಗಿಸುತ್ತೇವೆ ಎಂದು ಅವರು ಪಣತೊಟ್ಟಿದ್ದಾರೆ. ಅದರಲ್ಲಿ ಅವರು ಯಶಸ್ವಿಯೂ ಆಗುತ್ತಿದ್ದಾರೆ. ಸಂವಿದಾನದ ಮೂಲ ತತ್ವಗಳನ್ನು ಯಾರು ಮುಟ್ಟುವುದಿಲ್ಲ ಎಂಬ ಭಾವನೆ ಇತ್ತು ಆದರೆ, ಅದನ್ನು ಮುಟ್ಟಿದ್ದಾರೆ. ಕ್ರಮಬದ್ಧವಾಗಿ ಅವರು ಎಲ್ಲವನ್ನು ಮಾಡುತ್ತಿದ್ದಾರೆ. ದೇಶದಲ್ಲಿ ಈಗಾಗಲೇ 3.97 ಕೋಟಿ ಮಂದಿ ಓಟಿನ ಅಧಿಕಾರ ಕಳೆದುಕೊಂಡಿದ್ದಾರೆ. ನೀವು ನಾಗರಿಕರಾಗಲು ಯೋಗ್ಯರೋ ಇಲ್ಲವೋ ಎಂಬುದರ ಬಗ್ಗೆಯೂ ಪ್ರಶ್ನೆಗಳು ಉದ್ಭವವಾಗುತ್ತದೆ. ಮನೆಯಲ್ಲಿ ಮನುವಾದ ಬಾಯಲ್ಲಿ ಭೀಮವಾದ ಇಟ್ಟುಕೊಂಡಿರುವುದರಿಂದಲ್ಲೇ ಮನೆ, ಮನಸ್ಸಿನಲ್ಲಿ ಮನುಸ್ಮೃತಿ ಚಿಗುರು ಹೊಡೆಯುತ್ತಿದೆ ಎಂದು ತಿಳಿಸಿದರು.

ಯಾರು ಯಾರನ್ನು ಒಪ್ಪಿಕೊಳ್ಳುವುದಿಲ್ಲ ಎಂಬುದು ಅವರಿಗೆ ಗೊತ್ತಿದೆ. ಸಮುದಾಯ ಜಾಗೃತವಾಗದಿದ್ದರೆ ಎಲ್ಲವನ್ನು ಕಳೆದುಕೊಳ್ಳಬೇಕಾಗುತ್ತದೆ. ಇಂತಹ ಸಂಕಷ್ಟದ ಕಾಲದಲ್ಲಿ ನಾಳೆಯಿಂದ ನಿವೃತ್ತರಾದವರು, ಚಿಂತಕರು, ಬ್ಯಾಗ್ ಹಾಕಿಕೊಂಡು ಜನರನ್ನು ಜಾಗೃತಿಗೊಳಿಸಿ. 'ಹಕ್ಕು, ಅಧಿಕಾರ ಯಾರ ಕೈಯ್ಯಲ್ಲಿ ಇರುತ್ತದೆ ಅವರು ಎಲ್ಲವನ್ನು ಬದಲಾಯಿಸುತ್ತಾರೆ' ಎಂದು ಅಂಬೇಡ್ಕರ್ ಅವರು ಹೇಳಿದಂತೆ ನಡೆದುಕೊಳ್ಳಬೇಕು. ಸಮಾಜವನ್ನು ಯಾರು ಕಟ್ಟುವುದಿಲ್ಲ ನಾವೇ ಕಟ್ಟಬೇಕು ಎಂದರು.

ಕಂದಾಚಾರಕ್ಕೆ ದಾರಿ ಮಾಡಿಕೊಡುವ ದೇವರ ದರ್ಶನ ಮಾಡುವುದಿಲ್ಲ, ತೀರ್ಥ, ಪ್ರಸಾದ ಸ್ವೀಕರಿಸವುದಿಲ್ಲ ಎಂದು ನಿರ್ಧಾರ ಮಾಡಿ ಎಂದು ತಿಳಿಸಿದರು.

ಮತ್ತೊಂದೆಡೆ ಸಂವಿಧಾನವನ್ನು ಬದಲಾಯಿಸಿ ಹಿಂದೂ ರಾಷ್ಟ್ರ ಮಾಡಬಹುದು. ಆದರೆ, ಈಗಲೂ ಭಾರತ ಹಿಂದೂ ರಾಷ್ಟ್ರ ಎಂದು ಆರ್‌ಎಸ್‌ಎಸ್‌ನ ಸಹ ಸಂಚಾಲಕರು ಬಹಿರಂಗವಾಗಿ ಹೇಳಿಕೆ ನೀಡಿದ್ದಾರೆ. ಅವರು ಮಾತ್ರವಲ್ಲ. ಕಾಂಗ್ರೆಸ್ ಮುಖಂಡರು ಈ ಮಾತನ್ನು ಹೇಳುತ್ತಿದ್ದಾರೆ. ಹೊಸ ಯೋಜನೆಗೆ ವೇಗವಾಗಿ ತಿದ್ದುಪಡಿ ಮಾಡುತ್ತಿದ್ದಾರೆ. ಈಗ ಎಲ್ಲೆಡೆ ಮತದಾರರ ಪಟ್ಟಿಯ ವಿಶೇಷ ಪರಿಷ್ಕರಣೆ ಮಾಡುತ್ತಿದ್ದಾರೆ. ಇದರಿಂದ ಈಗಾಗಲೇ 11 ರಾಜ್ಯಗಳಲ್ಲಿ ಪ್ರಥಮ ಹಂತದಲ್ಲಿ 3.97ಕೋಟಿ ಮಂದಿಯನ್ನು ಮತದಾರರ ಪಟ್ಟಿಯಿಂದ ಕೈ ಬಿಡಲಾಗಿದೆ. ಮೈಸೂರಲ್ಲೂ ಇದು ನಡೆಯುತ್ತಿದೆ ಎಂದರು.

ಕಾರ್ಯಕ್ರಮದಲ್ಲಿ ಹಿರಿಯ ವೈದ್ಯಾಧಿಕಾರಿ ಡಾ.ಎಸ್.ರಂಗನಾಥಯ್ಯ, ಹಿರಿಯ ದಸಂಸ ಹೋರಾಟಗಾರ ಹರಿಹರ ಆನಂದ ಸ್ವಾಮಿ, ರಂಗಾಯಣ ಮಾಜಿ ನಿರ್ದೇಶಕ ಡಾ.ಜನಾರ್ಧನ್ ಜನ್ನಿ ಹಾಗೂ ಹಿರಿಯ ವಕೀಲ ತಿಮ್ಮಯ್ಯ ಅವರನ್ನು ಅಭಿನಂದಿಸಲಾಯಿತು.

ಈ ಸಂದರ್ಭದಲ್ಲಿ ಹಿರಿಯ ಚಿಂತಕ ಪ್ರೊ.ಕಾಳೇಗೌಡ ನಾಗವಾರ, ಸಮಿತಿ ರಾಜ್ಯಾಧ್ಯಕ್ಷ ಎನ್.ಭಾಸ್ಕರ್, ಸಂಶೋಧಕರ ಸಂಘದ ಅಧ್ಯಕ್ಷ ಮಲ್ಲೇಶ್ ಬಾಚಹಳ್ಳಿ, ಲೇಖಕ ಸಿ.ಹರಕುಮಾರ್ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಹುಟ್ಟುಹಬ್ಬದ ಶುಭಾಶಯ...



ಮೈಸೂರು ನಗರ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಆರ್.ಮೂರ್ತಿಯವರ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಅವರಿಗೆ ಪಕ್ಷದ ಮುಖಂಡರು ಅಗ್ರಹಾರದ ನೂರೊಂದು ಗಣಪತಿ ದೇವಾಲಯದ ಬಳಿ ಅಭಿನಂದಿಸಿ, ಶುಭಾಶಯ ಕೋರಿದರು. ಈ ವೇಳೆ ಜಿಲ್ಲಾ ಪಂಚಾಯ್ತಿ ಮಾಜಿ ಅಧ್ಯಕ್ಷ ಬಿ.ಎಂ.ರಾಮು, ಮುಖಂಡ ಎಲ್.ಭಾಸ್ಕರ್ ಗೌಡ, ಕಾಂಗ್ರೆಸ್ ನಗರ ಪ್ರಧಾನ ಕಾರ್ಯದರ್ಶಿಗಳಾದ ಸಿ.ಎಸ್.ರಘು, ಆರ್.ಗಿರೀಶ್, ಚಾಮರಾಜ ಕ್ಷೇತ್ರದ ಬ್ಲಾಕ್ ಅಧ್ಯಕ್ಷ ರವಿ ಮಂಚೇಗೌಡನಕೊಪ್ಪಲು, ಸೇವಾದಳ ಕಾರ್ಯಾಧ್ಯಕ್ಷ ಮೋಹನ್ ಕುಮಾರ್, ಓಬಿಸಿ ಅಧ್ಯಕ್ಷ ಎನ್.ಆರ್.ನಾಗೇಶ್, ಡೈರಿ ವೆಂಕಟೇಶ್, ಆರ್.ಹೆಚ್.ಕುಮಾರ್, ಮಹದೇವ್ ಮತ್ತಿತರರಿದ್ದರು.

ಪಿಎಚ್.ಡಿ ಪದವಿ



ಮೈಸೂರು: ಡಾ. ಎಂ.ವೈ.ಶ್ರೀನಿವಾಸ ಅವರ ಮಾರ್ಗದರ್ಶನದಲ್ಲಿ ಪಿ.ಆರ್.ವನಿತಾ ಅವರು ಸೂಕ್ಷ್ಮ ಜೀವ ವಿಜ್ಞಾನ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿವಿ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ



ಹುಯಿಲಾಳು ರಾಮಸ್ವಾಮಿಗೆ ಸನ್ಮಾನ...

ಟಿ.ನರಸೀಪುರ ತಾಲೂಕು ಡಾ.ಬಿ.ಆರ್.ಅಂಬೇಡ್ಕರ್ ಸಮುದಾಯ ಭವನದಲ್ಲಿ ತ್ರಿವೇಣಿ ಸಂಗಮ ರಂಗಭೂಮಿ ಕಲಾವಿದರ ಸಂಘದ ಪ್ರಥಮ ವಾರ್ಷಿಕೋತ್ಸವ ಸಮಾರಂಭದಲ್ಲಿ ರಂಗಭೂಮಿ ಕಲಾವಿದ ಹುಯಿಲಾಳು ರಾಮಸ್ವಾಮಿ ಅವರಿಗೆ ರಂಗಭೂಮಿ ರತ್ನ ಪ್ರಶಸ್ತಿ ನೀಡಿ, ಗೌರವಿಸಲಾಯಿತು. ಸಂಘದ ಅಧ್ಯಕ್ಷ ಶಶಿಕಾಂತ್ ಸೋಸಲೆ, ಕಾರ್ಯದರ್ಶಿ ನಂಜುಂಡಯ್ಯ, ಡಾ.ರೇವಣ್ಣ, ರಾಜಪ್ಪ, ಗುರುಶಾಂತಪ್ಪ, ಚೌಡಶೆಟ್ಟಿ, ಮಂಜುನಾಥ್‌ಪ್ರಸಾದ್ ಈ ವೇಳೆ ಇದ್ದರು.

ವಾಜಪೇಯಿ ಅವರ ಯೋಜನೆಗಳು ವಿಪಕ್ಷದವರಿಗೂ ಒಪ್ಪಿತ: ಯದುವೀರ್

ಮೈಸೂರು, ಡಿ.25(ಎಂಕೆ)– ಪ್ರತಿಪಕ್ಷಗಳೂ ಒಪ್ಪುವ ನಾಯಕತ್ವದ ಗುಣವುಳ್ಳವರಾಗಿದ್ದ ಭಾರತ ರತ್ನ, ಮಾಜಿ ಪ್ರಧಾನಿಗಳಾದ ಅಟಲ್ ಬಿಹಾರಿ ವಾಜಪೇಯಿ ಅವರ ಹೆಸರಿನಲ್ಲಿ ಜಾರಿಯಾದ ಯೋಜನೆಗಳು ವಿಕಸಿತ ಭಾರತ ನಿರ್ಮಾಣಕ್ಕೆ ಅಡಿಪಾಯವಾಗಿವೆ ಎಂದು ಸಂಸದ ಯದುವೀರ್ ಒಡೆಯರ್ ಸ್ಮರಿಸಿದರು.

ನಗರದ ಬಿಜೆಪಿ ಕಚೇರಿಯಲ್ಲಿ ಭಾರತ ರತ್ನ ಮಾಜಿ ಪ್ರಧಾನಿಗಳಾದ ಅಟಲ್ ಬಿಹಾರಿ ವಾಜಪೇಯಿ ಸ್ಮರಣಾರ್ಥ 'ಅಟಲ್ ಸ್ಮೃತಿ ವರ್ಷ' ಕಾರ್ಯ ಕ್ರಮ ಹಾಗೂ ಸುಶಾಸನ ದಿನಾಚರಣೆ ಯಲ್ಲಿ ಮಾತನಾಡಿದ ಅವರು, ಇಂದಿಗೂ ಅಟಲ್ ಬಿಹಾರಿ ವಾಜಪೇಯಿ ಅವರ ಹೆಸರಿನ ಯೋಜನೆಗಳು ಜನರಿಗೆ ಲಾಭವಾಗುತ್ತಿವೆ ಎಂದರು.

ಪ್ರತಿಪಕ್ಷದವರು ಕೂಡ ಅಟಲ್ ಬಿಹಾರಿ ವಾಜಪೇಯಿ ಅವರ ಯೋಜನೆಗಳನ್ನು ಒಪ್ಪುತ್ತಿದ್ದರು. ಹಾಗಾಗಿ ಅವರು, ಬಿಜೆಪಿಯವರಿಗೆ ಮಾತ್ರವಲ್ಲದೆ ಎಲ್ಲಾ ಪಕ್ಷದ ರಾಜಕಾರಣಿಗೂ ಪ್ರೇರಣೆಯಾಗಿದ್ದಾರೆ. ವಿಕಸಿತ ಭಾರತ ನಿರ್ಮಾಣಕ್ಕೆ ಅಡಿಪಾಯ ಹಾಕಿಕೊಟ್ಟ ಅಟಲ್ ಬಿಹಾರಿ ವಾಜಪೇಯಿ ಅವರ ಕೊಡುಗೆ ಸದಾ ಸ್ಮರಣೀಯ ಎಂದು ಸ್ಮರಿಸಿದರು.

ಇದೇ ವೇಳೆ ಮೈಸೂರು ಪೇಯಿಂಟ್ಸ್ ಮತ್ತು ವಾರ್ನಿಷ್ ಲಿಮಿಟೆಡ್ ಮಾಜಿ ಅಧ್ಯಕ್ಷ ಫಣೀಶ್, ವಿಧಾನಪರಿಷತ್ ಮಾಜಿ ಸದಸ್ಯ ತೋಂಟದಾರ್ಯ, ಜಿಪಂ ಮಾಜಿ ಅಧ್ಯಕ್ಷ ಪುಟ್ಟಬುದ್ದಿ ಅವರನ್ನು ಸನ್ಮಾನಿಸಲಾಯಿತು. ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ ಜಿಲ್ಲಾಧ್ಯಕ್ಷ ಕುಂಬ್ರಳ್ಳಿ ಸುಬ್ಬಣ್ಣ ಮತ್ತಿತರರಿದ್ದರು.



ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಭಾರತ ರತ್ನ ಮಾಜಿ ಪ್ರಧಾನಿಗಳಾದ ಅಟಲ್ ಬಿಹಾರಿ ವಾಜಪೇಯಿ ಸ್ಮರಣಾರ್ಥ ಮೈಸೂರು ಪೇಯಿಂಟ್ಸ್ ಮತ್ತು ವಾರ್ನಿಷ್ ಲಿಮಿಟೆಡ್ ಮಾಜಿ ಅಧ್ಯಕ್ಷ ಫಣೀಶ್, ವಿಧಾನ ಪರಿಷತ್ ಮಾಜಿ ಸದಸ್ಯ ತೋಂಟದಾರ್ಯ, ಜಿಪಂ ಮಾಜಿ ಅಧ್ಯಕ್ಷ ಪುಟ್ಟಬುದ್ದಿ ಅವರನ್ನು ಸನ್ಮಾನಿಸಲಾಯಿತು. ಈ ವೇಳೆ ಸಂಸದ ಯದುವೀರ್ ಒಡೆಯರ್, ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ, ಜಿಲ್ಲಾಧ್ಯಕ್ಷ ಕುಂಬ್ರಳ್ಳಿ ಸುಬ್ಬಣ್ಣ ಮತ್ತಿತರರು ಉಪಸ್ಥಿತರಿದ್ದರು.

ಸಿಎಂ ಸಿದ್ದರಾಮಯ್ಯ ಮುಂದುವರಿಕೆಗೆ ಆಗ್ರಹಿಸಿ ಜ.25ಕ್ಕೆ ಮೈಸೂರಲ್ಲಿ ಅಹಿಂದ ಸಮಾವೇಶ



ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ಅಹಿಂದ ಸಮಾವೇಶದ ಪೂರ್ವಭಾವಿ ಸಭೆಯಲ್ಲಿ ರಂಗಕರ್ಮಿ ಜನಾರ್ಧನ್ ಮಾತನಾಡಿದರು.

ಮೈಸೂರು,ಡಿ.25(ಎಂಕೆ)–ಸಿದ್ದರಾಮಯ್ಯ ಅವರೇ ರಾಜ್ಯದ ಮುಖ್ಯಮಂತ್ರಿಗಳಾಗಿ ಮುಂದುವರೆಯಬೇಕೆಂದು ಒತ್ತಾಯಿಸಿ ಜ.25 ರಂದು ಮೈಸೂರಲ್ಲಿ ಬೃಹತ್ ಅಹಿಂದ ಸಮಾವೇಶ ನಡೆಸಲು ಒಕ್ಕೊರಲ ನಿರ್ಣಯ ಕೈಗೊಳ್ಳಲಾಯಿತು.

ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ 'ಅಹಿಂದ, ಮೈಸೂರು' ಶೀರ್ಷಿಕೆಯಡಿ ಕರ್ನಾಟಕ ರಾಜ್ಯ ಅಹಿಂದ ವರ್ಗಗಳ ಜಾಗೃತ ವೇದಿಕೆ ನೇತೃತ್ವದಲ್ಲಿ ವಿವಿಧ ಸಂಘಟನೆಗಳ ಮುಖಂಡರೊಂದಿಗೆ ಹಮ್ಮಿಕೊಂಡಿದ್ದ ಅಹಿಂದ ಸಮಾವೇಶದ ಪೂರ್ವ ಸಿದ್ದತಾ ಸಭೆಯಲ್ಲಿ ಅಲ್ಪಸಂಖ್ಯಾತ, ಹಿಂದುಳಿದ ಹಾಗೂ ದಲಿತ ಸಮುದಾಯಗಳ ಪರವಾಗಿರುವ ಸಿದ್ದರಾಮಯ್ಯ ಅವರೇ ರಾಜ್ಯದ ಮುಖ್ಯಮಂತ್ರಿಗಳಾಗಿ ಮುಂದುವರೆಯಬೇಕು. ಅವರಿಗೆ ಶಕ್ತಿ ತುಂಬುವ ನಿಟ್ಟಿನಲ್ಲಿ ಮೈಸೂರಲ್ಲಿ ಬೃಹತ್ ಅಹಿಂದ ಸಮಾವೇಶ ಆಯೋಜಿಸಲು ನಿರ್ಧರಿಸಲಾಯಿತು.

> **"ಸಿದ್ದರಾಮಯ್ಯ ಅವರು, ಈ ನೆಲದ ಬಡ ಜನರ ಕಷ್ಟ–ಸುಖಗಳನ್ನು ತಿಳಿದಿರುವ ಜನನಾಯಕ. ಅವರ ನಾಯಕತ್ವ ಇಂದಿನ ಪರಿಸ್ಥಿತಿಗೆ ಅವಶ್ಯಕವಾಗಿದೆ. ನಮ್ಮ ಸಂಸ್ಕೃತಿ, ಮಾನವೀಯತೆ ಉಳಿಯಬೇಕಾದರೆ ಸಿದ್ದರಾಮಯ್ಯ ಅವರಿಗೆ ನಾವೆಲ್ಲ ಬೆಂಬಲ ನೀಡಬೇಕು. –ಜನಾರ್ಧನ್ (ಜನ್ನಿ)**

ರಂಗಕರ್ಮಿ ಜನಾರ್ಧನ್(ಜನ್ನಿ) ಮಾತನಾಡಿ, ನಾವು ಯಾರ ಪರವೂ ಅಲ್ಲ, ವಿರುದ್ಧವೂ ಅಲ್ಲ. ನಾವೆಲ್ಲ ಸಾಮಾಜಿಕವಾಗಿ ದಮನಕ್ಕೆ ಒಳಗಾದ ಮನುಷ್ಯ ಜಾತಿಯವರು. ಅಹಿಂದ ಸಮುದಾಯಗಳು ಅವಮಾನಕ್ಕೆ ಒಳಗಾಗುತ್ತಿವೆ. ಅವರ ಮೂಲಕ ಸಾಮಾಜಿಕ ನ್ಯಾಯದ ಅಗತ್ಯ ಮಂಡಿಸುವ ಉದ್ದೇಶದಿಂದ ಸಮಾವೇಶ ಮಾಡುವುದು ಅಗತ್ಯವಾಗಿದೆ ಎಂದು ತಿಳಿಸಿದರು.

ಸಿದ್ಧಾಂತ ಇರುವ ನಾಯಕ: ಕರ್ನಾಟಕ ರಾಜ್ಯ ಅಹಿಂದ ವರ್ಗಗಳ ಜಾಗೃತ ವೇದಿಕೆ ರಾಜ್ಯಾಧ್ಯಕ್ಷ ಕೆ.ಎಸ್.ಶಿವರಾಮ್ ಮಾತನಾಡಿ, ಸಿದ್ದರಾಮಯ್ಯ ಅವರು ಅದೃಷ್ಟವಂತ ಮುಖ್ಯಮಂತ್ರಿ ಅಲ್ಲ. ಬದ್ಧತೆ ಮತ್ತು ಸಿದ್ಧಾಂತ ಇರುವ ನಾಯಕ. ಆದರೆ, ಕೋಮುವಾದಿ ಶಕ್ತಿಗಳು ಸಿದ್ದರಾಮಯ್ಯ ಅವರನ್ನು ಕೆಳಗಿಳಿಸಲು ಷಡ್ಯಂತ್ರ ನಡೆಸುತ್ತಿವೆ ಎಂದು ಆರೋಪಿಸಿದರು.

ರಾಜ್ಯದ ಜನತೆಯ ಅಭಿವೃದ್ಧಿಗಾಗಿ ಸಿದ್ದರಾಮಯ್ಯ ಅವರು, ಸಾಕಷ್ಟು ಜನಪ್ರಿಯ ಯೋಜನೆಗಳನ್ನು ಜಾರಿಗೊಳಿಸಿದ್ದಾರೆ. ದಿವಂಗತ ಡಿ.ದೇವರಾಜ ಅರಸು ಅವರ ನಂತರ ಸಿದ್ದರಾಮಯ್ಯ ಅವರು ಅಹಿಂದ ಸಮುದಾಯಗಳ ಧ್ವನಿಯಾಗಿ ನಿಂತಿದ್ದಾರೆ. ಹಾಗಾಗಿ ಮುಂದಿನ ಎರಡು ವರ್ಷಗಳ ಕಾಲವೂ ಸಿದ್ದರಾಮಯ್ಯ ಅವರೇ ರಾಜ್ಯ ಮುಖ್ಯಮಂತ್ರಿಗಳಾಗಿ ಮುಂದುವರೆಯಬೇಕು. ಈ ನಿಟ್ಟಿನಲ್ಲಿ ಕಾಂಗ್ರೆಸ್ ಹೈಕಮಾಂಡ್ ಕೂಡ ಸಕಾರಾತ್ಮಕವಾಗಿ ನಿರ್ಧಾರ ತೆಗೆದುಕೊಳ್ಳುತ್ತದೆ ಎಂಬ ವಿಶ್ವಾಸವಿದ್ದು, ಸಿದ್ದರಾಮಯ್ಯ ಅವರಿಗೆ ಬಲ ನೀಡಲು ಅಹಿಂದ ಸಮಾವೇಶ ಆಯೋಜಿಸಲಾಗುತ್ತಿದೆ ಎಂದರು.

ಅಹಿಂದ ನಾಯಕರ ಒಮ್ಮತದ ನಿರ್ಧಾರ

ಪತ್ರಕರ್ತ ಟಿ.ಗುರುರಾಜ್, ಎಸ್.ಯೋಗೇಶ್ ಉಪ್ಪಾರ, ಪ್ರಗತಿಪರ ಚಿಂತಕಿ ಸವಿತಾ ಪ.ಮಲ್ಲೇಶ್, ಮಡಿವಾಳ ಸಮಾಜದ ಜಿಲ್ಲಾಧ್ಯಕ್ಷ ರವಿನಂದನ್, ಕುರುಬರ ಸಂಘದ ಜಿಲ್ಲಾಧ್ಯಕ್ಷ ಶಿವಪ್ಪ ಕೋಟೆ, ದಲಿತ ಮಹಾಸಭಾ ಅಧ್ಯಕ್ಷ ರಾಜೇಶ್, ಸಿಟಿಜನ್ ರೆಸ್ಪಾನ್ಸಿಬಲ್ ಸೊಸೈಟಿಯ ಕಲೀಂ, ವಿಶ್ವಕರ್ಮ ಸಮುದಾಯದ ಮೊಗಣ್ಣಚಾರ್, ವಿಶ್ವಕರ್ಮ ಯುವ ಘಟಕದ ಕೆಂಡಗಣ್ಣ, ರಾಷ್ಟ್ರೀಯ ಅಹಿಂದ ಕಾರ್ಯದರ್ಶಿ ಶಿವಣ್ಣ, ಕುರುಬರ ಸಂಘದ ಮಾಜಿ ಖಜಾಂಚಿ ದೊಳ್ಳೆಗೌಡ, ಸವಿತಾ ಸಮಾಜದ ಮಂಜುನಾಥ್, ಪೌರಕಾರ್ಮಿಕರ ಸಂಘದ ಮಾರ, ನಾಗೇಂದ್ರ, ಗೋವಿಂದ, ರೇವಣ್ಣ, ಬಸಪ್ಪ, ಮಾಲೇಗೌಡ ಮತ್ತಿತರರಿದ್ದರು.

ದೇಶ – ವಿದೇಶ

ಹಿಂದೂಗಳ ಮನೆಗೆ ಬೆಂಕಿ ಹಚ್ಚಿದವರ ಬಗ್ಗೆ ಮಾಹಿತಿ ನೀಡಿದವರಿಗೆ ಬಹುಮಾನ ಘೋಷಿಸಿದ ಬಾಂಗ್ಲಾ ಪೊಲೀಸರು



ಢಾಕಾ: ಬಾಂಗ್ಲಾದೇಶದ ಆಗ್ನೇಯ ಬಂದರು ನಗರವಾದ ಚಟ್ಟೋಗ್ರಾಮ್ ಬಳಿ ಹಿಂದೂ ಒಡೆತನದ ಮನೆಗೆ ಬೆಂಕಿ ಹಚ್ಚಿದ ದಾಳಿಕೋರರ ಬಗ್ಗೆ ಮಾಹಿತಿ ನೀಡಿದವರಿಗೆ ಬಾಂಗ್ಲಾದೇಶ ಪೊಲೀಸರು ಬಹುಮಾನ ಘೋಷಿಸಿದ್ದಾರೆ. ವಲಸಿಗ ಕಾರ್ಮಿಕರಾದ ಶುಖ್ ಶಿಲ್ ಮತ್ತು ಅನಿಲ್ ಶಿಲ್ ಅವರ ಸುಟ್ಟುಹೋದ ಮನೆಗೆ ಭೇಟಿ ನೀಡಿದ ಸಂದರ್ಭದಲ್ಲಿ ಚಟ್ಟೋಗ್ರಾಮ್ ಶ್ರೇಣಿಯ ಪೊಲೀಸ್ ಮುಖ್ಯಸ್ಥ ಅಹ್ಸಾನ್ ಹಬೀಬ್ ಅವರು ಯಾವುದೇ ಮೊತ್ತವನ್ನು ನಿರ್ದಿಷ್ಟಪಡಿಸದೆ ಬಹುಮಾನ ಘೋಷಿಸಿದ್ದಾರೆ ಎಂದು ಇತ್ತೆಫಾಕ್ ಪತ್ರಿಕೆ ವರದಿ ಮಾಡಿದೆ. ವರದಿಗಳ ಪ್ರಕಾರ, ಮಂಗಳವಾರ ರಾತ್ರಿ ಅಪರಿಚಿತ ದುಷ್ಕರ್ಮಿಗಳು ಮನೆಗೆ ಬೆಂಕಿ ಹಚ್ಚಿದ್ದಾರೆ. ಬಾಗಿಲುಗಳು ಹೊರಗಿಂದ ಲಾಕ್ ಆಗಿದ್ದರಿಂದ ಎರಡು ಕುಟುಂಬಗಳ 8 ಸದಸ್ಯರು ಟಿನ್ ಶೀಟ್‌ಗಳು ಮತ್ತು ಬಿದಿರಿನಿಂದ ನಿರ್ಮಿಸಿದ್ದ ಗೋಡೆಯನ್ನು ಕತ್ತರಿಸಿ ಬೆಂಕಿ ಹೊತ್ತಿಕೊಂಡಿದ್ದ ಮನೆಯಿಂದ ಹೊರಬಂದಿದ್ದಾಗಿ ಕುಟುಂಬ ಸದಸ್ಯರು ತಿಳಿಸಿದ್ದಾರೆ.

10ನೇ ಮಹಡಿಯ ಕಿಟಕಿಯಿಂದ ಬಿದ್ದ ವ್ಯಕ್ತಿ 8ನೇ ಮಹಡಿಯಲ್ಲಿ ಪವಾಡ ಸದೃಶ ಪಾರು



ಸೂರತ್: ಸೂರತ್‌ನಲ್ಲಿ 10ನೇ ಮಹಡಿಯ ಫ್ಲಾಟ್‌ನ ಕಿಟಕಿ ಮೇಲೆ ಮಲಗಿದ್ದ 57 ವರ್ಷದ ವ್ಯಕ್ತಿಯೊಬ್ಬರು 8ನೇ ಮಹಡಿಯ ಕಿಟಕಿಯ ಹೊರಗೆ ಅಳವಡಿಸಲಾದ ಲೋಹದ ಗ್ರಿಲ್‌ನಲ್ಲಿ ಸಿಲುಕಿಕೊಂಡು ಪವಾಡ ಸದೃಶವಾಗಿ ಬದುಕುಳಿದಿರುವ ಘಟನೆ ವರದಿಯಾಗಿದೆ. ನಿತಿನ್ ಆದಿಯಾ ಎಂಬ ವ್ಯಕ್ತಿ ಪವಾಡಸದೃಶವಾಗಿ ಬದುಕಿ ಉಳಿದಿದ್ದು, ಆತನನ್ನು ರಕ್ಷಿಸುವ ಮೊದಲು ಒಂದು ಗಂಟೆ ಕಾಲ ನೋವು ಅನುಭವಿಸಿ ತಲೆಕೆಳಗಾಗಿ ನೇತಾಡುತ್ತಿದ್ದರು ಎಂದು ಅಗ್ನಿಶಾಮಕ ಅಧಿಕಾರಿ ತಿಳಿಸಿದ್ದಾರೆ. ಅವರ ರಕ್ಷಣೆಯ ವೀಡಿಯೊಗಳು ಸಾಮಾಜಿಕ ಮಾಧ್ಯಮದಲ್ಲಿ ವೈರಲ್ ಆಗಿವೆ. ಅಗ್ನಿಶಾಮಕ ಇಲಾಖೆ ಅಧಿಕಾರಿಗಳ ಪ್ರಕಾರ, ಸೂರತ್‌ನ ಜಹಾಂಗೀರಾಬಾದ್ ಪ್ರದೇಶದ ಟೈಮ್ಸ್ ಗ್ಯಾಲಕ್ಸಿ ಕಟ್ಟಡದಲ್ಲಿ ಆದಿಯಾ ತಮ್ಮ ಫ್ಲಾಟ್‌ನ ಕಿಟಕಿಯ ಬಳಿ ಮಲಗಿದ್ದಾಗ ಆಕಸ್ಮಿಕವಾಗಿ ಹೊರಗೆ ಬಿದ್ದಿದ್ದಾರೆ. ಪಾಲನ್‌ಪುರದ ಜಹಾಂಗೀರ್‌ಪುರ ಮತ್ತು ಅದಜನ್‌ನಿಂದ ಅಗ್ನಿಶಾಮಕ ದಳದ ಅಧಿಕಾರಿಗಳು ಸ್ಥಳಕ್ಕೆ ಧಾವಿಸಿ ರಕ್ಷಣಾ ಕಾರ್ಯಾಚರಣೆ ನಡೆಸಿ, ವ್ಯಕ್ತಿಯನ್ನು ರಕ್ಷಿಸಿದರು.

ವಿಮಾನ ಅಪಘಾತದಲ್ಲಿ ಲಿಬಿಯಾ ಸೇನಾ ಮುಖ್ಯಸ್ಥ ಸೇರಿ ಐವರ ದುರ್ಮರಣ



ಲಿಬಿಯಾ: ಲಿಬಿಯಾದ ಸೇನಾ ಮುಖ್ಯಸ್ಥ ಲೆಫ್ಟಿನೆಂಟ್ ಜನರಲ್ ಮೊಹಮ್ಮದ್ ಅಲಿ ಅಹ್ಮದ್ ಅಲ್–ಹದ್ದಾದ್ ಮತ್ತು ಇತರ ನಾಲ್ವರು ವಿಮಾನ ಅಪಘಾತದಲ್ಲಿ ಸಾವನ್ನಪ್ಪಿದ್ದಾರೆ. ಟರ್ಕಿಯ ರಾಜಧಾನಿ ಅಂಕಾರಾಗೆ ಅಧಿಕೃತ ಭೇಟಿ ಬಳಿಕ ಹಿಂತಿರುಗುತ್ತಿದ್ದಾಗ ಸಂಭವಿಸಿದ ಅಪಘಾತದಲ್ಲಿ ಮೊಹಮ್ಮದ್ ಅಲಿ ಅಹ್ಮದ್ ಅಲ್–ಹದ್ದಾದ್ ಮತ್ತು ಇತರ ನಾಲ್ವರು ಮಿಲಿಟರಿ ಅಧಿಕಾರಿಗಳು ವಿಮಾನ ಅಪಘಾತದಲ್ಲಿ ಸಾವನ್ನಪ್ಪಿದ್ದಾರೆ ಎಂದು ಲಿಬಿಯಾದ ಪ್ರಧಾನಿ ಅಬ್ದುಲ್ಹಮಿದ್ ಧೈಬಾ ಹೇಳಿದ್ದಾರೆ. ಈ ಘಟನೆ ಅತ್ಯಂತ ದುಃಖಕರ ಮತ್ತು ನೋವಿನಿಂದ ಕೂಡಿದೆ ಎಂದು ಪ್ರಧಾನಿ ಹೇಳಿಕೆಯಲ್ಲಿ ತಿಳಿಸಿದ್ದಾರೆ. ಇದು ದೇಶ, ಸೇನೆ ಮತ್ತು ಇಡೀ ಲಿಬಿಯಾ ಸಮಾಜಕ್ಕೆ ದೊಡ್ಡ ನಷ್ಟ ಎಂದು ಅವರು ಬಣ್ಣಿಸಿದ್ದಾರೆ. ಅಪಘಾತದಲ್ಲಿ ಪ್ರಾಣ ಕಳೆದುಕೊಂಡ ಲಿಬಿಯಾದ ನೆಲದ ಪಡೆಗಳ ಕಮಾಂಡರ್, ಮಿಲಿಟರಿ ನಿರ್ಮಾಣ ಪ್ರಾಧಿಕಾರದ ನಿರ್ದೇಶಕ, ಮುಖ್ಯಸ್ಥರ ಸಲಹೆಗಾರ ಮತ್ತು ಅವರ ಕಚೇರಿಯ ಛಾಯಾಗ್ರಾಹಕ ಕೂಡ ವಿಮಾನದಲ್ಲಿದ್ದರು ಎಂದು ಧೈಬಾ ತಿಳಿಸಿದ್ದಾರೆ.

1.1 ಕೋಟಿ ಬಹುಮಾನ ಹೊಂದಿದ್ದ ನಕ್ಸಲ್ ನಾಯಕ ಗಣೇಶ್ ಉಯ್ಕೆ ಸೇರಿ ನಾಲ್ವರ ಹತ್ಯೆ



ಭುವನೇಶ್ವರ: ಒಡಿಶಾದಲ್ಲಿ ಮತ್ತೊಂದು ಬೃಹತ್ ನಕ್ಸಲ್ ಎನ್‌ಕೌಂಟರ್ ನಡೆದಿದ್ದು, ಬರೋಬ್ಬರಿ 1.1 ಕೋಟಿ ಬಹುಮಾನ ಹೊಂದಿದ್ದ ನಕ್ಸಲ್ ನಾಯಕ ಗಣೇಶ್ ಉಯ್ಕೆ ಸೇರಿ ನಾಲ್ವರನ್ನು ಹೊಡೆದುರುಳಿಸಲಾಗಿದೆ. ಒಡಿಶಾದ ಕಂಧಮಾಲ್‌ನಲ್ಲಿ ಭದ್ರತಾ ಪಡೆಗಳ ಜೊತೆಗಿನ ಗುಂಡಿನ ಚಕಮಕಿಯಲ್ಲಿ ಕುಖ್ಯಾತ ನಕ್ಸಲ್ ನಾಯಕ ಗಣೇಶ್ ಉಯ್ಕೆ ಸೇರಿದಂತೆ 4 ಮಂದಿ ಹತರಾಗಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಬೆಳಿಗ್ಗೆ 9 ಗಂಟೆಗೆ ಭದ್ರತಾ ಪಡೆಗಳು ರಂಭಾ ಅರಣ್ಯ ವ್ಯಾಪ್ತಿಯಲ್ಲಿ ಸಶಸ್ತ್ರ ಮಾವೋವಾದಿ ಪಡೆಯನ್ನು ಎದುರಿಸಿತು. ಈ ವೇಳೆ ಮಾವೋವಾದಿಗಳು ಗುಂಡು ಹಾರಿಸಿದರು. ಇದಕ್ಕೆ ಪ್ರತಿಯಾಗಿ ಭದ್ರತಾ ಸಿಬ್ಬಂದಿಗಳೂ ಕೂಡ ಪ್ರತಿ ದಾಳಿ ನಡೆಸಿದರು. ಮಧ್ಯಾಹ್ನದ ಹೊತ್ತಿಗೆ ಭದ್ರತಾ ಪಡೆಗಳು ಗಣೇಶ್ ಉಯ್ಕೆ ಸೇರಿದಂತೆ ನಾಲ್ವರು ಮಾವೋವಾದಿಗಳ ಮೃತದೇಹಗಳನ್ನು ಸ್ಥಳದಿಂದ ವಶಪಡಿಸಿಕೊಂಡವು. ಭದ್ರತಾ ಸಿಬ್ಬಂದಿ ಎರಡು INSAS ರೈಫಲ್‌ಗಳು ಮತ್ತು .303 ರೈಫಲ್ ಸೇರಿದಂತೆ ಹೆಚ್ಚಿನ ಸಾಮರ್ಥ್ಯದ ಶಸ್ತ್ರಾಸ್ತ್ರಗಳನ್ನು ವಶಪಡಿಸಿಕೊಂಡರು.

ಕಾಂಬೋಡಿಯಾ–ಥಾಯ್ಲೆಂಡ್ ಗಡಿಯಲ್ಲಿದ್ದ ವಿಷ್ಣು ಪ್ರತಿಮೆ ಧ್ವಂಸ



ಕಾಂಬೋಡಿಯಾ: ಥಾಯ್ಲೆಂಡ್ ಮತ್ತು ಕಾಂಬೋಡಿಯಾ ನಡುವೆ ಕಳೆದ 1 ತಿಂಗಳಿಂದ ನಡೆಯುತ್ತಿರುವ ಗಡಿ ಸಂಘರ್ಷ ಇದೀಗ ಕಾಂಬೋಡಿಯಾದಲ್ಲಿನ ವಿಷ್ಣುವಿನ ಪ್ರತಿಮೆಯನ್ನು ಬಲಿ ಪಡೆದಿದೆ. ಉಭಯ ದೇಶಗಳ ನಡುವಿನ ವಿವಾದಿತ ಪ್ರದೇಶದಲ್ಲಿ ಇರುವ, ಪ್ರಸಕ್ತ ಕಾಂಬೋಡಿಯಾ ಗಡಿಯೊಳಗೆ ಬರುವ 9 ಮೀಟರ್ (ಸುಮಾರು 30 ಅಡಿ) ಎತ್ತರದ ವಿಷ್ಣುವಿನ ವಿಗ್ರಹವನ್ನು ಥಾಯ್ಲೆಂಡ್ ಸೇನೆ ಬುಲ್ಡೋಜರ್ ಬಳಸಿ ಧ್ವಂಸಗೊಳಿಸಿದೆ. ಥಾಯ್ಲೆಂಡ್ ಗಡಿಯಿಂದ 100 ಕಿ.ಮೀ. ದೂರದಲ್ಲಿರುವ ಎನ್ ಸೆಸ್ ಪ್ರದೇಶದಲ್ಲಿ 2014ರಲ್ಲಿ ಕಾಂಬೋಡಿಯಾ ಸರ್ಕಾರ ಸಣ್ಣ ದೇಗುಲ ಮತ್ತು 9 ಮೀಟರ್ ಎತ್ತರದ ವಿಷ್ಣು ವಿಗ್ರಹವನ್ನು ಪ್ರತಿಷ್ಠಾಪಿಸಿತ್ತು. ಇದು ಇತ್ತೀಚಿನ ದಿನಗಳಲ್ಲಿ ಹಿಂದೂ ಮತ್ತು ಬೌದ್ಧರ ಪ್ರಮುಖ ಪ್ರಾರ್ಥನಾ ಸ್ಥಳವಾಗಿ ಹೊರಹೊಮ್ಮಿತ್ತು. ಆದರೆ ಈ ಪ್ರದೇಶ ತನಗೆ ಸೇರಿದ್ದೆಂದು ವಾದಿಸುತ್ತಿರುವ ಥಾಯ್ಲೆಂಡ್ ಸೇನೆ, ಬುಧವಾರ ಬುಲ್ಡೋಜರ್ ಸಮೇತ ಆಗಮಿಸಿ ವಿಗ್ರಹವನ್ನು ಧ್ವಂಸಗೊಳಿಸಿದೆ. ಈ ಪ್ರತಿಮೆಯನ್ನು ಇತ್ತೀಚಿನ ದಿನಗಳಲ್ಲಿ ನಿರ್ಮಿಸಲಾಗಿದೆ ಮತ್ತು ಎರಡೂ ದೇಶಗಳ ನಡುವಿನ ಉದ್ವಿಗ್ನತೆಯಿಂದ ಪ್ರಭಾವಿತವಾದ ಪ್ರದೇಶದಲ್ಲಿ ಇದೆ.

ಕೊಡಗು ಜಿಲ್ಲೆಯಾದ್ಯಂತ ಕ್ರೈಸ್ತ ಬಾಂಧವರಿಂದ ಕ್ರಿಸ್‌ಮಸ್ ಆಚರಣೆ

ಜಗಮಗಿಸಿದ ಚರ್ಚ್‌ಗಳು, ಆಕರ್ಷಕ ಗೋದಲಿಗಳು, ಮಿನುಗಿದ ನಕ್ಷತ್ರಗಳು, ಕೇಕ್ ಸವಿದು ಸಂಭ್ರಮ





ಕೊಡಗು ಜಿಲ್ಲೆಯ ಮಡಿಕೇರಿ, ವಿರಾಜಪೇಟೆ ಮತ್ತು ಕುಶಾಲನಗರ ಸೇರಿದಂತೆ ಜಿಲ್ಲೆಯಾದ್ಯಂತ ಏಸುಕ್ರಿಸ್ತ ಜನನದ ಸಂಕೇತವಾದ ಕ್ರಿಸ್‌ಮಸ್ ಹಬ್ಬವನ್ನು ಕ್ರೈಸ್ತ ಬಾಂಧವರು ಸಂಭ್ರಮದಿಂದ ಆಚರಿಸಿದರು.

ಮಡಿಕೇರಿ,ಡಿ.25– ಏಸುಕ್ರಿಸ್ತ ಜನನದ ಸಂಕೇತವಾದ ಕ್ರಿಸ್‌ಮಸ್ ಹಬ್ಬವನ್ನು ಕ್ರೈಸ್ತ ಬಾಂಧವರು ಜಿಲ್ಲೆಯಾದ್ಯಂತ ಸಂಭ್ರಮದಿಂದ ಆಚರಿಸಿದರು.

ವಿವಿಧ ಚರ್ಚ್‌ಗಳಲ್ಲಿ ರಾತ್ರಿ ವಿಶೇಷ ಪ್ರಾರ್ಥನೆ ಸಲ್ಲಿಸುವ ಮೂಲಕ ಏಸು ಧರೆಗಿಳಿದನೆಂದು ಗೋದಲಿಯಲ್ಲಿ ಬಾಲಯೇಸುವಿನ ಮೂರ್ತಿಯನ್ನು ಪ್ರತಿಷ್ಠಾಪಿಸಿ ಶ್ರದ್ಧಾಭಕ್ತಿಯನ್ನು ಮೆರೆದರು. ಮಡಿಕೇರಿಯ ಸಂತ ಮೈಕಲರ ಚರ್ಚ್ ಆವರಣದಲ್ಲಿ ನಿರ್ಮಿಸಲಾಗಿದ್ದ ಗೋದಲಿಯಲ್ಲಿ ಬಾಲಏಸುವಿನ ಪ್ರತಿಕೃತಿಯನ್ನಿರಿಸಿ ಪೂಜಿಸಲಾಯಿತು.

ಧರ್ಮಗುರು ಜಾರ್ಜ್ ದೀಪಕ್ ಪೂಜೆ ಸಲ್ಲಿಸಿ, ಏಸುವಿನ ಸಂದೇಶವನ್ನು ಸಾರಿದರು. ಸಂತ ಮೈಕಲರ ಸಂಸ್ಥೆಯ ಪ್ರತಿನಿಧಿ ಸಂಜಯ್ ಹಾಗೂ ಪ್ರಮುಖರು ಇದ್ದರು. ಕ್ರಿಸ್‌ಮಸ್ ಹಬ್ಬದ ಪ್ರಯುಕ್ತ ಚರ್ಚ್‌ಗಳನ್ನು ವಿದ್ಯುತ್ ದೀಪಾಲಂಕಾರದಿಂದ ಅಲಂಕರಿಸಲಾಗಿತ್ತು.

ವಿರಾಜಪೇಟೆ: ವಿದ್ಯುತ್ ದೀಪಗಳಿಂದ ಅಲಂಕರಿಸಲಾಗಿದ್ದ ಚರ್ಚುಗಳು ವಿಶೇಷ ಪ್ರಾರ್ಥನೆ.. ಆಕರ್ಷಣೀಯ ಗೋದಲಿಗಳು, ಸುತ್ತ ನಕ್ಷತ್ರಗಳ ಮಿಂಚು... ಏಸುಕ್ರಿಸ್ತನ ಜನ್ಮದಿನದ ಅಂಗವಾಗಿ ಕ್ರಿಸ್ಮಸ್ ಹಬ್ಬವನ್ನು ಸಂಭ್ರಮ–ಸಡಗರದಿಂದ ವಿರಾಜಪೇಟೆಯಲ್ಲಿ ಆಚರಿಸಲಾಯಿತು. ಸಹಸ್ರ ಸಂಖ್ಯೆಯಲ್ಲಿ ಕ್ರೈಸ್ತರು ಬಲಿ ಪೂಜೆಯಲ್ಲಿ ಭಾಗವಹಿಸಿದ್ದರು. ವಿವಿಧ ಚರ್ಚುಗಳ ಆವರಣದಲ್ಲಿ ಗೋದಲಿಗಳನ್ನು ನಿರ್ಮಿಸಲಾಗಿತ್ತು. ರಾತ್ರಿ ವೇಳೆ ಚರ್ಚುಗಳಲ್ಲಿ ಕ್ಯಾರೋಲ್ ಗಾಯನದ ಮೂಲಕ ಕ್ರಿಸ್ತನನ್ನು ಸ್ಮರಿಸಿ ಬಲಿ ಪೂಜೆ ಪ್ರಾರ್ಥನೆ ನಡೆಯಿತು. ಬಳಿಕ ಕ್ರಿಸ್ಮಸ್ ಜಾಗರಣೆಯನ್ನು ಸಡಗರದಿಂದ ಆಚರಿಸಲಾಯಿತು.

ವಿರಾಜಪೇಟೆಯ ಸಂತ ಅನ್ನದೇವಾಲಯದ ಪ್ರಧಾನ ಧರ್ಮ ಗುರುಗಳಾದ ರೆ.ಫಾ. ಜೇಮ್ಸ್ ಡೊಮಿನಿಕ್ ಕ್ರಿಸ್ಮಸ್ ಹಬ್ಬದ ಬಲಿ ಪೂಜೆ ಅರ್ಪಿಸಿ ಕ್ರಿಸ್ತ ಜನನದ ಮಹತ್ವ ಹಾಗೂ ಕ್ರಿಸ್ಮಸ್ ಸಂದೇಶ ನೀಡಿ ನಮ್ಮೆಲ್ಲರನ್ನು ಪ್ರೀತಿಸುವುದಕ್ಕಾಗಿ ಭೂಮಿಗೆ ಆಗಮಿಸಿದ ಯೇಸು ಸ್ವಾಮಿ ದನದಕೊಟ್ಟಿಗೆಯಾದ ಗೋದಲಿಯಲ್ಲಿ ಜನಿಸಿ ತನ್ನ ಸರಳತೆ, ಪ್ರೀತಿ ಪಡೆಯುವುದರಲ್ಲಿರುವ ಸಂತೋಷ ಇತರರಿಗೆ ಸೇವೆ ನೀಡುವುದರಲ್ಲಿ ಸಮಾಧಾನ ಪರಸ್ಪರ ದ್ವೇಷಿಸುವುದಕ್ಕಿಂತ ಯೇಸುವಿನಂತೆ ಇತರರನ್ನು ಪ್ರೀತಿಸುವ ಕೆಲಸ ಮಾಡಬೇಕಾಗಿದೆ ಎಂದರು. ಗುರುವಾರ ಬೆಳಿಗ್ಗೆ ನಡೆದ ಬಲಿ ಪೂಜೆಯಲ್ಲಿ ಗುರು ವಿನೋದ್ ಸಾಲ್ಡಾನಾ ಬಲಿಪೂಜೆ ನಡೆಸಿ ಸಂದೇಶ ನೀಡಿದರು.

ಆರ್ಜಿ, ಹೆಗ್ಗಳ, ಕೆದಮುಳ್ಳೂರು, ಅಮ್ಮತ್ತಿ ಎಲ್ಲಾ ಚರ್ಚುಗಳಲ್ಲಿ ಭಕ್ತರು ಬಲಿ ಪೂಜೆಯಲ್ಲಿ ಭಾಗವಹಿಸಿದರು. ಹಬ್ಬದ ಹಿನ್ನೆಲೆಯಲ್ಲಿ ಚರ್ಚುಗಳಲ್ಲಿ ಹೆಚ್ಚಿನ ಜನಸ್ತೋಮವಿತ್ತು. ಬಲಿ ಪೂಜೆಯ ಬಳಿಕ ಪರಸ್ಪರ ಹಬ್ಬದ ಶುಭಾಶಯ ವಿನಿಮಯ ಮಾಡುವುದು ಕಂಡು ಬಂತು. ಇನ್ನು ಕೆಲವು ಕಡೆ ವಿವಿಧ ಸಂಘ–ಸಂಸ್ಥೆಗಳ ವತಿಯಿಂದ ಮನೋರಂಜನಕಾರ್ಯಕ್ರಮ ನಡೆಯಿತು.

ಕ್ರಿಸ್ಮಸ್ ಆಚರಣೆ ವೇಳೆ ಬ್ರದರ್ ಜಯಂತ್, ನೋಬನ್ ಇತರ ಧರ್ಮಗುರುಗಳು ಸೇರಿದಂತೆ ಗ್ರಾಮೀಣ ಪ್ರದೇಶದ ಕ್ರೈಸ್ತ ಬಾಂಧವರು ಅಧಿಕ ಸಂಖ್ಯೆಯಲ್ಲಿ ನೆರೆದಿದ್ದರು. ಭಕ್ತಾದಿಗಳಿಗೆ ಕೇಕ್ ವಿತರಿಸಲಾಯಿತು.

ಕುಶಾಲನಗರ: ಪಟ್ಟಣದಲ್ಲಿ ಕ್ರೈಸ್ತ ಬಾಂಧವರು ಕ್ರಿಸ್ಮಸ್ ಹಬ್ಬವನ್ನು ಶ್ರದ್ಧಾಭಕ್ತಿ ಹಾಗೂ ವಿಜೃಂಭಣೆಯಿಂದ ಆಚರಿಸಿದರು.

ಕುಶಾಲನಗರದ ಹೃದಯ ಭಾಗದಲ್ಲಿರುವ ಸಂತ ಸೆಬಾಸ್ಟಿಯನ್ನರ ದೇವಾಲಯದಲ್ಲಿ ಕ್ರಿಸ್ಮಸ್ ಹಬ್ಬದ ಅಂಗವಾಗಿ ಕ್ರೈಸ್ತ ಬಾಂಧವರು ಹೊಸ ಉಡುಗೆ ತೊಡುಗೆ ಧರಿಸಿ ದೇವಾಲಯಕ್ಕೆ ತೆರಳಿ ವಿಶೇಷ ಪ್ರಾರ್ಥನೆ ಸಲ್ಲಿಸಿದರು. ದೇವಾಲಯದಲ್ಲಿ ಧರ್ಮಗುರು ವಂ.ಫಾ.ಎಂ. ಮಾರ್ಟಿನ್ ನೇತೃತ್ವದಲ್ಲಿ ವಿಶೇಷ ಪ್ರಾರ್ಥನೆ ನೆರವೇರಿಸಲಾಯಿತು.

ಸಂತ ಸೆಬಾಸ್ಟಿಯನ್ ದೇವಾಲಯದ ಯುವಕ ಸಂಘದಿಂದ ಯೇಸುವಿನ ಜನನವನ್ನು ಸ್ಮರಿಸಲು ಗೋದಲಿಯನ್ನು ವಿಶೇಷವಾಗಿ ನಿರ್ಮಿಸಲಾಗಿತ್ತು.

ಈ ಸಂದರ್ಭ ದೇವಾಲಯದ ಸಲಹಾ ಸಮಿತಿ, ಯುವಕ ಸಂಘ, ಮರಣ ನಿಧಿ ಸದಸ್ಯರು ಹಾಗು ಭಕ್ತಾದಿಗಳು ನೆರೆದಿದ್ದರು. ಕ್ರೈಸ್ತ ಬಾಂಧವರು ತಮ್ಮ ತಮ್ಮ ಮನೆಗಳಲ್ಲಿ ದನದಕೊಟ್ಟಿಗೆಯಲ್ಲಿ ಜನಿಸಿದ ಏಸುವಿನ ನೆನಪಿಗಾಗಿ ಗೋದಲಿ ನಿರ್ಮಿಸಿ, ಅದರಲ್ಲಿ ಬಾಲ ಏಸುವಿನ ಹಾಗೂ ಮಾತೆ ಮೇರಿಯ ಗೊಂಬೆ ಸ್ಥಾಪಿಸಿ ವಂದಿಸಿದರು. ಕ್ರಿಸ್‌ಮಸ್ ಮರ ಹಾಗೂ ಮನೆಯನ್ನು ವಿದ್ಯುತ್ ದೀಪಗಳಿಂದ ಶೃಂಗರಿಸಿದ್ದರು.

ಕುಶಾಲನಗರ ಸೆಬಾಸ್ಟೀನರ ಚರ್ಚ್ ಆಡಳಿತ ಮಂಡಳಿ ಪದಾಧಿಕಾರಿಗಳಾದ ಸಾವರಿನ್ ಡಿಸೋಜ, ಶಾಜಿ ಕೆ.ಜಾರ್ಜ್, ಕ್ರೆಜ್ವಲ್ ಕೊಟ್ಸ್, ರಾಯ್, ಯೋಸುದಾಸ್, ಜಾನ್, ಫಿಲಿಪ್ ವಾಸ್, ಅಂಥೋಣಿ ಇದ್ದರು.

ಸರಣಿ ರಸ್ತೆ ಅಪಘಾತ: ವಾಹನಗಳು ಜಖಂ




ನಾಪೋಕ್ಲು: ದೇವರಕೊಲ್ಲಿ ಸರಣಿ ರಸ್ತೆ ಅಪಘಾತವಾಗಿ ವಾಹನಗಳು ಜಖಂಗೊಂಡು ಪ್ರಯಾಣಿಕರು ಗಾಯಗೊಂಡ ಘಟನೆ ಗುರುವಾರ ಸಂಜೆ ಸಂಭವಿಸಿದೆ.


ಮೈಸೂರು– ಮಂಗಳೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ಮಡಿಕೇರಿ ಕಡೆ ಬರುತ್ತಿದ್ದ ಸ್ಕಾರ್ಪಿಯೊ ಮತ್ತು ಸುಳ್ಯದ ಕಡೆ ತೆರಳುತ್ತಿದ್ದ ಸ್ವಿಫ್ಟ್ ಕಾರುಗಳ ಮಧ್ಯೆ ದೇವರಕೊಲ್ಲಿ ಬಳಿ ಪರಸ್ಪರ ಡಿಕ್ಕಿಯಾಗಿ ಅಪಘಾತ ಸಂಭವಿಸಿದೆ. ಅದೇ ಮಾರ್ಗವಾಗಿ ಮಡಿಕೇರಿ ಕಡೆ ಬರುತ್ತಿದ್ದ ಲಾರಿ ಸ್ಕಾರ್ಪಿಯೋ ಹಿಂಬದಿಗೆ ಡಿಕ್ಕಿ ಹೊಡೆದು ಅಪಘಾತವನ್ನು ಇನ್ನಷ್ಟು ತೀವ್ರಗೊಳಿಸಿದೆ. ಇದರಿಂದಾಗಿ ಪ್ರಯಾಣಿಕರಿಗೆ ತೀವ್ರತರದ ಗಾಯಗಳಾಗಿದ್ದು, ಸ್ಥಳೀಯರ ಸಹಕಾರದಿಂದ ಗಾಯಾಳುಗಳನ್ನು ಸುಳ್ಯದ ಆಸ್ಪತ್ರೆಗೆ ಕೊಂಡೊಯ್ಯಲಾಗಿದ್ದು ವಾಹನಗಳು ತೀವ್ರ ಹಾನಿಗೊಳಗಾಗಿವೆ.

ಮಡಿಕೇರಿಯ ಶ್ರೀ ಕೋಟೆ ಮಾರಿಯಮ್ಮ ದೇವಾಲಯದಲ್ಲಿ ಶ್ರೀ ಅಯ್ಯಪ್ಪಸ್ವಾಮಿ ಪೂಜೆ

ಮಡಿಕೇರಿ: ಶ್ರೀ ಅಯ್ಯಪ್ಪ ಭಕ್ತ ವೃಂದದ ವತಿಯಿಂದ ನಗರದ ಶ್ರೀ ಕೋಟೆ ಮಾರಿಯಮ್ಮ ದೇವಾಲಯದಲ್ಲಿ ಶ್ರೀ ಅಯ್ಯಪ್ಪ ಸ್ವಾಮಿ ಪೂಜೆ ಶ್ರದ್ಧಾ ಭಕ್ತಿಯಿಂದ ನೆರವೇರಿತು.

ವಿಜಯ್ ಗುರುಸ್ವಾಮಿ ನೇತೃತ್ವದಲ್ಲಿ ಬಾಳೆ ದಿಂಡಿನ ಅಲಂಕೃತ ಮಂಟಪ ನಿರ್ಮಿಸಿ ಶಬರಿ ಗಿರಿವಾಸ ಶ್ರೀ ಅಯ್ಯಪ್ಪನ ಮೂರ್ತಿ ಪ್ರತಿಷ್ಠಾಪಿಸಿ ವಿವಿಧ ಪೂಜಾ ಕೈಂಕರ್ಯಗಳನ್ನು ನೆರವೇರಿಸಲಾಯಿತು. ಇದೇ ವೇಳೆ ಕನ್ನಿ ಪೂಜೆಯನ್ನು ನಡೆಸಲಾಯಿತು. ಬಳಿಕ ನೂರಾರು ಮಂದಿ ವ್ರತಾಧಾರಿಗಳು ಶರಣಂ ಅಪ್ಪಯ್ಯ ಎಂಬ ಅಯ್ಯಪ್ಪ ಸ್ವಾಮಿಯ ನಾಮ ಸ್ಮರಣೆಯೊಂದಿಗೆ ಕುದಿಯುವ ತುಪ್ಪದಲ್ಲಿ ಬೇಯುತ್ತಿದ್ದ ಕಜ್ಜಾಯವನ್ನು ಕೈಯಿಂದ ಹೊರ ತೆಗೆದು ಶ್ರೀ ಅಯ್ಯಪ್ಪನಿಗೆ ಸಮರ್ಪಿಸಿದರು.

ನಗರದ ವಿವಿಧ ಕಡೆಗಳಿಂದ ಆಗಮಿಸಿದ್ದ ಅಯ್ಯಪ್ಪ ವ್ರತಾಧಾರಿಗಳು ಶಬರಿ ಮಲೆ ಅಯ್ಯಪ್ಪನನ್ನು ಭಜಿಸುವ ಮೂಲಕ ಭಕ್ತಿ ಮೆರೆದರು. ಪುಟ್ಟ ಮಕ್ಕಳು ಕೂಡ ಅಯ್ಯಪ್ಪ ವ್ರತಾಧಾರಿಗಳಾಗಿ ಪೂಜೆಯಲ್ಲಿ ಪಾಲ್ಗೊಂಡಿದ್ದರು. ಅಯ್ಯಪ್ಪ ಸ್ವಾಮಿಗೆ ಮಹಾ ಮಂಗಳಾರತಿ ಬೆಳಗಿದ ಬಳಿಕ ನೆರೆದಿದ್ದ ಭಕ್ತರಿಗೆ ಮತ್ತು ಅಯ್ಯಪ್ಪ ವ್ರತಾಧಾರಿಗಳಿಗೆ ಅನ್ನ ಪ್ರಸಾದ ವಿತರಿಸಲಾಯಿತು.



ಕಾಂಗ್ರೆಸ್ ಅಲ್ಪಸಂಖ್ಯಾತರ ನಗರ ಘಟಕದ ಅಧ್ಯಕ್ಷರ ಅಧಿಕಾರ ಸ್ವೀಕಾರ



ಕುಶಾಲನಗರ ತಾಲೂಕು ಕಾಂಗ್ರೆಸ್ ಅಲ್ಪಸಂಖ್ಯಾತರ ಘಟಕದ ನಗರಾಧ್ಯಕ್ಷರಾಗಿ ಎಂ.ಜೆ.ಇರ್ಫಾನ್ ಅಧಿಕಾರ ಸ್ವೀಕರಿಸಿದರು. ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ವಿ.ಪಿ. ಶಶಿಧರ್, ಪಕ್ಷದ ಬಾವುಟವನ್ನು ಇರ್ಫಾನ್ ಅವರಿಗೆ ನೀಡಿದರು. ಅಲ್ಪಸಂಖ್ಯಾತರ ಘಟಕ ಕುಶಾಲನಗರ ಬ್ಲಾಕ್ ಅಧ್ಯಕ್ಷ ಅಬ್ದುಲ್ ರಜಾಕ್ ಅಧ್ಯಕ್ಷತೆ ವಹಿಸಿದ್ದರು. ಸಭೆಯಲ್ಲಿ ಯೋಜನಾ ಪ್ರಾಧಿಕಾರ ಸದಸ್ಯ ಸಜಿ, ಬ್ಲಾಕ್ ಉಪಾಧ್ಯಕ್ಷ ಶಾಂತಪ್ಪ ಅಂಥೋಣಿ, ಕಾರ್ಯದರ್ಶಿ ಮಜೀದ್, ಜಿಲ್ಲಾ ಸಮಿತಿ ಸದಸ್ಯ ಅಶ್ರಫ್, ಡಿಸಿಸಿ ಸದಸ್ಯ ಶೇಖರ್, ಬೀದಿಬದಿ ವ್ಯಾಪಾರಿ ಘಟಕದ ಅಧ್ಯಕ್ಷ ಆದಂ ಮತ್ತಿತರರು ಪಾಲ್ಗೊಂಡಿದ್ದರು.

ಚಾ.ನಗರ ಜಿಲ್ಲಾದ್ಯಂತ ಸಂಭ್ರಮದ ಕ್ರಿಸ್‌ಮಸ್



ಚಾಮರಾಜನಗರದ ಚರ್ಚ್‌ನಲ್ಲಿ ಕ್ರಿಸ್‌ಮಸ್ ಹಬ್ಬವನ್ನು ಸಡಗರ ಸಂಭ್ರಮದಿಂದ ಆಚರಿಸಲಾಯಿತು.

ಚಾಮರಾಜನಗರ, ಡಿ.25– ಪ್ರೀತಿ, ಮಮತೆ, ಶಾಂತಿ ಸಂದೇಶ ಸಾರಿದ ಏಸು ಕ್ರಿಸ್ತನ ಜನ್ಮ ದಿನದ ಪ್ರತೀಕವಾದ ಕ್ರಿಸ್‌ಮಸ್ ಹಬ್ಬವನ್ನು ಚಾಮರಾಜನಗರ, ಗುಂಡ್ಲುಪೇಟೆ, ಯಳಂದೂರು, ಕೊಳ್ಳೇಗಾಲ ಹಾಗೂ ಹನೂರು ಸೇರಿದಂತೆ ಜಿಲ್ಲಾದ್ಯಂತ ಸಡಗರ ಸಂಭ್ರಮದಿಂದ ಆಚರಿಸಲಾಯಿತು.

ಚರ್ಚ್‌ಗಳಲ್ಲಿ ಕ್ರೈಸ್ತ ಬಾಂಧವರು ಸಾಮೂಹಿಕ ಪ್ರಾರ್ಥನೆ ಸಲ್ಲಿಸಿದರು. ಹಬ್ಬದ ಪ್ರಯುಕ್ತ ಜಿಲ್ಲೆಯ ಎಲ್ಲಾ ಚರ್ಚ್‌ಗಳನ್ನು ಬಣ್ಣ ಬಣ್ಣದ ವಿದ್ಯುತ್ ದೀಪಗಳಿಂದ ಸಿಂಗರಿಸಲಾಗಿತ್ತು. ಬುಧವಾರ ರಾತ್ರಿಯಿಂದಲೇ ಚರ್ಚ್‌ಗಳಲ್ಲಿ ವಿಶೇಷ ಪೂಜೆ, ಪ್ರಾರ್ಥನೆ ನೆರವೇರಿಸಲಾಯಿತು.

ಕ್ರೈಸ್ತ ಬಾಂಧವರು ಹೊಸಬಟ್ಟೆ ತೊಟ್ಟು ಕೇಕ್ ಕತ್ತರಿಸಿ ಪರಸ್ಪರ ಸಿಹಿ ಹಂಚಿ ಹಬ್ಬದ ಶುಭಾಶಯ ವಿನಿಮಯ ಮಾಡಿಕೊಂಡರು. ಅಲ್ಲದೇ ಕ್ರೈಸ್ತ ಬಾಂಧವರು ತಮ್ಮ ಮನೆಗಳನ್ನು ಬಣ್ಣ ಬಣ್ಣದ ವಿದ್ಯುತ್ ದೀಪ, ಕ್ರಿಸ್‌ಮಸ್ ಟ್ರೀ, ಆಕಾಶ ದೀಪಗಳಿಂದ ಸಿಂಗರಿಸುವ ಜೊತೆಗೆ ಗೋದಲಿ ನಿರ್ಮಿಸಿ ಸಂಭ್ರಮಿಸಿದರು.

ವಿವಿಧೆಡೆ ಕ್ರಿಸ್‌ಮಸ್ ಆಚರಣೆ: ಚಾಮರಾಜನಗರ ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳಲ್ಲಿ ಕ್ರೈಸ್ತ ಬಾಂಧವರು ಸಂಭ್ರಮದಿಂದ ಕ್ರಿಸ್‌ಮಸ್ ಆಚರಿಸಿದರು. ಚಾಮರಾಜನಗರದ ಸಂತಪೌಲರ ದೇವಾಲಯ, ತಾಲೂಕಿನ ಮಸಗಾಪುರ, ಮಾದಾಪುರ, ನಾಗವಳ್ಳಿ ಸೇರಿದಂತೆ ಇತರೆ ಗ್ರಾಮಗಳ ಚರ್ಚ್‌ಗಳಿಗೆ ಕ್ರೈಸ್ತರು ತೆರಳಿ ಸಾಮೂಹಿಕ ಪ್ರಾರ್ಥನೆ ಸಲ್ಲಿಸಿದರು. ಹಬ್ಬದ ಅಂಗವಾಗಿ ಮನೆಗಳಲ್ಲಿ ಹಬ್ಬದೂಟ ತಯಾರಿಸಿ ಸವಿದು ಸಂಭ್ರಮಿಸಿದರು. ಇತರೆ ಧರ್ಮದವರು ಸಹ ಕ್ರೈಸ್ತ ಬಾಂಧವರ ಮನೆಗಳಿಗೆ ತೆರಳಿ ಹಬ್ಬದ ಶುಭಾಶಯ ಕೋರಿದರು.

ಹನೂರಿನ ವಿವಿಧೆಡೆ ಕ್ರಿಸ್‌ಮಸ್ ಆಚರಣೆ: ತಾಲೂಕಿನ ವಿವಿಧೆಡೆ ಕ್ರೈಸ್ತ ಬಾಂಧವರು ಸಂಭ್ರಮದಿಂದ ಕ್ರಿಸ್‌ಮಸ್ ಆಚರಿಸಿ, ಏಸುವಿನ ಸ್ಮರಣೆ ಮಾಡಿ ಪ್ರಾರ್ಥನೆ ಸಲ್ಲಿಸಿದರು.

ಪಟ್ಟಣದ ಕ್ರಿಸ್ತರಾಜ ವಿದ್ಯಾಸಂಸ್ಥೆ ಆವರಣದಲ್ಲಿರುವ ಚರ್ಚ್ ಸೇರಿದಂತೆ ಇನ್ನಿತರೆ ಕ್ರೈಸ್ತ ದೇಗುಲಗಳಲ್ಲಿ ಏಸುವಿನ ಸ್ಮರಣೆ ಮಾಡಿ ಸಾಮೂಹಿಕ ಪ್ರಾರ್ಥನೆ ಸಲ್ಲಿಸಿದರು. ಬಳಿಕ ಪರಸ್ಪರ ಹಬ್ಬದ ಶುಭಾಶಯ ಕೋರಿ ಸಿಹಿ ವಿತರಿಸಿದರು. ಚರ್ಚ್‌ಗಳಲ್ಲಿ ವಿಶೇಷ ಪೂಜೆ ಏರ್ಪಡಿಸಲಾಗಿತ್ತು ಹಬ್ಬದ ಪ್ರಯುಕ್ತ ಚರ್ಚ್‌ಗಳನ್ನು ವಿದ್ಯುತ್ ದೀಪ ಹಾಗೂ ಬಣ್ಣ ಬಣ್ಣದ ತೋರಣಗಳಿಂದ ಸಿಂಗರಿಸಲಾಗಿತ್ತು.

ಕೊಳ್ಳೇಗಾಲದಲ್ಲಿ ಏಸು ಕ್ರಿಸ್ತನ ಸ್ಮರಣೆ



ಕೊಳ್ಳೇಗಾಲ, ಡಿ.25– ತಾಲೂಕಿನಾದ್ಯಂತ ಕ್ರೈಸ್ತ ಬಾಂಧವರು ಸಡಗರ ಸಂಭ್ರಮದಿಂದ ಕ್ರಿಸ್‌ಮಸ್ ಆಚರಿಸಿದರು.

ಪಟ್ಟಣದ ಕ್ಯಾಥೋಲಿಕ್ ಹಾಗೂ ಪ್ರಾಟೆಸ್ಟೆಂಟ್ ಪಂಥದವರು ಆಯಾ ಚರ್ಚ್‌ಗಳಿಗೆ ಭೇಟಿ ನೀಡಿ ಏಸುವಿಗೆ ಸಾಮೂಹಿಕ ಪ್ರಾರ್ಥನೆ ಸಲ್ಲಿಸಿ ಪರಸ್ಪರ ಶುಭಾಶಯ ವಿನಿಮಯ ಮಾಡಿಕೊಂಡು ಕೇಕ್ ವಿತರಿಸಿ ಸಂಭ್ರಮಾಚರಣೆ ನಡೆಸಿದರು.

ಪಟ್ಟಣದ ಕ್ರಿಶ್ಚಿಯನ್ನರ ಬಡಾವಣೆ ಹಾಗೂ ಸಂತ ಫ್ರಾನ್ಸಿಸ್ ಅಸ್ಸಿಸಿ ಚರ್ಚ್, ಬೇತೆಲ್ ಲೂಥರನ್ ಚರ್ಚ್, ಸೆವೆಂತ್ ಡೇ ಚರ್ಚ್, ಕಲ್ವಾರಿ ಎಜೆ ಚರ್ಚ್, ಅರುಣೋದಯ ಯೇಸು ಚರ್ಚ್, ಸಿಎಸ್ಐ ಚರ್ಚ್, ಬ್ರದರನ್ ಚರ್ಚ್, ಸಂತ ಅಗಸ್ಟಿನ್ ಚರ್ಚ್ ಸೇರಿದಂತೆ ತಾಲೂಕಿನಾದ್ಯಂತ ಎಲ್ಲಾ ಚರ್ಚ್‌ಗಳು ವಿದ್ಯುತ್ ದೀಪಾಲಂಕಾರದಿಂದ ಕಂಗೊಳಿಸುತ್ತಿದ್ದವು.

ನಂಜೇದೇವನಪುರ ಸೇರಿ 7 ಗ್ರಾಮಗಳಲ್ಲಿ ಟಾಂಟಾಂ




ಚಾಮರಾಜನಗರ, ಡಿ.25– ತಾಲೂಕಿನ ನಂಜೇದೇವನಪುರ ಗ್ರಾಮದಲ್ಲಿ ಕಳೆದ ನಾಲ್ಕೈದು ದಿನಗಳ ಹಿಂದೆ ಕಾಣಿಸಿಕೊಂಡಿದ್ದ 5 ಹುಲಿಗಳ ಭೀತಿ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದು, ಅರಣ್ಯ ಇಲಾಖೆ ಅಧಿಕಾರಿಗಳು ನಂಜೇದೇವನಪುರ ಸೇರಿ 7 ಗ್ರಾಮಗಳಲ್ಲಿ ಟಾಂ ಟಾಂ ಮೂಲಕ ಸಾರ್ವಜನಿಕರಿಗೆ ಎಚ್ಚರಿಕೆ ನೀಡುತ್ತಿದ್ದಾರೆ.

ತಾಲೂಕಿನ ನಂಜೇದೇವನಪುರ, ವೀರನಪುರ, ಉಡಿಗಾಲ, ಶಿವಪುರ, ಹಳೇಪುರ, ಹರವೆ ಹಾಗೂ ಕೆ.ಕೆ.ಹುಂಡಿ ಗ್ರಾಮಗಳಲ್ಲಿ ಅರಣ್ಯ ಇಲಾಖೆ ಸಿಬ್ಬಂದಿ ಬೆಳಗ್ಗೆಯಿಂದಲೂ ಅರಣ್ಯ ಇಲಾಖೆ ವಾಹನಗಳಲ್ಲಿ ಗ್ರಾಮಸ್ಥರು ಜಾಗೃತರಾಗಿರಬೇಕು. ಕಾರ್ಯಾಚರಣೆಗೆ ಸಹಕರಿಸಬೇಕು ಎಂದು ಟಾಂ ಟಾಂ ಮಾಡುತ್ತಿದ್ದಾರೆ.

ಅರಣ್ಯ ಇಲಾಖೆಯಿಂದ ಜಾಗೃತಿ: ಹುಲಿಗಳು ಮುಂಜಾನೆ ಮತ್ತು ಸಂಜೆ ವೇಳೆ ಸಂಚಾರ ಮಾಡುತ್ತಿವೆ. ಮಕ್ಕಳನ್ನು ಒಂಟಿಯಾಗಿ ಆಡಲೂ ಬಿಡಬೇಡಿ. ಜಮೀನುಗಳಿಗೆ ಒಬ್ಬೊಬ್ಬರೇ ಹೋಗದಂತೆ ಸೂಚನೆ ನೀಡಿದ್ದಾರೆ. ಒಂದು ವೇಳೆ ಹುಲಿ ಕಂಡ ತಕ್ಷಣ ಗಾಬರಿಯಾಗದೇ ಬಟ್ಟೆ ಬೀಸುತ್ತಾ ಶಬ್ದ ಮಾಡಿಕೊಂಡು ನಿಧಾನವಾಗಿ ಹಿಂದೆ ಸರಿಯಿರಿ. ಅದನ್ನು ಬಿಟ್ಟು ಹುಲಿ ಕಂಡೊಡನೆ ಕಲ್ಲು ಹಾಗೂ ಇತರೆ ವಸ್ತು ಎಸೆಯಬಾರದು. ಇದರಿಂದ ಹುಲಿ ಕೆರಳುವ ಸಾಧ್ಯತೆ ಇದೆ. ಸಂಜೆ ಸಮಯದಲ್ಲಿ ಅನಾವಶ್ಯಕ ಸಂಚಾರ ಮಾಡಬೇಡಿ. ಹುಲಿ ಕಂಡ ತಕ್ಷಣ ಅರಣ್ಯ ಇಲಾಖೆ ಮಾಹಿತಿ ನೀಡಬೇಕು ಎಂದು ಟಾಂಟಾಂ ಮೂಲಕ ಅರಣ್ಯಾಧಿಕಾರಿಗಳು ಮನವಿ ಮಾಡಿಕೊಂಡಿದ್ದಾರೆ.

ಕಾರ್ಯಾಚರಣೆ ವೇಳೆ ಯಾರೂ ಕೂಡ ಜಮೀನಿನ ಬಳಿ ಹೋಗಬಾರದು. ಗುಂಪು ಗೂಡುವುದು. ಕಾರ್ಯಾಚರಣೆಗೆ ಅಡ್ಡಿ ಮಾಡುವುದು ಬೇಡ. ಸಾಕು ಪ್ರಾಣಿಗಳ ಸುರಕ್ಷತೆಗೆ ಒತ್ತು ನೀಡಬೇಕು ಹಾಗೂ ತುರ್ತು ಸಂದರ್ಭದಲ್ಲಿ 08226–225165 ಅಥವಾ ವಲಯ ಅರಣ್ಯಾಧಿಕಾರಿ ಮೊ. 9945251173ಗೆ ಕರೆ ಮಾಡಿ ಮಾಹಿತಿ ನೀಡಬೇಕು ಎಂದು ಪ್ರಕಟಣೆ ಹೊರಡಿಸಿದ್ದಾರೆ.

ದೇಪಾಪುರದಲ್ಲಿ ಬೋನಿಗೆ ಬಿದ್ದ ಹುಲಿ



ಬೋನಿಗೆ ಬಿದ್ದ ಹುಲಿ.

ಗುಂಡ್ಲುಪೇಟೆ, ಡಿ.25– ತಾಲೂಕಿನ ದೇಪಾಪುರದಲ್ಲಿ ಅರಣ್ಯ ಇಲಾಖೆ ಇರಿಸಿದ್ದ ಬೋನಿಗೆ 4 ವರ್ಷದ ಹೆಣ್ಣು ಹುಲಿ ಗುರುವಾರ ಬಿದ್ದಿದೆ.

ಕಳೆದ ವಾರ ಗ್ರಾಮದ ನಿವಾಸಿ ವೀರಭದ್ರಪ್ಪ ಅವರ ಜಮೀನಿನಲ್ಲಿ ಮೇಯುತ್ತಿದ್ದ ಹಸುವಿನ ಮೇಲೆ ಹುಲಿ ದಾಳಿ ನಡೆಸಿ ಬಲಿ ಪಡೆದಿತ್ತು. ಈ ಹಿನ್ನೆಲೆಯಲ್ಲಿ ಗ್ರಾಮಸ್ಥರು ಹುಲಿ ಸೆರೆ ಹಿಡಿಯುವಂತೆ ಅರಣ್ಯ ಇಲಾಖೆ ಅಧಿಕಾರಿಗಳಿಗೆ ಮನವಿ ಸಲ್ಲಿಸಿದ್ದರು. ಇದಕ್ಕೆ ಸ್ಪಂದಿಸಿದ ಅಧಿಕಾರಿಗಳು ಗ್ರಾಮದ ಹೊರವಲಯದ ಜಮೀನಿನಲ್ಲಿ ಬೋನಿಟ್ಟು ಒಳಗೆ ಕರು ಕಟ್ಟಿ ಹಾಕಿದ್ದರು. ಕರು ಬೇಟೆಯಾಡಲು ಬಂದ ಹುಲಿ ಬೋನಿಗೆ ಬಿದ್ದಿದ್ದು, ಎಂದಿನಂತೆ ಅರಣ್ಯ ಇಲಾಖೆ ಸಿಬ್ಬಂದಿ ಕರುವಿಗೆ ಮೇವು ಹಾಗೂ ನೀರು ಸರಬರಾಜು ಮಾಡಲು ಹೋಗಿದ್ದಾಗ ಬೋನಿನಲ್ಲಿ ಹುಲಿ ಸೆರೆಯಾಗಿರುವುದು ಕಂಡು ಬಂದಿದೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಬಂಡೀಪುರ ಹುಲಿ ಯೋಜನೆ ನಿರ್ದೇಶಕ ಹಾಗೂ ಪಶುವೈದ್ಯ ಡಾ.ಆದರ್ಶ್ ಹುಲಿಗೆ ಅರವಳಿಕೆ ಚುಚ್ಚು ಮದ್ದು ನೀಡಿ ಪ್ರಜ್ಞೆ ತಪ್ಪಿಸಿ ಬಳಿಕ ಲಾರಿಗೆ ಸ್ಥಳಾಂತರಿಸಿ ಮೈಸೂರಿನ ಮೃಗಾಲಯಕ್ಕೆ ಸುರಕ್ಷಿತವಾಗಿ ಕಳುಹಿಸಿದರು. ಹುಲಿ ಸೆರೆಯಾಗಿರುವ ವಿಷಯ ತಿಳಿದು ಸುತ್ತಮುತ್ತಲ ಗ್ರಾಮಗಳ ಗ್ರಾಮಸ್ಥರು ಭಾರೀ ಸಂಖ್ಯೆಯಲ್ಲಿ ಜಮಾಯಿಸಿದರು. ಈ ವೇಳೆ ಸ್ಥಳಕ್ಕೆ ಆಗಮಿಸಿದ ತೆರಕಣಾಂಬಿ ಠಾಣೆ ಎಸ್ಐ ಕೆ.ಎಂ.ಮಹೇಶ್ ಹಾಗೂ ಸಿಬ್ಬಂದಿ ಜನರು ಬೋನಿನ ಹತ್ತಿರ ಹೋಗದಂತೆ ನಿಯಂತ್ರಿಸಿದರು.

ಇದೇ ವೇಳೆ ಈ ಭಾಗದಲ್ಲಿ ಇನ್ನೂ 2 ಹುಲಿಗಳಿದ್ದು ಅವುಗಳನ್ನು ಸೆರೆ ಹಿಡಿಯಬೇಕು. ಕಳೆದ ವಾರ ಬೊಮ್ಮಲಾಪುರದಲ್ಲಿ ಕಾರ್ಯಾಚರಣೆ ನಡೆಸಿ ಹುಲಿ ಸೆರೆ ಹಿಡಿದಿದ್ದರೂ ಮತ್ತೊಂದು ಅಲ್ಲಿಗೆ ಬಂದಿದೆ. ಅದನ್ನು ಸೆರೆ ಹಿಡಿಯಲು ಕ್ರಮ ಕೈಗೊಳ್ಳಿ ಎಂದು ವಡೆಯನಪುರ ಗ್ರಾಮದ ವಿ.ಎಸ್.ವಿಶ್ವಾಸ್ ಅರಣ್ಯಾಧಿಕಾರಿ ಪ್ರಭಾಕರನ್ ಅವರಿಗೆ ಮನವಿ ಮಾಡಿದರು.

ಕ್ರೈಸ್ತರು ಸೇರಿದಂತೆ ಎಲ್ಲಾ ಸಮುದಾಯದ ಅಭಿವೃದ್ಧಿಗೆ ಶ್ರಮಿಸಿದ್ದೇನೆ

ಶಾಸಕ ಎ.ಆರ್.ಕೃಷ್ಣಮೂರ್ತಿ

ಕೊಳ್ಳೇಗಾಲ, ಡಿ.25– ಕ್ಷೇತ್ರದ ಶಾಸಕನಾಗಿ ಕಳೆದ ಎರಡೂವರೆ ವರ್ಷಗಳಲ್ಲಿ ಕ್ರೈಸ್ತ ಸೇರಿದಂತೆ ಎಲ್ಲಾ ಸಮಾಜದ ಅಭಿವೃದ್ಧಿಗೆ ಶ್ರಮಿಸಿದ್ದೇನೆ ಎಂದು ಶಾಸಕ ಎ.ಆರ್.ಕೃಷ್ಣಮೂರ್ತಿ ತಿಳಿಸಿದರು.

ಪಟ್ಟಣದ ಹಲವು ಚರ್ಚ್‌ಗಳಿಗೆ ಭೇಟಿ ನೀಡಿ ಕ್ರೈಸ್ತ ಬಾಂಧವರಿಗೆ ಶುಭಾಶಯ ಕೋರಿ ಬಳಿಕ ನಡೆದ ಪ್ರಾರ್ಥನಾ ಸಭೆಯಲ್ಲಿ ಮಾತನಾಡಿದ ಅವರು, ನಾಡಿನಾದ್ಯಂತ ಸಮೃದ್ಧ ಮಳೆ, ಬೆಳೆಯಾಗಿ ರಾಜ್ಯದ ಜನತೆ ಸಮೃದ್ಧಿಯಾಗಿ ಬಾಳ್ವೆ ನಡೆಸುವಂತಾಗಲಿ. ರಾಜ್ಯಕ್ಕೆ ಅನ್ನ ನೀಡುವ ರೈತರ ಬದುಕು ಹಸನಾಗಲಿ ಎಂದರು.

ಏಸು ಕ್ರಿಸ್ತನ ಆಶೀರ್ವಾದದಿಂದ ನಿಮ್ಮೆಲ್ಲರ ಸೇವೆ ಮಾಡುವ ಭಾಗ್ಯ ಸಿಕ್ಕಿದೆ. ಚರ್ಚ್ ದೇವರ ಮಂಟಪವಿದ್ದಂತೆ. ಇಲ್ಲಿನ ಕೆಲ ಚರ್ಚ್‌ಗಳಿಗೆ ಕಾಯಕಲ್ಪ ನೀಡಬೇಕು ಎಂಬ ಭಾವನೆಯಿಂದಾಗಿ ನನ್ನ ಕೈಲಾದ ಪ್ರಯತ್ನ ಮಾಡಿದ್ದೇನೆ. ಈ ಹಿಂದೆ 2008ರಲ್ಲಿ ಚರ್ಚ್‌ಗಳಿಗೆ ಭೇಟಿ ನೀಡಿದ್ದ ವೇಳೆ ಅಲ್ಲಿನ ಫಾದರ್ ಹೇಳಿದಂತೆ ನಾನು ಶಾಸಕನಾದ ಎಂದ ಅವರು 25 ಕೋಟಿ ರೂ. ಅನುದಾನದಲ್ಲಿ ಲೂಥರನ್ ಸೇರಿದಂತೆ 2 ಚರ್ಚ್‌ಗಳಿಗೆ ತಲಾ 50 ಲಕ್ಷ ರೂ. ನೀಡಿದ್ದು, ಕಾಮಗಾರಿ ಪ್ರಗತಿಯಲ್ಲಿದೆ ಎಂದರು.



ಶಾಸಕ ಎ.ಆರ್.ಕೃಷ್ಣಮೂರ್ತಿ ಕ್ರೈಸ್ತ ಬಾಂಧವರಿಗೆ ಶುಭ ಕೋರಿದರು.

ಈ ವೇಳೆ ಶಾಸಕರು ಪಟ್ಟಣದ ಸಿಎಸ್ಐ ಚರ್ಚ್, ಆರ್‌ಸಿ ಚರ್ಚ್, ಲೂಥರನ್ ಚರ್ಚ್, ಎಸ್‌ಡಿಎ ಚರ್ಚ್, ಅರುಣೋದಯ ಚರ್ಚ್ ಹಾಗೂ ಜಕ್ಕಳ್ಳಿ ಚರ್ಚ್ ಸೇರಿದಂತೆ ಇನ್ನಿತರ ಚರ್ಚ್‌ಗಳಿಗೆ ತೆರಳಿ ಶುಭಾಶಯ ಕೋರಿದರು.

ಈ ವೇಳೆ ಫಾದರ್ ಎಂ.ರಾಯಪ್ಪ, ರೇ. ಜೋಸುವ ಪ್ರಸನ್ನ, ವಿನ್ಸೆಂಟ್ ಅಮಲ್ ದಾಸ್, ಮೋರವನ್ ವೆಸ್ಲಿ, ರೆವರೆಂಟ್ ಪ್ರಕಾಶ್, ಫಾಸ್ಟರ್ ಸಾಧು, ಕ್ರೈಸ್ತ ಸಮುದಾಯದ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಸೆಲ್ವರಾಜು, ನರೇಂದ್ರನಾಥ್, ಜಾನ್‌ಪೀಟರ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ತೋಂಟೇಶ್, ಕಾರ್ಯದರ್ಶಿ ರವಿ, ನಂಜುಂಡಸ್ವಾಮಿ, ನಗರಸಭೆ ಮಾಜಿ ಅಧ್ಯಕ್ಷ ಶಾಂತರಾಜು, ರಮೇಶ್, ಮಾಜಿ ಸದಸ್ಯ ರಾಘವೇಂದ್ರ, ಸ್ವಾಮಿ ನಂಜಪ್ಪ, ಮಂಜುನಾಥ್, ಕಾಂಗ್ರೆಸ್ ಮುಖಂಡರಾದ ನಾಗರಾಜು, ವೀರಭದ್ರಸ್ವಾಮಿ, ಚೇತನ್ ದೊರೆ, ರಿಯುರೋನಿತ್ ಇನ್ನಿತರರಿದ್ದರು.

ಇಂದು ಉಚಿತ ಕಣ್ಣಿನ ತಪಾಸಣಾ ಶಿಬಿರ

ಬೇಗೂರು, ಡಿ.25– ಶಾಸಕ ಹೆಚ್.ಎಂ.ಗಣೇಶ್ ಪ್ರಸಾದ್ ಅವರ ಹುಟ್ಟುಹಬ್ಬದ ಅಂಗವಾಗಿ ಜಿಲ್ಲಾ ಅಂಧತ್ವ ನಿಯಂತ್ರಣ ಸಂಸ್ಥೆ, ಕೊಯಮತ್ತೂರಿನ ಅರವಿಂದ ಕಣ್ಣಿನ ಆಸ್ಪತ್ರೆ ಸಹಯೋಗದಲ್ಲಿ ಬೇಗೂರಿನ ಬಿಸಿಎಂ ಹಾಸ್ಟೆಲ್ ಆವರಣದಲ್ಲಿ ಡಿ.26 ರಂದು ಬೆಳಗ್ಗೆ 10.30ರಿಂದ ಮಧ್ಯಾಹ್ನ 1.30ರವರೆಗೆ ಉಚಿತ ಕಣ್ಣಿನ ತಪಾಸಣಾ ಶಿಬಿರ ನಡೆಯಲಿದೆ. ಸಾರ್ವಜನಿಕರು ಸದುಪಯೋಗ ಪಡಿಸಿಕೊಳ್ಳುವಂತೆ ಪ್ರಕಟಣೆ ತಿಳಿಸಿದೆ.

ಯೂರಿಯಾ ಮಿಶ್ರಿತ ನೀರು ಕುಡಿದು 13 ಆಡು ಸಾವು


ಆರೋಪಿ ಬಂಧಿಸಿದ ಅರಣ್ಯ ಇಲಾಖೆ ಅಧಿಕಾರಿಗಳು



ಕೊಳ್ಳೇಗಾಲ, ಡಿ.25– ಯೂರಿಯಾ ಮಿಶ್ರಿತ ನೀರನ್ನು ಕುಡಿದು 13 ಆಡುಗಳು ಸಾವನ್ನಪ್ಪಿರುವ ಘಟನೆ ತಾಲೂಕಿನ ಜಾಗೇರಿಯಲ್ಲಿ ನಡೆದಿದೆ.

ಸತ್ತೇಗಾಲ ಗ್ರಾಪಂ ವ್ಯಾಪ್ತಿಯ ಜಾಗೇರಿ ಹಳೆಕೋಟೆ ಗ್ರಾಮದ ನಿವಾಸಿ ಫ್ರಾನ್ಸಿಸ್ ಅವರಿಗೆ ಸೇರಿದ ಮೇಕೆಗಳು ಸಾವನ್ನಪ್ಪಿರುವುದು. ಅದೇ ಗ್ರಾಮದ ವೇಟ್ರಿವೇಲ್ ಎಂಬಾತ ಕಾಡುಪ್ರಾಣಿಗಳನ್ನು ಬೇಟೆಯಾಡುವ ಉದ್ದೇಶದಿಂದ ನೀರಿಗೆ ಯೂರಿಯಾ ಮಿಶ್ರಣ ಮಾಡಿದ್ದರು. ಈ ನೀರನ್ನು ಕುಡಿದ ಮೇಕೆಗಳು ಸಾವನ್ನಪ್ಪಿದ್ದವು. ಈ ಸಂಬಂಧ ಅರಣ್ಯ ಇಲಾಖೆ ಪ್ರಕರಣ ದಾಖಲಿಸಿಕೊಂಡಿತ್ತು. ಬಳಿಕ ಮಲೆಮಹದೇಶ್ವರ ವನ್ಯಜೀವಿ ವಿಭಾಗದ ಉಪಅರಣ್ಯ ಸಂರಕ್ಷಣಾಧಿಕಾರಿ ಬಿ.ಭಾಸ್ಕರ್ ಹಾಗೂ ಕೊಳ್ಳೇಗಾಲ ವನ್ಯಜೀವಿ ಉಪ ವಿಭಾಗದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಕೆ.ಶಿವರಾಂ ಅವರ ಮಾರ್ಗದರ್ಶನದಲ್ಲಿ ಕೊಳ್ಳೇಗಾಲ ಬಫರ್ ವಲಯದ ವಲಯಅರಣ್ಯಾಧಿಕಾರಿ ರವಿಕುಮಾರ್ ಪುರಾಣಿಕ ಮಠ ಅವರ ನೇತೃತ್ವದ ತಂಡ ಕಾರ್ಯಾಚರಣೆ ನಡೆಸಿ ಜಾಗೇರಿ ಹಳೆಕೋಟೆ ಗ್ರಾಮದ ವೆಟ್ರಿವೇಲ್‌ನನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ಗುರುಸಿದ್ದಶೆಟ್ಟಿ ನಿಧನ



ಚಾಮರಾಜನಗರ, ಡಿ.25– ತಾಲೂಕಿನ ಕಿಲಗೆರೆ ಗ್ರಾಮದ ನಿವಾಸಿ ಗುರುಸಿದ್ದಶೆಟ್ಟಿ(75) ಗುರುವಾರ ಮಧ್ಯಾಹ್ನ ನಿಧನರಾದರು.

ಮೃತರು ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಶುಕ್ರವಾರ ಸ್ವಗ್ರಾಮದಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.




'ಮಾರ್ಕ್' ಚಿತ್ರದಲ್ಲಿ ಕಿಚ್ಚನ ರೌದ್ರಾವತಾರ

ಕಿಚ್ಚ ಸುದೀಪ್ ಅಭಿನಯದ 'ಮಾರ್ಕ್' ಸಿನಿಮಾ ಈಗಾಗಲೇ ತನ್ನ ಟ್ರೈಲರ್, ಮಸ್ತ್ ಮಲೈಕಾ ಹಾಡಿನ ಮೂಲಕ ಚಿತ್ರರಂಗದಲ್ಲಿ ದೊಡ್ಡ ಮಟ್ಟದ ವೈಬ್ ಕ್ರಿಯೆಟ್ ಮಾಡಿದೆ. ಈ ಚಿತ್ರ ಗುರುವಾರವೇ ಪ್ರೇಕ್ಷಕರ ಮುಂದೆ ಬಂದಿದೆ. ಮೊನ್ನೆಯಷ್ಟೆ ಈ ಚಿತ್ರದ ಕಾಳಿ ಸಾಂಗ್ ಬಿಡುಗಡೆಯಾಗಿದ್ದು, ಅನಿರುದ್ಧ ಶಾಸ್ತ್ರಿ ಅವರ ಸಾಹಿತ್ಯಕ್ಕೆ ಅವರೇ ದನಿಯಾಗಿದ್ದಾರೆ. ಅಜನೀಶ್ ಲೋಕನಾಥ್ ಅವರ ಸಂಗೀತ ನಿರ್ದೇಶನ ಈ ಹಾಡಿಗಿದೆ. ನಾಯಕ ನಟ ಕಿಚ್ಚ ಸುದೀಪ್ ಕಾಳಿ ಹಾಡಿನಲ್ಲಿ ರೌದ್ರಾವತಾರ ತಾಳಿದ್ದಾರೆ. ಕೈಯಲ್ಲಿ ತ್ರಿಶೂಲ ಹಿಡಿದು ದುಷ್ಟರ ಸಂಹಾರ ಮಾಡಲು ಹೊರಟಂತೆ ಹೊಸದೊಂದು ಅವತಾರದಲ್ಲಿ ಸುದೀಪ್ ಅವರು ಕಾಣಿಸಿಕೊಂಡಿದ್ದಾರೆ.

ಮಾರ್ಕ್ ಚಿತ್ರವನ್ನು ನಿರ್ದೇಶನ ಮಾಡಿರುವುದು ವಿಜಯ್ ಕಾರ್ತಿಕೇಯ. ಈ ಚಿತ್ರದಲ್ಲಿ ಸುದೀಪ್ ಅವರ ಜೊತೆಗೆ ಶೈನ್ ಟಾಮ್ ಚಾಕೊ, ತೆಲುಗಿನ ಯೋಗಿಬಾಬು ಸೇರಿದಂತೆ ಹಲವಾರು ಪ್ರತಿಭಾವಂತ ಕಲಾವಿದರು ನಟಿಸಿದ್ದಾರೆ.

ಈ ಚಿತ್ರಕ್ಕೆ ಕಿಚ್ಚ ಕ್ರಿಯೇಷನ್ ಮತ್ತು ಸತ್ಯಜ್ಯೋತಿ ಫಿಲಂಸ್ ಸೇರಿ ಬಂಡವಾಳ ಹೂಡಿದೆ. ಅಲ್ಲದೆ ಈ ಸಿನಿಮಾಕ್ಕೆ ಅಜನೀಶ್ ಲೋಕನಾಥ್ ಅವರು ಸಂಗೀತ ನಿರ್ದೇಶನ ಮಾಡಿದ್ದಾರೆ. ಸುಪ್ರಿಯಾನ್ವಿ ಪಿಕ್ಚರ್ ಸ್ಟುಡಿಯೋಸ್ ಮೂಲಕ ಪ್ರಿಯಾ ಸುದೀಪ್ ಅವರು 'ಮಾರ್ಕ್' ಸಿನಿಮಾವನ್ನು ವಿತರಣೆ ಮಾಡುತ್ತಿದ್ದಾರೆ. ಇವರೊಂದಿಗೆ ಕೆಆರ್‌ಜಿ ಸ್ಟುಡಿಯೋಸ್ ಕೈಜೋಡಿಸಿದೆ.





400ಕ್ಕೂ ಹೆಚ್ಚು ಸ್ಕ್ರೀನ್‌ಗಳಲ್ಲಿ

'45' ವಿಸ್ಮಯ ಜಗತ್ತು

ಡಾ. ಶಿವರಾಜಕುಮಾರ್, ಉಪೇಂದ್ರ ಹಾಗೂ ರಾಜ್ ಬಿ. ಶೆಟ್ಟಿ ಪ್ರಮುಖ ಪಾತ್ರಗಳಲ್ಲಿ ನಟಿಸಿರುವ ಬಹು ನಿರೀಕ್ಷಿತ ಚಿತ್ರ '45' ಇಂದಿನಿಂದ (ಗುರುವಾರ) ರಾಜ್ಯಾದ್ಯಂತ 400ಕ್ಕೂ ಹೆಚ್ಚು ಸ್ಕ್ರೀನ್‌ಗಳಲ್ಲಿ ಬಿಡುಗಡೆಯಾಗಿದೆ.

ಇತ್ತೀಚೆಗೆ ರಿಲೀಸಾಗಿದ್ದ ಚಿತ್ರದ ಟ್ರೈಲರ್ ಭಾರೀ ಸಂಚಲನ ಮೂಡಿಸಿದ್ದು, ಕೆಲವೇ ಗಂಟೆಗಳಲ್ಲಿ 30 ಮಿಲಿಯನ್ ಹಿಟ್ಸ್ ದಾಖಲಿಸಿದ್ದು, ವಿದೇಶಗಳಲ್ಲೂ ಸಹ 45 ಚಿತ್ರದ ಅಬ್ಬರ ಜೋರಾಗಿದೆ. ಕೆನಡಾದಲ್ಲಿ ಈಗಾಗಲೇ ಚಿತ್ರದ ಪ್ರೀಮಿಯರ್ ಶೋ ನಡೆದಿದೆ. ಅಲ್ಲಿನ ಪ್ರೀಮಿಯರ್ ಶೋಗಳಿಗೆ ಅಡ್ವಾನ್ಸ್ ಬುಕ್ಕಿಂಗ್ ಆರಂಭವಾದ ಕೆಲವೇ ಗಂಟೆಗಳಲ್ಲಿ ಎಲ್ಲಾ ಟಿಕೆಟ್‌ಗಳು ಸೋಲ್ಡ್‌ಔಟ್ ಆಗಿದ್ದವು. ಇನ್ನು ಕರ್ನಾಟಕದಲ್ಲೂ ಬುಧವಾರವೇ 45 ಚಿತ್ರದ ಪ್ರೀಮಿಯರ್ ಶೋ ನಡೆದಿದೆ, 4 ದಿನಗಳ ಹಿಂದೆಯೇ ಚಿತ್ರದ ಅಡ್ವಾನ್ಸ್ ಬುಕಿಂಗ್ ಆರಂಭವಾಗಿದ್ದು, ಎಲ್ಲಾ ಕಡೆ ಶೇ.90 ರಷ್ಟು ಟಿಕೆಟ್ ಮಾರಾಟವಾಗಿವೆ. ಸಂಗೀತ ನಿರ್ದೇಶಕ ಅರ್ಜುನ್ ಜನ್ಯ ಅವರ ಚೊಚ್ಚಲ ನಿರ್ದೇಶನದ ಚಿತ್ರ ಇದಾಗಿದ್ದು, ನೂರಾರು ಕೋಟಿ ರೂ.ಗಳ ಬಿಗ್ ಬಜೆಟ್‌ನಲ್ಲಿ ನಿರ್ಮಾಣವಾಗಿದೆ.

ಸೂರಜ್ ಪ್ರೊಡಕ್ಷನ್ ಬ್ಯಾನರ್ ಅಡಿಯಲ್ಲಿ ಶ್ರೀಮತಿ ಉಮಾ ರಮೇಶ್ ರೆಡ್ಡಿ ಅವರು ಈ ಚಿತ್ರವನ್ನು ನಿರ್ಮಿಸಿದ್ದಾರೆ. ಈ ವಾರ ಕನ್ನಡ ಭಾಷೆಯಲ್ಲಿ '45' ತೆರೆ ಕಾಣಲಿದ್ದು, ವಾರದ ಬಳಿಕ ತಮಿಳು, ತೆಲುಗು, ಮಲಯಾಳಂ ಹಾಗೂ ಹಿಂದಿ ಭಾಷೆಗಳ ಡಬ್ಬಿಂಗ್ ಅವೃತ್ತಿಗಳನ್ನು ಬಿಡುಗಡೆ ಮಾಡಲಾಗುತ್ತಿದೆ.

ಚಿತ್ರದ ಬಗ್ಗೆ ಮಾತನಾಡಿದ ನಿರ್ಮಾಪಕ ರಮೇಶ್ ರೆಡ್ಡಿ, ನಮ್ಮ ಚಿತ್ರಕ್ಕೆ ನಿರೀಕ್ಷೆಗೂ ಮೀರಿ ಜನರಿಂದ ಸ್ಪಂದನೆ ಬರುತ್ತಿದೆ. ಅರ್ಜುನ್ ಜನ್ಯ ಅವರ ನಿರ್ದೇಶನ, ಶಿವಣ್ಣ ಅವರ ವಿಭಿನ್ನ ಲುಕ್, ಉಪ್ಪಿ ಅವರ ಡೈಲಾಗ್ ಡೆಲಿವರಿ ಹಾಗೂ ರಾಜ್ ಬಿ. ಶೆಟ್ಟಿಯ ಮುಗ್ಧತೆ ಪ್ರೇಕ್ಷಕರ ಮನ ಗೆದ್ದಿದೆ ಎಂದರು.

ನಿರ್ದೇಶಕ ಅರ್ಜುನ್ ಜನ್ಯ ಮಾತನಾಡಿ ಮೂರೂ ಪಾತ್ರಗಳಿಗೂ ಅದರದೇ ಆದ ವಿಶೇಷತೆಯಿದೆ. ಒಂದು ಭಾಗದಲ್ಲಿ ಬಂದು ಹೋಗುವ ಶಿವಣ್ಣ ಅವರ ಲೇಡಿ ಗೆಟಪ್ ತುಂಬಾ ವಿಶೇಷವಾಗಿದೆ ಎಂದಿದ್ದಾರೆ.



ಧರ್ಮ ಕೀರ್ತಿರಾಜ್ 25ನೇ ಚಿತ್ರ

ನಯನ ಮನೋಹರ



ನಟ ಧರ್ಮ ಕೀರ್ತಿರಾಜ್ ಅಭಿನಯದ 'ನಯನ ಮನೋಹರ' ಚಿತ್ರದ ಶೀರ್ಷಿಕೆ ಬಿಡುಗಡೆ ಸಮಾರಂಭ ಇತ್ತೀಚೆಗೆ ನಡೆಯಿತು. ನಟಿ ಪ್ರಿಯಾಂಕ ಉಪೇಂದ್ರ ಮತ್ತು ವಿನೋದ್ ಪ್ರಭಾಕರ್ ಸಮಾರಂಭಕ್ಕೆ ಚಾಲನೆ ನೀಡಿದರು. ಇದು ಧರ್ಮ ಅಭಿನಯದ 25ನೇ ಚಿತ್ರ. ಉದ್ಯಮಿ, ಬಿಲ್ಡರ್ ಅನುಷ್ ಸಿದ್ದಪ್ಪ ಈ ಚಿತ್ರವನ್ನು ನಿರ್ಮಿಸುತ್ತಿದ್ದಾರೆ. ಈ ಚಿತ್ರವನ್ನು ಪುನೀತ್ ಕೆಜಿಆರ್ ನಿರ್ದೇಶನ ಮಾಡುತ್ತಿದ್ದಾರೆ. ಈ ಸಂದರ್ಭದಲ್ಲಿ ಮಾತನಾಡಿದ ಧರ್ಮ ಕೀರ್ತಿರಾಜ್, ಎಲ್ಲರಿಗೂ '25' ಒಂದು ಮೈಲ್‌ಸ್ಟೋನ್, ನಿರ್ದೇಶಕರು ಈ ಕಥೆ ಹೇಳಿದಾಗ ಹೊಸತನವಿದೆ ಅನಿಸಿತು. ತನ್ನ ಪಾತ್ರ ಮೂರು ಶೇಡ್‌ಗಳಲ್ಲಿ ಬರುತ್ತದೆ. ವಾಸುಕಿ ವೈಭವ್ ಅವರ ಸಂಗೀತ ಚಿತ್ರಕ್ಕೆ ಪ್ಲಸ್ ಆಗಿದೆ. ಪ್ರಿಯಾಂಕ ಮೇಡಂ ಜತೆ ಈ ಹಿಂದೆ ನಟಿಸಿದ್ದೆ. ಗೆಳೆಯ ವಿನೋದ್ ಪ್ರಭಾಕರ್ ನನಗೆ ಮೊದಲಿಂದಲೂ ಸಪೋರ್ಟ್ ಮಾಡುತ್ತಾ ಬಂದಿದ್ದಾರೆ. ಚಿತ್ರದಲ್ಲಿ ನನ್ನ ಲುಕ್ ಹೊಸಥರ ಇದೆ. ಅದು ನನಗೆ ಹೆಸರು ತಂದು ಕೊಡುತ್ತದೆ ಎಂಬ ನಂಬಿಕೆಯಿದೆ ಎಂದರು.

ನಿರ್ದೇಶಕ ಪುನೀತ್ ಕೆಜಿಆರ್ ಮಾತನಾಡುತ್ತಾ, ನಮ್ಮ ಸಿನಿಮಾ ಯಾವ ರೀತಿ ಇರುತ್ತದೆ ಎಂದು ಟೀಸರ್ ಅಲ್ಲದೆ ಪೋಸ್ಟರ್‌ನಲ್ಲಿ ಸಣ್ಣ ಸುಳಿವು ನೀಡಿದ್ದೇನೆ. ಧರ್ಮ ಕೀರ್ತಿರಾಜ್ ಅವರಿಗೆ ಈ ಚಿತ್ರ ಗೆಲುವು ಕೊಡುತ್ತದೆ ಎಂದು ಹೇಳಿದರು. ನಿರ್ಮಾಪಕ ಅನುಷ್ ಸಿದ್ದಪ್ಪ ಮಾತನಾಡುತ್ತಾ, ಇದು ನಮ್ಮ ಮೊದಲ ಪ್ರಯತ್ನ. ಚಿತ್ರಕ್ಕೆ ನಿಮ್ಮೆಲ್ಲರ ಆಶೀರ್ವಾದ ಬೇಕೆಂದು ಹೇಳಿದರು.




ಪ್ರಿಯಾಂಕ ಉಪೇಂದ್ರ ಮಾತನಾಡಿ, ನಿರ್ಮಾಪಕರ ಸಿನಿಮಾ ಅಭಿರುಚಿ, ಚಿತ್ರದ ಟೀಸರ್‌ನಲ್ಲಿ ಕಾಣುತ್ತೆ. ಕನ್ನಡ ಇಂಡಸ್ಟ್ರಿ ಯಾವುದರಲ್ಲೂ ಕಮ್ಮಿ ಇಲ್ಲ ಎಂದರು. ನಟ ವಿನೋದ್ ಪ್ರಭಾಕ್ ಮಾತಾಡುತ್ತಾ ಧರ್ಮನನ್ನು ನಾನು ನವಗ್ರಹ ಚಿತ್ರದಿಂದ ನೋಡುತ್ತಾ ಬಂದಿದ್ದೇನೆ. ನೀನು ಬದಲಾಗಬೇಕೆಂದು ಯಾವಾಗಲೂ ಹೇಳುತ್ತಿದ್ದೆ. ಈ ಚಿತ್ರದಿಂದ ಅದಾಗಿದೆ. ಟೈಟಲ್ ಟೀಸರ್ ತುಂಬಾ ಚೆನ್ನಾಗಿ ಬಂದಿದೆ. ಒಳ್ಳೆಯ ಸಿನಿಮಾಗಳನ್ನು ಕೊಟ್ಟರೆ ಕನ್ನಡದ ಜನತೆ ಯಾವತ್ತೂ ಕೈಬಿಡಲ್ಲ ಎಂದರು.

ಸಿನಿಪದಬಂಧ-608



ಉಮ್ಮತ್ತೂರು ಇಂದುಶೇಖರ್
ಮೊ.9880820462



ಹೆಸರು ______
ವಿಳಾಸ ______
______
ದೂರವಾಣಿ ಸಂಖ್ಯೆ ______

ಎಡದಿಂದ ಬಲಕ್ಕೆ

1.	ಪಕ್ಕದ ರಾಜ್ಯದ ಮುಖ್ಯಮಂತ್ರಿಯಾಗಿದ್ದ ಇವರು ಬಂಗಾರದ ಪುತ್ಥಳಿ !	5
3.	ಹೆದರದ ಕ್ರೇಜಿಸ್ಟಾರ್ ರವಿಗೆ ರೇಣುಕಾ ಶರ್ಮಾ ನಿರ್ದೇಶಕ	5
6.	_ _ ದಶಗುಣಂ	2
7.	ಕದದ ಬಳಿ ನಡೆದ ಯುದ್ಧ	3
9.	ಗೃಹದೊಳಗೆ ಬಲಹೀನ ಹೊರಗೆ ಬಲಿಷ್ಠ ಎನ್ನುವರ್ಥದ ಚಿತ್ರವಿದು	10
11.	ಮದನ್ ಮಲ್ಲು ಅತೀ ಬುದ್ಧಿವಂತ	5
15.	ಗೂಡಿನೊಳಗಿರುವ ಪಕ್ಷಿಗೆ ಸುನಿಲ್ ಅಭಿನಯವಿದೆ	6
17.	ಸಂಜನಾ ಹರಿಸಿದ ದೊಡ್ಡ ಹೊಳೆ	4
19.	ಅಜಯ್ ರಾವ್ – ಮಯೂರಿ ಅಭಿನಯಕ್ಕೆ ಶಶಾಂಕ್ ನಿರ್ದೇಶಕ	4
20.	ಕಹಿಯೊಂದಿಗೆ ಸಿಹಿ ಸೇರಿಕೊಂಡಿದೆ	4
21.	ಗೋಲ್ಡನ್ ಸ್ಟಾರ್ ಗಣೇಶ್, ಪೂಜಾಗಾಂಧಿ, ಶರ್ಮಿಳಾ ಮಾಂಡ್ರೆ ಅಭಿನಯದ ಚಿತ್ರ	2

ಮೇಲಿನಿಂದ ಕೆಳಕ್ಕೆ

1.	ವಿಷ್ಣುವರ್ಧನ್ ಹೆತ್ತವರ ಪಾಲಿಗೆ ಬಂಗಾರದ ಕುವರ	6
2.	ರಾಜ್‌ಕುಮಾರ್ ಅಭಿನಯದಿ ಗಿರಿಯಲ್ಲಿ ಕಾಣಿಸಿದ ವ್ಯಾಘ್ರ	5
4.	ಗೆಲುವಿನ ಸರ ಧರಿಸಿರುವ ಕ್ಯಾಬರೆ ತಾರೆ	5
5.	ಶಿವಣ್ಣ ಕೆಚ್ಚೆದೆಯ ವೀರ	4
8.	ಚೆಂಗುಮಣಿ ಪಾತ್ರವಿರುವ ಈ ಚಿತ್ರ ಭಾರತಿಸುತ ಕಾದಂಬರಿ ಆಧರಿಸಿದೆ	8
10.	ಗಂಡು – ಹೆಣ್ಣಿನ ಪೋಷಕರ ನಡುವಿನ ಬಾಜಿ	5
12.	ಪಂಚಮ _ _	2
13.	ಮುರಳಿ – ರೂಪಾದೇವಿಯ ಶ್ವೇತ ವರ್ಣದ ಪುಷ್ಪ	5
14.	ಈ ನಟಿಗೆ ಮತ್ತೇರಿದೆ	3
16.	ಮಾಂಗಲ್ಯಮ್ ತಂತೂ ನಾನೇನಾ ಚಿತ್ರದ ನಾಯಕಿ	4
18.	ರವಿಚಂದ್ರನ್ – ಪ್ರಿಯಾಂಕ ಅಭಿನಯದ ಚಿತ್ರ	2

ಸಿನಿ ಪದಬಂಧ 607ರ ಉತ್ತರ

ಕ	ಲಾ	ವಿ	ದ		ಮ	ನೆ	ದೇ	ವ್ರು		
ನ		ಜ			ಧು		ವ		ಯ	
ಸಿ		ಯ		ಕ್ಷೀ	ರ		ರ	ಮು	ಳಿ	
ನ	ಯ	ನ			ಸಂ		ಮ		ಅ	
ರಾ		ಗ	ರ	ನೆ	ಗ	ರ	ಗ	ರ	ನೆ	
ಣಿ		ರ			ಮ				ಮ	
	ವೇ	ದ	ಪ್ರ	ದ		ಮ		ಬು		
ಸ		ವೀ		ಶಾ		ದ		ಲ್		ಅ
ಮ	ಯೂ	ರ		ವ		ನ್		ಬು	ಗು	ರಿ
ರ		ಪು		ತಾ	ಜ್	ಮ	ಹ	ಲ್		ವು
	ಸೂ	ತ್ರ	ದಾ	ರ		ಲ್ಲು				

ವಿಜೇತರು: ಚಂದ್ರಶೇಖರಾಧ್ಯ,
ಅಗಸನಪುರ, ಮಳವಳ್ಳಿ ತಾ.,

ವಿಳಾಸ: 'ಸಿನಿಬಂಧ' ವಿಭಾಗ, 'ಮೈಸೂರು ಮಿತ್ರ' ದಿನಪತ್ರಿಕೆ, ಬನ್ನಿಮಂಟಪ, ಮೈಸೂರು–570 015

ಸುಖೀಭವ ಚಿತ್ರದ 'ಎಣ್ಣೆ' ಹಾಡಿಗೆ ಶರಣ್ ಧ್ವನಿ





ನಿರ್ದೇಶಕ ಯೋಗರಾಜ್ ಭಟ್ ಸೇರಿದಂತೆ ಅನೇಕ ನಿರ್ದೇಶಕರ ಜತೆ ಕೆಲಸ ಮಾಡಿರುವ ಮೈಸೂರು ಮೂಲದ ಎನ್.ಕಿರಾಜೇಶ್ ನಾಯ್ಡು ಅವರು ಕಥೆ, ಚಿತ್ರಕಥೆ, ಸಂಭಾಷಣೆ ಬರೆದು ಆಕ್ಷನ್ ಕಟ್ ಹೇಳಿರುವ ಚಿತ್ರ 'ಸುಖೀಭವ'. ಕೌಟುಂಬಿಕ ಕಥಾನಕ ಇರುವ ಈ ಚಿತ್ರಕ್ಕೆ ಸಂತೋಷ್‌ಕುಮಾರ್ ಹಾಗೂ ಭಾರ್ಗವಿ ಸಂತೋಷ್ ದಂಪತಿ ಬಂಡವಾಳ ಹೂಡಿ ನಿರ್ಮಾಣ ಮಾಡಿದ್ದಾರೆ ರಾಬರ್ಟ್ ನಿರ್ಮಾಪಕ ಉಮಾಪತಿ ಶ್ರೀನಿವಾಸಗೌಡ ಅವರ ಸ್ನೇಹಿತರೂ ಆದ ಇವರು ಗೆಳೆಯನ ಸ್ಫೂರ್ತಿಯಿಂದ ವೇದ್ ಆರ್ಯನ್ ಫಿಲಂಸ್ ಮೂಲಕ ಈ ಚಿತ್ರವನ್ನು ಅದ್ದೂರಿಯಾಗಿ ನಿರ್ಮಿಸಿದ್ದಾರೆ. ಲಂಡನ್‌ನಲ್ಲಿ ಶಿಕ್ಷಣ ಮುಗಿಸಿ, ನಂತರ ಕನ್ನಡ ಭಾಷೆಯ ಮೇಲಿನ ಅಭಿಮಾನದಿಂದ 'ಸುಖೀಭವ' ಚಿತ್ರವನ್ನು ನಿರ್ಮಾಣ ಮಾಡಿದ್ದಾರೆ. ಸಂತೋಷ್ ಕುಮಾರ್ ಅವರ ತಾತ ಕೂಡ 80ರ ದಶಕದಲ್ಲಿ ಹಲವಾರು ತೆಲುಗು ಚಿತ್ರಗಳನ್ನು ನಿರ್ಮಿಸಿದ್ದರು. 'ಸುಖೀಭವ' ಫ್ಯಾಮಿಲಿ ಸಂಬಂಧಗಳ ಸುತ್ತ ನಡೆಯುವ ಮನಮಿಡಿಯುವ ಕಥಾಹಂದರವನ್ನು ಒಳಗೊಂಡಿದೆ.


ಮೊದಲಿಂದಲೂ ಹೊಸಬರಿಗೆ ಪ್ರೋತ್ಸಾಹ ನೀಡುತ್ತಲೇ ಬಂದಿರುವ ಹಾಸ್ಯನಟ ಶರಣ್ ಕೃಷ್ಣ ಅವರು ಈ ಚಿತ್ರದ 'ಎಣ್ಣೆ' ಹಾಡೊಂದಕ್ಕೆ ದನಿಯಾಗಿದ್ದಾರೆ. 'ಬೇಡ ಮಚ್ಚಾ ಬೇಡ' ಎಂದು ಪ್ರಾರಂಭವಾಗುವ ಈ ಗೀತೆಯನ್ನು ಶರಣ್ ಅವರೇ ಹಾಡಿ, ಚಿತ್ರತಂಡಕ್ಕೆ ಶುಭ ಹಾರೈಸಿದ್ದಾರೆ.

ಬೆಂಗಳೂರಿನ ಮಹೇಂದ್ರ ಈ ಚಿತ್ರದ ನಾಯಕನಾಗಿ ನಟಿಸಿದ್ದು, ಸುಶ್ಮಿತ ನಾಯಕ್ ಹಾಗೂ ವಿಯಾನ್ವಿ ಹೆಗ್ಡೆ ನಾಯಕಿಯರಾಗಿ ಬಣ್ಣ ಹಚ್ಚಿದ್ದಾರೆ, ಉಳಿದಂತೆ ಗೌರವ್ ಶೆಟ್ಟಿ, ಶೋಭರಾಜ್, ರವಿಶಂಕರ್‌ಗೌಡ, ಸುನಿಲ್ ಪುರಾಣಿಕ್, ತುಕಾಲಿ ಸಂತು, ಮೈತ್ರಿ ಜಗ್ಗಿ ಮುಂತಾದವರು ಅಭಿನಯಿಸಿದ್ದಾರೆ. ಬಿ.ಜೆ.ಭರತ್–ಶುಭಂ ಅವರ ಸಂಗೀತ ಸಂಯೋಜನೆ, ಮಂಜುನಾಥ್ ನಾಯಕ್ ಅವರ ಛಾಯಾಗ್ರಹಣ ಈ ಚಿತ್ರಕ್ಕಿದೆ.

'ಪ್ರಣಯ ಪಯಣ' ಸಾಧನೆಗೆ ನ್ಯೂನತೆ ಅಡ್ಡಿಯಾಗಲ್ಲ

ಈ ಹಿಂದೆ ಲೈಫ್ 360 ಎಂಬ ಚಿತ್ರ ನಿರ್ದೇಶಿಸಿದ್ದ ಅರ್ಜುನ್ ಕಿಶೋರ್ ಚಂದ್ರ ಅವರು ಉದ್ಯೋಗ ನಿಮಿತ್ತ ವಿದೇಶದಲ್ಲಿದ್ದರೂ ಮನಸ್ಸು ಮಾತ್ರ ಬಣ್ಣದ ಲೋಕದ ಕಡೆ ಸೆಳೆಯುತ್ತಲೇ ಇತ್ತು. ಆ ತುಡಿತದಲ್ಲಿ ಮೂಡಿ ಬಂದ ಹಾಡೇ 'ಪ್ರಣಯ ಪಯಣ'. ಇತ್ತೀಚೆಗೆ ಈ ಹಾಡಿನ ಬಿಡುಗಡೆಯಾಯಿತು. ಐದು ನಿಮಿಷಗಳ ಅವಧಿಯ ಈ ಹಾಡಿಗೆ ಕಥೆ, ಸಾಹಿತ್ಯ ಬರೆದು ಆಕ್ಷನ್ ಕಟ್ ಹೇಳುವುದರ ಜೊತೆಗೆ ಮುಖ್ಯ ಪಾತ್ರದಲ್ಲೂ ಸಹ ಅರ್ಜುನ್ ಕಾಣಿಸಿಕೊಂಡಿದ್ದಾರೆ. ಇವರ ಪರಿಶ್ರಮಕ್ಕೆ ಆಸರೆಯಾಗಿ ಬೆಂಗಳೂರಿನ ಉದ್ಯಮಿ ರಾಜಶೇಖರ್.ಎಸ್. ಅವರು ಸಾಯಿ ಗಗನ್ ಪ್ರೊಡಕ್ಷನ್ಸ್ ಮೂಲಕ ಬಂಡವಾಳ ಹೂಡಿದ್ದಾರೆ. 'ಪ್ರೀತಿಯಲ್ಲಿ ಪಯಣ' ಎಂಬ ಅಡಿಬರಹ ಈ ಹಾಡಿಗಿದೆ. ಇತ್ತೀಚೆಗೆ ಈ ಹಾಡನ್ನು ವೀಕ್ಷಿಸಿದ ಅಶ್ವಿನಿ ಪುನೀತ್ ರಾಜಕುಮಾರ್ ಅವರು ತಮ್ಮ ಪಿಆರ್‌ಕೆ ಆಡಿಯೋ ಮೂಲಕ ರಿಲೀಸ್ ಮಾಡುತ್ತಿದ್ದಾರೆ.

ಈ ಹಾಡಿನ ಕುರಿತು ನಿರ್ದೇಶಕ ಅರ್ಜುನ್ ಕಿಶೋರ್ ಚಂದ್ರ ಮಾತನಾಡುತ್ತಾ, ಅಂಧರು ವಾಸನೆ, ಸ್ಪರ್ಶವನ್ನು ಯಾವ ರೀತಿ ಅನುಭವಿಸುತ್ತಾರೆ ಎನ್ನುವ ಕುತೂಹಲ ನನಗಿತ್ತು. ಇದನ್ನು ತಿಳಿಸುವ ಸಲುವಾಗಿ ಈ ಹಾಡನ್ನು



ಮಾಡಿದ್ದೇವೆ, ದೈಹಿಕ ನ್ಯೂನತೆ ಇದ್ದರೂ, ಜೀವನದಲ್ಲಿ ಕನಸನ್ನು ಇಟ್ಟುಕೊಂಡವರು, ಚಿಂತಿಸದೆ ಅದರ ಬೆನ್ನುಹತ್ತಿ ಹೇಗೆ ಸಾಧಿಸುತ್ತಾರೆ ಎಂಬುದನ್ನು ಈ ಹಾಡಿನ ಮೂಲಕ ತೋರಿಸಿದ್ದೇವೆ. ಜತೆಗೆ ಐರ್ಲೆಂಡ್ ದೇಶದ ಸುಂದರ ತಾಣಗಳಲ್ಲಿ ದೃಶ್ಯಗಳನ್ನು ಸೆರೆಹಿಡಿದಿದ್ದೇವೆ ಎಂದರು.

ರಂಗಭೂಮಿ ನಟಿ ಎಡೆಲ್ ಆಶ್ಲಿಂಗ್, ಅರ್ಜುನ್ ಈ ಹಾಡಲ್ಲಿ ನಾಯಕ, ನಾಯಕಿಯಾಗಿ ನಟಿಸಿದ್ದಾರೆ. ಅಜೇಶ್.ಎಂ.ಸಿ ಅವರ ಸಂಗೀತ, ಟಲೋ ಕೆನಡಿ ಅವರ ಛಾಯಾಗ್ರಹಣ, ಸಿದ್ದಾರ್ಥ್ ಬೆಲ್ಮಣ್ಣು ಅವರ ಗಾಯನ ಈ ಹಾಡಿಗಿದೆ.

ಸಂವಿಧಾನ ಎದೆಗಪ್ಪಿಕೊಂಡು ಮನುಸ್ಮೃತಿಗೆ ಬೆಂಕಿ

ತಿ.ನರಸೀಪುರದಲ್ಲಿ ದಲಿತ ಸಂಘರ್ಷ ಸಮಿತಿಗಳ ಒಕ್ಕೂಟದಿಂದ ಪ್ರತಿಭಟನೆ



ದಲಿತ ಸಂಘರ್ಷ ಸಮಿತಿಗಳ ಒಕ್ಕೂಟದ ಪದಾಧಿಕಾರಿಗಳು ಸಂವಿಧಾನವನ್ನು ಅಪ್ಪಿಕೊಂಡು ಮನುಸ್ಮೃತಿಯನ್ನು ಸುಡುವ ಚಳುವಳಿ ನಡೆಸಿದರು.

ತಿ.ನರಸೀಪುರ, ಡಿ.25– ದೇಶದಲ್ಲಿನ ಸಾಮಾಜಿಕ ಅಸಮಾನತೆಯನ್ನು ಅನುಭವಿಸಿದ್ದ ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಅವರು ಮನುಸ್ಮೃತಿಯನ್ನು ಸುಟ್ಟ ಐತಿಹಾಸಿಕ ದಿನದ ಹಿನ್ನೆಲೆಯಲ್ಲಿ ಪಟ್ಟಣದ ತಾಲೂಕು ಕಚೇರಿ ಮುಂಭಾಗದ ಉದ್ಯಾನವನದಲ್ಲಿರುವ ಪುತ್ಥಳಿಯ ಬಳಿ ಗುರುವಾರ ದಲಿತ ಸಂಘರ್ಷ ಸಮಿತಿಗಳ ಒಕ್ಕೂಟದ ಪದಾಧಿಕಾರಿಗಳು ಹಾಗೂ ಕಾರ್ಯಕರ್ತರು ಸಂವಿಧಾನವನ್ನು ಎದೆಗಪ್ಪಿಕೊಂಡು ಮನುಸ್ಮೃತಿಯನ್ನು ಸುಟ್ಟರು.

ತಾಲೂಕು ಕಚೇರಿ ಆವರಣದಲ್ಲಿನ ಉದ್ಯಾನವನದಲ್ಲಿರುವ ಅಂಬೇಡ್ಕರ್ ಪ್ರತಿಮೆ ಬಳಿ ಜಮಾವಣೆಗೊಂಡ ದಲಿತ ಸಂಘರ್ಷ ಸಮಿತಿಗಳ ಒಕ್ಕೂಟದ ಮುಖಂಡರು ಹಾಗೂ ಕಾರ್ಯಕರ್ತರು ಆಧುನಿಕ ಭಾರತದಲ್ಲಿಯೂ ಸಾಮಾಜಿಕ ಅಸಮಾನತೆಯನ್ನು ಪ್ರತಿಪಾದಿಸುತ್ತಿರುವ ಮನುಸ್ಮೃತಿಯ ವಿರುದ್ಧ ಧಿಕ್ಕಾರ ಘೋಷಣೆಗಳನ್ನು ಕೂಗುತ್ತಾ ಕೆಲ ಕಾಲ ಪ್ರತಿಭಟನೆ ನಡೆದ ಬಳಿಕ ಸಂವಿಧಾನವನ್ನು ಹಿಡಿದುಕೊಂಡು, ಮನುಸ್ಮೃತಿಯ ಪ್ರತಿಗಳಿಗೆ ಬೆಂಕಿ ಹಚ್ಚಿ ಸುಡುವ ಚಳವಳಿ ನಡೆಸಿದರು.

ಚಳುವಳಿಯ ನೇತೃತ್ವ ವಹಿಸಿದ್ದ ದಲಿತ ಸಂಘರ್ಷ ಸಮಿತಿಯ ಜಿಲ್ಲಾ ಸಂಚಾಲಕ ಆಲಗೂಡು ಶಿವಕುಮಾರ್ ಮಾತನಾಡಿ, ಶ್ರೇಣೀಕೃತ ಜಾತಿ ವ್ಯವಸ್ಥೆಯನ್ನು ಮತ್ತು ಧರ್ಮ ಧರ್ಮಗಳ ನಡುವೆ ಒಡಕನ್ನ ಪ್ರತಿಪಾದಿಸುವ ಮನುಸ್ಮೃತಿಯನ್ನು ಅಂಬೇಡ್ಕರ್ ಅವರು ಸುಟ್ಟದ್ದಕ್ಕೆ 98 ವರ್ಷಗಳ ಇತಿಹಾಸವಿದೆ. ಆಧುನಿಕ ಕಾಲದಲ್ಲಿಯೂ ಮನುವಾದಿಯ ಮನಸ್ಥಿತಿಗಳು ಇಂದಿಗೂ ಜೀವಂತವಾಗಿವೆ. ಜನರನ್ನು ಭಾವನಾತ್ಮಕವಾಗಿ ಯಾಮಾರಿಸುವ ಸಂದಿಗ್ಧ ಕಾಲಘಟ್ಟದಲ್ಲಿ ನಾವಿದ್ದೇವೆ. ಧಾರವಾಡ ಜಿಲ್ಲೆಯ ಇನಾಮ್ ವೀರಾಪುರ ದಲಿತ ಯುವಕನನ್ನು ವಿವಾಹವಾದ ಸವರ್ಣೀಯ ಯುವತಿಯನ್ನು 7 ತಿಂಗಳ ಗರ್ಭಿಣಿ ಎಂಬುದನ್ನು ಮರೆತು ಆಕೆಯ ತಂದೆ ಬರ್ಬರವಾಗಿ ಕೊಂದಿರುವುದು ನಾಗರಿಕ ಸಮಾಜ ತಲೆತಗ್ಗಿಸುವಂತಾಗಿದೆ. ಇದಕ್ಕೆಲ್ಲ ಕಡಿವಾಣ ಹಾಕಬೇಕಿದ್ದ ಪ್ರಭುತ್ವದ ಸರ್ಕಾರಗಳು ಪರೋಕ್ಷವಾಗಿ ಮನುಸ್ಮೃತಿಯ ಕಡೆ ಇವೆ ಎಂದರು.

ಕರ್ನಾಟಕ ದಲಿತ ಸಂಘರ್ಷ ಸಮಿತಿಯ ವಿಭಾಗೀಯ ಸಂಚಾಲಕ ಬನ್ನಹಳ್ಳಿ ಸೋಮಣ್ಣ, ದಸಂಸ ತಾಲೂಕು ಸಂಚಾಲಕ ಸೋಮಶೇಖರ್ ಮಾತನಾಡಿದರು

ಚಳುವಳಿಯಲ್ಲಿ ಜಿಲ್ಲಾ ಸಂಘಟನಾ ಸಂಚಾಲಕ ವಾಟಾಳ್ ನಾಗರಾಜು, ಮುಖಂಡರಾದ ಆಲಗೂಡು ನಾಗರಾಜ ಮೂರ್ತಿ, ಬನ್ನಹಳ್ಳಿಹುಂಡಿ ಉಮೇಶ್, ಬಸವರಾಜು, ಕಿರಗಸೂರು ರಜಿನಿ, ಸೋಮಣ್ಣ, ಕರೋಹಟ್ಟಿ ನಾಗೇಶ, ಮುತ್ತತ್ತಿ ನಾಗರಾಜು, ಉಕ್ಕಲಗೆರೆ ರವಿ, ನವೀನ, ಬಿ.ಎಂ.ಶಿವಕುಮಾರ್, ವಾಟಾಳು ಪ್ರಭು, ಸೋಸಲೇ ಶಿವಣ್ಣ, ಚೌಹಳ್ಳಿ ಮಹದೇವಸ್ವಾಮಿ, ಕೆಂಪನಪುರ ಮಂಟಯ್ಯ, ರಂಗಸಮುದ್ರ ನಂಜುಂಡ, ಪುಟ್ಟರಾಜು, ಮಾವಿನಹಳ್ಳಿ ಲಿಂಗರಾಜು, ಯಾಚೇನಹಳ್ಳಿ ಮಹದೇವ, ತುಂಬಲ ಮಹದೇವಸ್ವಾಮಿ, ತಲಕಾಡು ಆನಂದ್, ಆದಿ ಬೆಟ್ಟಹಳ್ಳಿ ಅರ್ಜುನ್, ತುರುಗನೂರು ಲಕ್ಷ್ಮಣ್, ಸುಜ್ಜಲೂರು ಸಿದ್ದೇಶ್, ಆಲಗೂಡು ಲಕ್ಷ್ಮಿ ಕಾಂತ್, ರವಿ, ವಿಶ್ವ, ಹಸುವಟ್ಟಿ ಮುರಳಿ, ಜಯ ಮಲ್ಲೇಶ್, ಇಂಡವಾಳು ನಾಗರಾಜು, ಕುರುಬೂರು ಸೋಮಶೇಖರ್, ದಾಸೇಗೌಡನ ಕೊಪ್ಪಲು ಬಸವರಾಜು ಹಾಗೂ ಇತರರು ಇದ್ದರು.

ಸರಗೂರಲ್ಲಿ ಮನುಸ್ಮೃತಿ ಪ್ರತಿಗಳ ದಹನ



ಸರಗೂರು ತಾಲೂಕಿನ ಪಟ್ಟಣದ ಪ್ರವಾಸಿ ಮಂದಿರದಲ್ಲಿ ಮನುಸ್ಮೃತಿ ಪ್ರತಿಗಳನ್ನು ಮುಖಂಡರು ಸುಟ್ಟು ಹಾಕಿದರು.

ಸರಗೂರು, ಡಿ.25– ಭಾರತದ ಚರಿತ್ರೆಯಲ್ಲಿ ಡಿ.25 ಬಹು ಮುಖ್ಯವಾದ ದಿನ. ಅಸ್ಪೃಶ್ಯತೆ, ಶ್ರೇಣೀಕೃತ ಜಾತಿ ಪದ್ಧತಿ, ತಾರತಮ್ಯಗಳ ಅಪಮೌಲ್ಯಗಳನ್ನೆ ಮೌಲ್ಯಗಳನ್ನಾಗಿಸಿ ಭಾರತೀಯ ಸುಪ್ತ ಮನಸ್ಸನ್ನು ಆಳುತ್ತಿರುವ 'ಮನುಸ್ಮೃತಿ' ಎಂಬ 'ಭೂತಕಾಲದ ಸಂವಿಧಾನ'ವನ್ನು ಡಾ. ಬಿ.ಆರ್. ಅಂಬೇಡ್ಕರ್ ಸಾರ್ವಜನಿಕವಾಗಿ ಸುಟ್ಟು ಪ್ರತಿಭಟಿಸಿದ ದಿನ ಎಂದು ಆದಿಕರ್ನಾಟಕ ಮಹಾಸಭಾ ಅಧ್ಯಕ್ಷ ಇಟ್ನ ರಾಜಣ್ಣ ತಿಳಿಸಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಬುಧವಾರ ಸಾಂಕೇತಿಕವಾಗಿ ಆದಿ ಕರ್ನಾಟಕ ಮಹಾಸಭಾ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಸರಗೂರಿನ ಪ್ರವಾಸ ಮಂದಿರದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಮನುಸ್ಮೃತಿಯನ್ನು ದಹನ ಮಾಡಿ, ಮಾತನಾಡಿದರು.

ಭಾರತದ ಹಿಂದೂ ಮನಸ್ಸು ಬದಲಾಗಬಹುದು, ಹಿಂದೂ ಧರ್ಮವನ್ನು ಒಳಗಿದ್ದುಕೊಂಡೇ ಸುಧಾರಿಸಬಹುದೇನೋ ಎನ್ನುವ ನಂಬಿಕೆಯಲ್ಲಿ ಮಹಾಡ್, ಚೌಡಾರ್ ಸತ್ಯಾಗ್ರಹಗಳನ್ನು ನಡೆಸಿದರು. ಸಾರ್ವಜನಿಕ ಹಣದಲ್ಲಿ ನಿರ್ಮಾಣವಾಗಿರುವ ಕೆರೆಗಳು, ಬಾವಿಗಳು, ಧರ್ಮ ಶಾಲೆಗಳು ಸೇರಿದಂತೆ ಎಲ್ಲ ಸಾರ್ವಜನಿಕ ಸ್ಥಳಗಳು ಎಲ್ಲರಿಗೂ ಮುಕ್ತವಾಗಿರಬೇಕು ಅನ್ನುವ ಕಾಯ್ದೆ ತಂದಿದ್ದರೂ ಅಸ್ಪೃಶ್ಯರಿಗೆ ಸಾರ್ವಜನಿಕ ಸ್ಥಳಗಳಿಗೆ ಪ್ರವೇಶ ನಿರ್ಬಂಧಿಸಲಾಗಿತ್ತು ಎಂದರು.

ಮನುಸ್ಮೃತಿ ಅಳಿಸಲಿ ಸಂವಿದಾನ ಉಳಿಯಲಿ ಎಂಬ ಚೌಕಟ್ಟಿನಲ್ಲಿ ಬಾಬಾ ಸಾಹೇಬ್ ಅಂಬೇಡ್ಕರ್ ಅವರು ದೇಶದಲ್ಲಿ ವ್ಯಕ್ತಿ ಗೌರವಕ್ಕೆ ಅಶಾಂತಿಯ ಉಂಟುಮಾಡುತ್ತಿದ್ದ ,ದೇಶದಲ್ಲಿ ಅಸಮಾನತೆಯನ್ನು ಸಾರುತ್ತಿದ್ದ ಮನುಸ್ಮೃತಿ ಎಂಬ ಪಿಡುಗನ್ನು ಸುಟ್ಟು ಹಾಕಿದ್ದರು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಪಿಎಲ್‌ಡಿ ಬ್ಯಾಂಕ್ ನಿರ್ದೇಶಕ ಹೂವಿನ ಕೊಳ ಸಿದ್ದರಾಜು, ಮಹಾಸಭಾ ಉಪಾಧ್ಯಕ್ಷರಾದ ಚಿನ್ನಣ್ಣ ಹಳೆಯೂರು, ಬಿಡಗಲು ಶಿವಣ್ಣ, ಮಹಾಸಭಾದ ಖಜಾಂಚಿ ಲಂಕೆ ಶ್ರೀನಿವಾಸ್, ಸಹಾ ಕಾರ್ಯದರ್ಶಿ ಮಸಹಳ್ಳಿ ಸೂರ್ಯ ಕುಮಾರ್, ಲೋಕೇಶ್.ಜೆ, ಶಿವಚೆನ್ನಪ್ಪ ಮುಳ್ಳೂರು, ಶಿವಣ್ಣ ಬಿ, ಲಂಕೆ ಸೋಮಶೇಖರ್, ಬಿಲ್ಲಯ್ಯ, ದೇವಲಾಪುರ ನಾಗೇಂದ್ರ ಕೂಡಗಿ ಗೋವಿಂದರಾಜು, ಅಣ್ಣಯ್ಯಸ್ವಾಮಿ, ಚಕ್ಕೂರು ಕಾಳಸ್ವಾಮಿ, ದೇವರಾಜು, ಕೃಷ್ಣ, ಶಿವಕುಮಾರ್, ಮಟದಕಟ್ಟೆಮಣಿಕಂಠ, ದಯಾನಂದ, ಚಿನ್ನಸ್ವಾಮಿ,ಭೀಮಯ್ಯ, ಮಹೇಶ್ ಇನ್ನಿತರರು ಭಾಗವಹಿಸಿದರು.

ದಿನದರ್ಶಿಕೆ ಬಿಡುಗಡೆ



ತಿ.ನರಸೀಪುರ ಪಟ್ಟಣದ ಪೂಜಿತ್ ಮೆಡಿಕಲ್ ವತಿಯಿಂದ ಹೊರತಂದಿರುವ ದಿನದರ್ಶಿಕೆಯನ್ನು ವಾಟಾಳು ಮಠದ ಶ್ರೀ ಸಿದ್ದಲಿಂಗಶಿವಾಚಾರ್ಯ ಸ್ವಾಮಿ ಬಿಡುಗಡೆ ಮಾಡಿದರು. ಪೂಜಿತ್ ಮೆಡಿಕಲ್ ಕುಮಾರ್, ಅಖಿಲ ಭಾರತ ವೀರಶೈವ ಮಹಾಸಭಾ ತಾಲೂಕು ಅಧ್ಯಕ್ಷ ಎಸ್ ಎಂ ಆರ್ ಪ್ರಕಾಶ್, ಡಾ. ಮಲ್ಲಿಕಾರ್ಜುನ ಸ್ವಾಮಿ, ಎಸ್. ಕೆ.ಕಿರಣ್, ಸತ್ಯಪ್ಪ, ತೋಂಟೇಶ್, ಕಿರಗಸೂರು ಮಹದೇವಸ್ವಾಮಿ, ಆಡಿಟರ್ ಮಂಜುನಾಥ್, ಕುರುಬೂರು ಶಿವು, ಅಕ್ಕಿ ನಾಗಪ್ಪ, ರಾಜಶೇಖರ್, ಹಿರಿಯೂರು ಡೇರಿ ಅಧ್ಯಕ್ಷ ಬಸವರಾಜು, ಎಲ್‌ಐಸಿ ಪ್ರಕಾಶ್ ಮತ್ತಿತರರಿದ್ದರು.

ಬದನವಾಳು ಗ್ರಾಪಂ ಸದಸ್ಯರಿಗೆ ಸನ್ಮಾನ



ನಂಜನಗೂಡು ತಾಲೂಕಿನ ಬದನವಾಳು ಗ್ರಾಮದ ಗ್ರಾಮ ಪಂಚಾಯಿತಿ ಆಡಳಿತ ಮಂಡಳಿ ಯಶಸ್ವಿಯಾಗಿ 5 ವರ್ಷ ಪೂರೈಸಿದ ಹಿನ್ನೆಲೆಯಲ್ಲಿ ಸದಸ್ಯರನ್ನು ಸನ್ಮಾನಿಸಿ ಗೌರವಿಸಲಾಯಿತು. ಚಿತ್ರದಲ್ಲಿ ಗ್ರಾಮ ಪಂಚಾಯಿತಿ ಅಧ್ಯಕ್ಷ ದೊರೆಸ್ವಾಮಿ, ಸದಸ್ಯರಾದ ಆರ್. ಶಿವಸ್ವಾಮಿ, ಶೋಭಾ, ಸುರೇಶ, ಸುಶೀಲ, ಶೃತಿಅಶೋಕ್, ಬೇಬಿಜಾನ್, ಮಂಜುನಾಥ, ಮಣಿ, ಅವಿನಾಶ್, ಮಹದೇವು, ಗುರುಸಿದ್ಧಮ್ಮ, ಸರೋಜಮ್ಮ, ಸರ್ವೇಶ್, ಪ್ರತಿಮಾ, ಗ್ರಾಪಂ ಪಿಡಿಒ ಕರಿಯಪ್ಪ, ಕಾರ್ಯದರ್ಶಿ ಸಿದ್ದು ನಾಯಕ್ ಸೇರಿದಂತೆ ಗ್ರಾಮ ಪಂಚಾಯಿತಿ ಸಿಬ್ಬಂದಿಗಳನ್ನು ಕಾಣಬಹುದು.

ಮನುಸ್ಮೃತಿ ಸುಟ್ಟು ಅಂಬೇಡ್ಕರ್ ಹೋರಾಟ ಬೆಂಬಲಿಸೋಣ



ಹೆಚ್.ಡಿ.ಕೋಟೆ ಆಡಳಿತ ಭವನದ ಮುಂಭಾಗದಲ್ಲಿ ಮನುಸ್ಮೃತಿಯನ್ನು ಸುಟ್ಟು ಹಾಕುವ ಮೂಲಕ ಪ್ರತಿಭಟನೆ ನಡೆಸಲಾಯಿತು.

ಹೆಚ್.ಡಿ.ಕೋಟೆ, ಡಿ.25– ಸಂವಿಧಾನ ಮತ್ತು ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ರಕ್ಷಣೆ ಮಾಡುವ ಸಲುವಾಗಿ ಬಾಬಾ ಸಾಹೇಬರು ಮನುಸ್ಮೃತಿಯನ್ನು ದಹಿಸಿದ ದಿನವಾಗಿರುವುದರಿಂದ ಪ್ರತಿಯೊಬ್ಬರು ಮನುಸ್ಮೃತಿಯನ್ನು ಸುಟ್ಟು ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಹೋರಾಟವನ್ನು ಮುಂದುವರಿಸಬೇಕಾಗಿದೆ ಎಂದು ದಲಿತ ಸಂಘರ್ಷ ಸಮಿತಿಯ ಜಿಲ್ಲಾ ಸಂಚಾಲಕರಾದ ಬೆಟ್ಟಯ್ಯ ಕೋಟೆ ತಿಳಿಸಿದ್ದಾರೆ.

ಪಟ್ಟಣದ ಆಡಳಿತ ಭವನದ ಮುಂಭಾಗದಲ್ಲಿ ದಸಂಸ ಮತ್ತು ವಿವಿಧ ಪ್ರಗತಿಪರ ಸಂಘಟನೆ ಅಮು ಮುಖಂಡುಗಳು ಮನುಸ್ಮೃತಿಯನ್ನು ಸುಟ್ಟು ಹಾಕುವ ಮೂಲಕ ಪ್ರತಿಭಟನೆಯಲ್ಲಿ ಮಾತಾಡಿದರು.

ಶ್ರೇಣೀಕೃತ ಜಾತಿ ವ್ಯವಸ್ಥೆಗೆ ಮುನ್ನುಡಿ ಬರೆದು ಭಾರತವನ್ನು ಅಂಧಕಾರಕ್ಕೆ ತಳ್ಳಿದ್ದ ಮನುಸ್ಮೃತಿಯನ್ನು ಬಾಬಾ ಸಾಹೇಬ್ ಡಾ. ಬಿ.ಆರ್.ಅಂಬೇಡ್ಕರ್ ಅವರು ಸುಟ್ಟು ಹಾಕಿ ಇಂದಿಗೆ 98 ವರ್ಷಗಳಾದವು. ಸ್ವಾತಂತ್ರ – ಭಾರತಕ್ಕೆ ಸಂವಿಧಾನವನ್ನು ರೂಪಿಸುವ ಸಂದರ್ಭದಲ್ಲಿ ಸಮ ಸಮಾಜದ ನಿರ್ಮಾಣದ ಕನಸು ಹೊತ್ತು, ಸಮಾನತೆ, ಸಹೋದರತೆ, ಭಾತೃತ್ವದ ಆಶಯದೊಂದಿಗೆ ಸಂವಿಧಾನವನ್ನು ರೂಪಿಸಿಕೊಂಡೆವು. ಈ ಸಂವಿಧಾನ ರಚನೆಗೆ ಬಾಬಾ ಸಾಹೇಬರ ಕೊಡುಗೆ ಅಪಾರವಾಗಿದೆ. ಆದರೆ ಈಗಲೂ ಪರಿಸ್ಥಿತಿ ಬದಲಾಗಿಲ್ಲ ಆರ್‌ಎಸ್‌ಎಸ್ ಮತ್ತು ಅದರ ರಾಜಕೀಯ ಪಕ್ಷವಾದ ಬಿಜೆಪಿಯು ಅಂದಿನಿಂದ ಇಂದಿನವರೆಗೂ ಆಂತರಿಕವಾಗಿಯೂ ಬಹಿರಂಗವಾಗಿಯೂ ಡಾ.ಅಂಬೇಡ್ಕರ್ ಅವರ ಮೇಲೆ, ಸಂವಿಧಾನದ ಮೇಲೆ ಅಸಹಿಷ್ಣುತೆಯನ್ನು ಹೊರಹಾಕುತ್ತಲೇ ಬಂದಿದೆ ಎಂದರು.

ಮನು ಪ್ರಣೀತ ಭಾರತವನ್ನು ಬದಿಗೆ ಸರಿಸಿ, ಸಮಾನತೆ ಸಾರಿದ ಬೌದ್ಧತತ್ವ ಪ್ರಣೀತ, ಪ್ರಜಾತಾಂತ್ರಿಕ ಸಂವಿಧಾನವನ್ನು ನಾವು ರೂಪಿಸಿಕೊಂಡಿದ್ದನ್ನು ಸಹಿಸಿಕೊಳ್ಳದ ಶಕ್ತಿಗಳು ಇಂದು ಮತ್ತಷ್ಟು ಬಲಗೊಳ್ಳುತ್ತಿವೆ. ಬಾಬಾ ಸಾಹೇಬ್ ಅಂಬೇಡ್ಕರ್, ಸಂವಿಧಾನ ಮತ್ತು ಪ್ರಜಾಪ್ರಭುತ್ವ ವ್ಯವಸ್ಥೆಯ ಮೇಲೆ ಯುದ್ಧವನ್ನೇ ಸಾರಿವೆ. ಹಾಗಾಗಿ *ಸಂವಿಧಾನ ಮತ್ತು ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ರಕ್ಷಣೆ ಮಾಡಿಕೊಳ್ಳುವ ಕಾರಣಕ್ಕಾಗಿ ಬಾಬಾ ಸಾಹೇಬರು ಮನುಸ್ಮೃತಿಯನ್ನು ದಹಿಸಿದ ದಿನವಾದ ಡಿಸೆಂಬರ್ 25 ರಂದು ಸಾಂಕೇತಿಕವಾಗಿ ನಾವೂ ಕೂಡ ಮನುಸ್ಮೃತಿಯನ್ನು ಸುಟ್ಟುಹಾಕುವ ಮೂಲಕ ಬಾಬಾ ಸಾಹೇಬ್ ಅಂಬೇಡ್ಕರ್ ರವರ ಹೋರಾಟವನ್ನು ನಾವೆಲ್ಲರೂ ಮುಂದುವರಿಸೋಣ ಎಂದರು.

ಇದೇ ಸಂದರ್ಭದಲ್ಲಿ ದಸಂಸ ತಾಲೂಕು ಸಂಚಾಲಕರಾದ ಮಹೇಶ್ ಮಲಾರ, ರಾಜಶೇಖರ್, ಶಿರಮಳ್ಳಿ ಕೃಷ್ಣ ತೊರಳ್ಳಿ ಗೋಪಾಲ, ಮಹೇಶ, ಸುರೇಶ, ದಾಸಯ್ಯ, ಸಿದ್ದರಾಜು, ಅಂಕಯ್ಯ, ಹೆಗ್ಗನೂರು ನಿಂಗರಾಜು, ಹೈರಿಗೆ ಶಿವರಾಜು, ಹಿಟ್ನಾ ರಾಜಣ್ಣ, ಶಿವಶಂಕರ್, ಕಾಳಸ್ವಾಮಿ ಉಯಂಬಳ್ಳಿ ಜೀವಿಕ ಬಸವರಾಜು ಉಮೇಶ ಪುಟ್ಟಸ್ವಾಮಿ ಮಲ್ಲೇಶ್, ರಮೇಶ, ಸುರೇಶ ಇತರರು ಉಪಸ್ಥಿತರಿದ್ದರು.

ರಾಜ್ಯ ರೈತ ಸಂಘಕ್ಕೆ ನೇಮಕ

ಹುಣಸೂರು: ಕರ್ನಾಟಕ ರಾಜ್ಯ ರೈತ ಸಂಘದ ಮೈಸೂರು ಜಿಲ್ಲಾ ಸಂಘದ ಜಿಲ್ಲಾ ಉಪಾಧ್ಯಕ್ಷರಾಗಿ ಹುಣಸೂರು ತಾಲೂಕಿನ ಗುರುಪುರದ ಗ್ರಾಮದ ಆಲಿಜಾನ್, ಹಾಗೂ ಸಂಘದ ಜಿಲ್ಲಾ ಖಜಾಂಚಿಯಾಗಿ ಶ್ಯಾನುಭೋಗನಹಳ್ಳಿ ಗ್ರಾಮದ ಈಶ್ವರ ಎಸ್ ರವರನ್ನು ಹಾಗೂ ಕಾಳೇಗೌಡನಕೊಪ್ಪಲಿನ ಬಸವರಾಜಗೌಡ ಅವರನ್ನು ಜಿಲ್ಲಾ ಪದಾಧಿಕಾರಿಯಾಗಿ ನೇಮಕ ಮಾಡಲಾಗಿದೆ ಎಂದು ರೈತ ಸಂಘದ ಜಿಲ್ಲಾಧ್ಯಕ್ಷರಾದ ಹೊಸೂರು ಕುಮಾರ್ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರೈತರ ಪರಿಶ್ರಮ, ಕೊಡುಗೆಗಳನ್ನು ಗೌರವಿಸುವ ಸಲುವಾಗಿ ರೈತ ದಿನಾಚರಣೆ



ರೈತ ದಿನಾಚರಣೆಯನ್ನು ಗಣ್ಯರು ಉದ್ಘಾಟಿಸುತ್ತಿರುವುದು.

ನಂಜನಗೂಡು, ಡಿ.25– ರೈತರು ದೇಶದ ಬೆನ್ನೆಲುಬು, ರಾಷ್ಟ್ರದ ಅಭಿವೃದ್ಧಿಗೆ ರೈತರ ಕೊಡುಗೆ ಅಪಾರವಾಗಿದ್ದು, ರೈತರ ಪರಿಶ್ರಮ ಮತ್ತು ಕೊಡುಗೆಗಳನ್ನು ಗೌರವಿಸುವಸಲುವಾಗಿ ರೈತ ದಿನಾಚರಣೆಯನ್ನು ಆಚರಣೆ ನಡೆಸಲಾಗುತ್ತದೆ ಎಂದು ಸಹಾಯಕ ಕೃಷಿ ನಿರ್ದೇಶಕ ಎಸ್.ಕೆ.ರವಿ ಹೇಳಿದರು.

ನಗರದ ಬೈಪಾಸ್ ರಸ್ತೆಯಲ್ಲಿರುವ ಕೃಷಿ ಇಲಾಖೆಯ ಆವರಣದಲ್ಲಿ ನಡೆದ ರೈತ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಭಾರತ ದೇಶದ ಐದನೇ ಪ್ರಧಾನಿ ಚೌದರಿ ಚರಣ್ ಸಿಂಗ್ ರವರ ಸ್ಮರಣಾರ್ಥವಾಗಿ ಡಿ.23ರ ದಿನವನ್ನು ರಾಷ್ಟ್ರೀಯ ರೈತ ದಿನಾಚರಣೆಯನ್ನಾಗಿ ಆಚರಣೆ ನಡೆಸಿ ರೈತರಿಗೆ ಗೌರವ ಸಲ್ಲಿಸಲಾಗುತ್ತಿದೆ, ಇತ್ತೀಚಿನ ದಿನಗಳಲ್ಲಿ ಯುವಕರು ಕೃಷಿ ಲಾಭದಾಯಕವಲ್ಲ ಎಂದು ಕೃಷಿಯಿಂದ ವಿಮುಖರಾಗುತ್ತಿದ್ದಾರೆ, ರೈತರು ಕೃಷಿಯಲ್ಲಿ ಆಧುನಿಕ ತಂತ್ರಜ್ಞಾನವನ್ನು ಅಳವಡಿಸಿಕೊಂಡು ಕೃಷಿಯಲ್ಲಿ ತೊಡಗಿದರೆ ಖರ್ಚು ಕಡಿಮೆ ಮಾಡಿಕೊಳ್ಳುವ ಮೂಲಕ ಕೃಷಿಯಲ್ಲಿ ಲಾಭಗಳಿಸಲು ಸಾಧ್ಯ, ರೈತರು ಕೃಷಿ ಪದ್ಧತಿಯಲ್ಲಿ ಆಧುನಿಕ ತಂತ್ರಜ್ಞಾನವನ್ನು ಅಳವಡಿಕೆ ಮಾಡಿಕೊಳ್ಳುವುದರಿಂದ ಕೃಷಿ ಕಾರ್ಮಿಕರ ಕೊರತೆ ನೀಗುವ ಜೊತೆಗೆ ವೆಚ್ಚವನ್ನು ಕಡಿಮೆ ಮಾಡಿ ಇಳುವರಿಯನ್ನು ಹೆಚ್ಚಿಸಿಕೊಳ್ಳಬಹುದು ಎಂದರು.

ಕೃಷಿ ಉದ್ಯಮಿ ಮೋಹನ್ ಕುಮಾರ್ ಮಾತನಾಡಿ ರೈತರು ತಮ್ಮ ಬೆಳೆಗಳನ್ನು ಸಂಸ್ಕರಣೆ ಮಾಡಿ ಉದ್ಯಮಿಗಳಾಗಲು ಅವಕಾಶವಿದೆ, ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ರೈತರ ಉದ್ಯಮಿಗಳಾಗಲು ಸಾಲ ಸೌಲಭ್ಯ ಸೇರಿದಂತೆ ತರಬೇತಿ ಕಾರ್ಯಕ್ರಮಗಳನ್ನು ನೀಡಿ ನೆರವಾಗುತ್ತಿವೆ. ಈ ಸದಾವಕಾಶಗಳನ್ನು ಬಳಸಿಕೊಂಡು ರೈತರು ತಮ್ಮ ಬೆಳೆಗಳನ್ನು ಸಂಸ್ಕರಣೆ ಮಾಡಿ ಮಾರುಕಟ್ಟೆ ನಿರ್ಮಾಣ ಮಾಡುವ ಮೂಲಕ ಕೃಷಿಕರು ಸಹ ಉದ್ಯಮಿಗಳಾಗಬಹುದು ಎಂದರು.

ಸಮಾರಂಭದಲ್ಲಿ ಸುತ್ತೂರಿನ ಕೆವಿಕೆ ಕೃಷಿ ವಿಜ್ಞಾನಿ ಡಾ.ದಿವ್ಯಾ ಮಾತನಾಡಿ ರೈತರು ಕೃಷಿಯಲ್ಲಿ ಆಧುನಿಕ ತಂತ್ರಜ್ಞಾನವನ್ನು ಅಳವಡಿಕೆ ಮಾಡಿಕೊಳ್ಳುವ ಬಗ್ಗೆ ರೈತರಿಗೆ ಮಾಹಿತಿ ನೀಡಿದರು. ಸಮಾರಂಭದಲ್ಲಿ ಕೃಷಿ ಪದ್ಧತಿಯಲ್ಲಿ ಸಾಧನೆಗೈದು ಪ್ರಶಸ್ತಿ ಪಡೆದ ಸಾಧಕ ರೈತರನ್ನು ಸನ್ಮಾನಿಸಿ ಗೌರವಿಸಲಾಯಿತು.

ಪಿಎಲ್ ಡಿ ಬ್ಯಾಂಕ್ ಅಧ್ಯಕ್ಷ ಚೆನ್ನಪ್ಪ, ದೊರೆಸ್ವಾಮಿ ನಾಯಕ, ರಮೇಶ್, ರಘುವೀರ್, ಮಾಧುರಿ, ಸಿಬ್ಬಂದಿ ಇದ್ದರು.

ಶಾಲೆಗಳಲ್ಲಿ ಶಿಸ್ತು–ಸಂಯಮ ಕಲಿಸಬೇಕು



ಶಾಲಾ ವಾರ್ಷಿಕೋತ್ಸವವನ್ನು ಪೊಲೀಸ್ ಇನ್ಸ್‌ಪೆಕ್ಟರ್ ಧನಂಜಯ ಉದ್ಘಾಟಿಸಿದರು. ಸಿದ್ದಲಿಂಗ ಶಿವಾಚಾರ್ಯ ಸ್ವಾಮೀಜಿ, ಫಾದರ್ ಬೆನ್ನಿ ಥಾಮಸ್, ರೆನಿನ್ ಸೆಬಾಸ್ಟಿಯನ್, ವಿನೀತ್ ಜೋಶಮನ್ ಇತರರು ಇದ್ದರು.

ತಿ.ನರಸೀಪುರ: ಮಕ್ಕಳನ್ನು ನಾಡಿನ ಉತ್ತಮ ಪ್ರಜೆಗಳನ್ನಾಗಿ ರೂಪಿಸಲು ಶಿಸ್ತು – ಸಂಯಮವನ್ನು ರೂಡಿಸಿಕೊಳ್ಳಬೇಕಿರುವುದರಿಂದ ಶಾಲೆಗಳಲ್ಲಿ ಮಕ್ಕಳಿಗೆ ಶಿಕ್ಷಕರು ಶಿಸ್ತು ಮತ್ತು ಸಂಯಮವನ್ನು ಕಲಿಸಬೇಕು ಎಂದು ವಾಟಾಳು ಮಠದ ಸಿದ್ದಲಿಂಗ ಶಿವಾಚಾರ್ಯ ಸ್ವಾಮೀಜಿ ಕರೆ ನೀಡಿದರು.

ಪಟ್ಟಣದ ಹೊರವಲಯದ ರಾಷ್ಟ್ರೀಯ ಹೆದ್ದಾರಿ ಕೊಳ್ಳೇಗಾಲ–ಚಾಮರಾಜನಗರ ಮುಖ್ಯ ರಸ್ತೆಯಲ್ಲಿರುವ ಸೇಂಟ್ ನೋಬರ್ಟ್ ಶಾಲೆಯಲ್ಲಿ ಆಯೋಜಿಸಿದ್ದ "ನೋರ್ಬಿ ಗಾಲಾ ಡೇ 2025" ಶಾಲಾ ವಾರ್ಷಿಕೋತ್ಸವ ಸಮಾರಂಭದಲ್ಲಿ ಮಾತನಾಡಿದ ಅವರು ಪ್ರಶಾಂತವಾದ ವಾತಾವರಣದಲ್ಲಿ ತಲೆಯೆತ್ತಿರುವ ಈ ಶಾಲೆ ಶಿಸ್ತು ಮತ್ತು ಸಂಯಮಕ್ಕೆ ಆದ್ಯತೆ ನೀಡಿರುವುದರಿಂದ ಗ್ರಾಮೀಣ ಪ್ರದೇಶಗಳ ಮಕ್ಕಳನ್ನು ನಗರ ಪ್ರದೇಶದ ಮಕ್ಕಳಂತೆ ಶಿಸ್ತು ಬದ್ಧವಾದ ಶಿಕ್ಷಣವನ್ನು ನೀಡಲು ಹೆಸರುವಾಸಿಯಾಗಿದೆ ಎಂದರು.

ಕಾರ್ಯಕ್ರಮವನ್ನು ಉದ್ಘಾಟಿಸಿದ ಪೊಲೀಸ್ ಇನ್ಸ್ಪೆಕ್ಟರ್ ಧನಂಜಯ ಮಾತನಾಡಿ, ಹಳ್ಳಿಗಾಡಿನ ಮಕ್ಕಳಿಗೆ ಗುಣಮಟ್ಟದ ಶಿಕ್ಷಣವನ್ನು ಶಿಸ್ತಿನೊಂದಿಗೆ ನೀಡಲು ಗ್ರಾಮೀಣ ಪ್ರದೇಶದಲ್ಲಿಯೂ ಸೇಂಟ್ ನೋಬರ್ಟ್ ನಂತಹ ಶಾಲೆ ಆರಂಭವಾಗಿದೆ. ಕಾರ್ಯಕ್ರಮದ ಆಯೋಜನೆ, ನಿರ್ವಹಣೆಯೇ ಇಲ್ಲಿನ ಶಿಕ್ಷಣ ಮತ್ತು ಶಿಸ್ತನ್ನು ಪ್ರತಿಬಿಂಬಿಸುತ್ತದೆ. ಇಂದಿನ ಜಗತ್ತು ಸ್ಪರ್ಧಾತ್ಮಕ ಯುಗವಾಗಿರುವುದರಿಂದ ಜ್ಞಾನಾರ್ಜನೆಯನ್ನ ವೃದ್ಧಿಸಿಕೊಳ್ಳಬೇಕು ಎಂದರು.

ದಿನವಿಡೀ ನಡೆದ ಶಾಲಾ ವಾರ್ಷಿಕೋತ್ಸವ ಸಂಭ್ರಮದಿಂದ ಕೂಡಿತ್ತು. ಬೆಳಗ್ಗೆ ಮತ್ತು ಸಂಜೆ ಎರಡು ಹಂತದಲ್ಲಿ ವೇದಿಕೆ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ವಿವಿಧ ಕ್ರೀಡಾಕೂಟ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ಹಾಗೂ ಉತ್ತಮವಾಗಿ ಕಾರ್ಯನಿರ್ವಹಿಸಿದ ಶಿಕ್ಷಕರಿಗೆ ಉತ್ತಮ ಶಿಕ್ಷಕ ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು. ಶಾಲೆಯ ವಿದ್ಯಾರ್ಥಿಗಳು ಮನೋರಂಜನ ಕಾರ್ಯಕ್ರಮ ನಡೆಸಿಕೊಟ್ಟರು.

ಶಾಲಾ ವ್ಯವಸ್ಥಾಪಕರು ಫಾದರ್ ಬೆನ್ನಿ ಥಾಮಸ್ , ಹಣಕಾಸಿನ ವ್ಯವಸ್ಥಾಪಕರು ಫಾದರ್ ರೆನಿನ್ ಸೆಬಾಸ್ಟಿಯನ್, ಫಾದರ್ ವಿನೀತ್ ಜೋಶಮನ್ ಮತ್ತು ಪ್ರಾಂಶುಪಾಲರು ಸಿಸ್ಟರ್ ಸುಮಿ ರೋಸಾ, ಕ್ಷೇತ್ರ ಶಿಕ್ಷಣಾಧಿಕಾರಿ ಎಸ್.ಸಿ.ಶಿವಮೂರ್ತಿ, ಮಾದಾಪುರ ಗ್ರಾಮ ಪಂಚಾಯಿತಿ ಅಧ್ಯಕ್ಷ ಸೋಮಣ್ಣ, ಪಿಡಿಒ ಸ್ವಾಮಿರಾವ್, ಬಿಆರ್‌ಸಿಎನ್ ನಾಗೇಶ್, ಸಿಆರ್‌ಪಿ ಭಾಸ್ಕರ್, ಎಂಎಸ್‌ಎಂಐ ಕಾನ್ವೆಂಟ್ ಮುಖ್ಯಸ್ಥೆ ಸೆಲಿನ್ ರೋಜ್, ಸದಸ್ಯ ಥಾಮಸ್ ಜಾರ್ಜ್, ಲಿಟಲ್ ಫ್ಲವರ್ ಕಾನ್ವೆಂಟ್ ಮುಖ್ಯ ಶಿಕ್ಷಕಿ ಐರಿಸ್ ಸೇರಿದಂತೆ ಶಾಲೆಯ ಶಿಕ್ಷಕ ಮತ್ತು ಶಿಕ್ಷಕೇತರ ವೃಂದ, ವಿದ್ಯಾರ್ಥಿಗಳು ಹಾಗೂ ಪೋಷಕರು ಹಾಜರಿದ್ದರು.

ಶ್ರೀ ತ್ರಿಪುರ ಸುಂದರಿ ಅಮ್ಮ ಜಾತ್ರಾ ಮಹೋತ್ಸವಕ್ಕೆ ಹಸ್ಥನ ಅಂಕುರಾರ್ಪಣೆಯೊಂದಿಗೆ ಚಾಲನೆ

ಮೂಗೂರು: ಬರುವ ಜನವರಿಯಲ್ಲಿ ಆರಂಭಗೊಳ್ಳಲಿರುವ ಮೂಗೂರು ಶ್ರೀ ತ್ರಿಪುರ ಸುಂದರಿ ಅಮ್ಮನವರ ಜಾತ್ರಾ ಮಹೋತ್ಸವಕ್ಕೆ ಹಸ್ಥನ ಅಂಕುರಾರ್ಪಣ ಮೂಲಕ ಗ್ರಾಮಸ್ಥರ ಸಮ್ಮುಖದಲ್ಲಿ ವಿದ್ಯುಕ್ತವಾಗಿ ಬುಧವಾರ ಸಂಜೆ ಚಾಲನೆ ನೀಡಲಾಯಿತು.

ಸಮೀಪದ ಹೊಸಹಳ್ಳಿ ಗ್ರಾಮದ ಶ್ರೀ ತ್ರಿಪುರ ಸುಂದರಿ ಅಮ್ಮನವರ ಚಿಗುರು ಕಡಿಯುವ ಕ್ಷೇತ್ರದಲ್ಲಿ ಮೊದಲಿಗೆ ಅಮ್ಮ ನವರಿಗೆ ಅಭಿಷೇಕ ನೆರವೇರಿಸಿ, ಕಂಕಣಧಾರಿ ಅರ್ಚಕರು ವಿಶೇಷ ಪೂಜೆ ಸಲ್ಲಿಸಿದರು. ನಂತರ ಮೂಗೂರು ಗ್ರಾಮಕ್ಕೆ ಆಗಮಿಸುತ್ತಿದ್ದಂತೆ ಊರಿನ ಗೌಡರು ಸೇರಿದಂತೆ ಎಲ್ಲಾ ಸಮುದಾಯದ ಮುಖಂಡರು ಛತ್ರಿ ಚಾಮರ, ಮಂಗಳವಾದ್ಯದೊಂದಿಗೆ ಆಗಮಿಸಿ ಅಮ್ಮ ನವರ ಹಸ್ಥನ ಅಂಕುರಾರ್ಪಣಗೆ ಪೂಜೆ ಸಲ್ಲಿಸುವ ಮೂಲಕ ಅದ್ದೂರಿ ಸ್ವಾಗತ ಕೋರಿದರು. ಗ್ರಾಮದ ಮುಖ್ಯ ರಸ್ತೆಯ ಮೂಲಕ ದೇವಾಲಯಕ್ಕೆ ಹೋಗುವ ಮಾರ್ಗದ ಉದ್ದಕ್ಕೂ ತಳಿರು ತೋರಣ ಬಣ್ಣ ಬಣ್ಣದ ರಂಗೋಲಿಯ ಚಿತ್ತಾರದಿಂದ ಸಿಂಗರಿಸಲಾಗಿತ್ತು. ಇದೇ ವೇಳೆ ಸೇವಾರ್ಥದಾರರು ಪ್ರತಿ ವರ್ಷದಂತೆ ಈ ಬಾರಿಯೂ ಪಟಾಕಿ ಸಿಡಿಸಿ ಸಂಭ್ರಮಿಸಿದರು.ದೇಗುಲದ ಬಳಿ ಅರ್ಚಕರ ಮನೆತನದವರು ಕಂಕಣಧಾರಿ ಅರ್ಚಕರಿಗೆ ಪಾದಪೂಜೆ ನೆರವೇರಿಸಿದರು. ಉಯ್ಯಾಲೆ ಮಂಟಪವನ್ನು ಪ್ರದಕ್ಷಿಣೆ ಹಾಕಿದ ಬಳಿಕ ದೇವಾಲಯದ ಬಳಿ ಅಪಾರ ಜನಸ್ತೋಮವೇ ನೆರೆದಿದ್ದು



ಭಕ್ತರು ಜೈಕಾರ ಹಾಕುತ್ತಿದ್ದಂತೆ ದೇಗುಲದ ಒಳ ನಡೆದರು.

ವಿದ್ಯುತ್ ತಂತಿ ತುಳಿದು ಯುವಕ ಸಾವು



ನಂಜನಗೂಡು: ವಿದ್ಯುತ್ ಶಾಕ್‌ನಿಂದ ಯುವಕನೊಬ್ಬ ಸಾವನ್ನಪ್ಪಿರುವ ಘಟನೆ ತಾಲೂಕಿನ ಹೆಮ್ಮರಗಾಲ ಗ್ರಾಮದಲ್ಲಿ ಜರುಗಿದೆ.

ಹೆಮ್ಮರಗಾಲ ಗ್ರಾಮದ ಬಿಜೆಪಿ ಮುಖಂಡ ಸೋಮಣ್ಣ ಅವರ ಪುತ್ರ ಮಹೇಶ್ (28) ಮೃತ ದುರ್ದೈವಿ. ಮೃತ ಮಹೇಶ್ ತಮ್ಮ ಜಮೀನಿನ ಮನೆಯಲ್ಲಿ ಕಾರು ತೊಳೆಯುತ್ತಿದ್ದ ವೇಳೆ ವಿದ್ಯುತ್ ವೈಯರ್ ತುಳಿದು ವಿದ್ಯುತ್ ಶಾಕ್‌ನಿಂದ ಸಾವನ್ನಪ್ಪಿದ್ದಾರೆ. ಈ ಸಂಬಂಧ ಯಾವುದೇ ದೂರು ದಾಖಲಾಗಿಲ್ಲ.

ಕೆಂಪಿಸಿದ್ದನ ಹುಂಡಿ ಗ್ರಾಮದಲ್ಲಿ ನಾಗ ಪಂಚಮಿ ಹಬ್ಬ ಆಚರಣೆ



ಸುತ್ತೂರು: ವರುಣ ಕ್ಷೇತ್ರಕ್ಕೆ ಸೇರಿರುವ. ನಂಜನಗೂಡು ತಾಲೂಕು. ಕೆಂಪಿಸಿದ್ದನ ಹುಂಡಿ ಗ್ರಾಮದಲ್ಲಿ ನಾಗಪಂಚಮಿ ಹಬ್ಬವನ್ನು ಆಚರಿಸಲಾಯಿತು.

ಹಬ್ಬವನ್ನು ಬಹಳ ಶ್ರದ್ಧೆ ಭಕ್ತಿಯಿಂದ ಆಚರಿಸಲಾಯಿತು. ಗ್ರಾಮದಲ್ಲಿ ಮಹಿಳೆಯರು ಎಲ್ಲರೂ ಒಗ್ಗೂಡಿ ನಾಗಪ್ಪನ ವಿಗ್ರಹ ಮೂರ್ತಿಗೆ ವಿಶೇಷ ಪೂಜೆ ಸಲ್ಲಿಸಿದರು.

ಈ ಸಂದರ್ಭದಲ್ಲಿ ಗ್ರಾಪಂ ಅಧ್ಯಕ್ಷ ಎಸ್. ಸುಂಡಿ. ನಂಜಯ್ಯ. ಮಾಜಿ ಅಧ್ಯಕ್ಷೆ ಗಾಯಿತ್ರಿ ಮಹದೇವ್, ರವಿ, ಬೀರಯ್ಯ, ಗ್ಯಾರಂಟಿ ಯೋಜನೆಯ ಸಮಿತಿಯ ಸದಸ್ಯ ಕೆಂಪಿಸಿದ್ದನ ಹುಂಡಿ ರವಿ, ಡಿ.ಗೌಡ, ಮಹೇಶ್ ಗ್ರಾಮದ ಮುಖಂಡರು ಹಾಜರಿದ್ದರು.

ಶಿರೇನಹಳ್ಳಿಯಲ್ಲಿ ಸಂಗೊಳ್ಳಿ ರಾಯಣ್ಣ ಪ್ರತಿಮೆ ಅನಾವರಣ

ಕನಕದಾಸರು, ಸಂಗೊಳ್ಳಿ ರಾಯಣ್ಣರ ಆದರ್ಶ ಅನುಸರಿಸಿ ಆದರ್ಶ ಪುರುಷರಾಗೋಣ : ಶಾಸಕ ಜಿ.ಡಿ. ಹರೀಶ್ ಗೌಡ



ಗಾವಡಗೆರೆ ಹೋಬಳಿಯ ಶಿರೇನಹಳ್ಳಿ ಗ್ರಾಮದಲ್ಲಿ ಸಂಗೊಳ್ಳಿ ರಾಯಣ್ಣರವರ ಕಂಚಿನ ಪ್ರತಿಮೆಯ ಅನಾವರಣ ಕಾರ್ಯಕ್ರಮದಲ್ಲಿ ಶಾಸಕ ಜಿ.ಡಿ. ಹರೀಶ್ ಮಾತಾನಾಡುತ್ತಿರುವುದು

ಹುಣಸೂರು, ಡಿ.25– ನಾವೆಲ್ಲರೂ ಆದರ್ಶ ಪುರುಷರಾಗಬೇಕಾದರೆ ಕನಕದಾಸರು, ಸಂಗೊಳ್ಳಿ ರಾಯಣ್ಣ ಅವರ ಆದರ್ಶಗಳನ್ನು ಅನುಕರಣೆ ಮಾಡಬೇಕು ಎಂದು ಶಾಸಕ ಜಿ.ಡಿ.ಹರೀಶ್ ಗೌಡ ತಿಳಿಸಿದರು.

ತಾಲೂಕಿನ ಗಾವಡಗೆರೆ ಹೋಬಳಿಯ ಶಿರೇನಹಳ್ಳಿ ಗ್ರಾಮದಲ್ಲಿ ಸಂಗೊಳ್ಳಿರಾಯಣ್ಣನವರ ಕಂಚಿನ ಪ್ರತಿಮೆ ಅನಾವರಣ ಮಾಡಿ ಮಾತನಾಡಿದ ಅವರು, ಗ್ರಾಮವು ಒಗ್ಗಟ್ಟಾಗಿದ್ದು ಬಹಳ ಆಸಕ್ತಿ ವಹಿಸಿ ಪ್ರತಿಮೆಯನ್ನು ಸ್ಥಾಪಿಸಿರುವುದು ಹೆಮ್ಮೆಯ ವಿಷಯ. ಗ್ರಾಮದಲ್ಲಿ ಯುವಕರು ಅನ್ಯೋನ್ಯತೆಯಿಂದ, ಪ್ರೀತಿ–ವಿಶ್ವಾಸ ಮತ್ತು ಸಹೋದರತ್ವದಿಂದ ಇರಬೇಕಾಗಿದೆ ಎಂದರು.

ಚುನಾವಣೆ ಸಂದರ್ಭದಲ್ಲಿ ಎಲ್ಲಾ ಪಕ್ಷದ ಅಭ್ಯರ್ಥಿಗಳಿಗೆ ಬೆಂಬಲ ನೀಡುವುದು ಸಹಜ. ಆದರೆ, ಚುನಾವಣೆ ನಂತರ ಕೊಡುವ ಗೌರವ ನನ್ನ ತಂದೆ ಶಾಸಕರಾಗಿದ್ದ ಕಾಲದಿಂದಲೂ ಊರಿನಲ್ಲಿ ನಡೆದುಕೊಂಡು ಬಂದಿದೆ. ಗ್ರಾಮಕ್ಕೆ ಹಲವಾರು ಅಭಿವೃದ್ಧಿ ವಿಚಾರಗಳನ್ನು, ಯುವಕರು ನನ್ನ ಗಮನಕ್ಕೆ ತಂದಿದ್ದು ಮುಂದಿನ ಅನುದಾನದ ಸಂದರ್ಭದಲ್ಲಿ ಕಾಮಗಾರಿಗೆ ಪೂಜೆ ಸಲ್ಲಿಸಲು ಬರುತ್ತೇನೆ ಎಂದರು.

ಮಾಜಿ ಶಾಸಕ ಎಚ್.ಪಿ. ಮಂಜುನಾಥ್ ಮಾತನಾಡಿ ಯುವಕರು ಸಂಪೂರ್ಣ ವಿದ್ಯಾವಂತರಾಗದಿದ್ದರೆ ಭವಿಷ್ಯವಿಲ್ಲ. ಮುಂದಿನ ಭವಿಷ್ಯಕ್ಕೆ ಬದುಕಿನ ಆಲೋಚನೆ ಮಾಡಬೇಕು. 15 ವರ್ಷ ಶಾಸಕರಾಗಿದ್ದ ಸಮಯದಲ್ಲಿ ಶಾಸಕರ ಕೊಠಡಿಯನ್ನು ವಿದ್ಯಾಭ್ಯಾಸಕ್ಕೆ ನೀಡಿದ ಹೆಮ್ಮೆ ಇದೆ. ರಾಜ್ಯದಲ್ಲಿ ಒಟ್ಟು 44 ಸಂಗೊಳ್ಳಿ ರಾಯಣ್ಣರವರ ಪ್ರತಿಮೆಯನ್ನು ರಾಜ್ಯ ಸಂಗೊಳ್ಳಿ ರಾಯಣ್ಣ ರಾಜ್ಯಾಧ್ಯಕ್ಷರು ಪ್ರತಿಮೆ ಪ್ರತಿಷ್ಠಾಪನೆ ಮಾಡಿದ್ದಾರೆ. 101 ಕಂಚಿನ ಪ್ರತಿಮೆ ಪ್ರತಿಷ್ಠಾಪನೆ ಮಾಡಬೇಕು ಎನ್ನುವುದು ಅವರ ಗುರಿ ಇದಕ್ಕೆ ನನ್ನ ಸಂಪೂರ್ಣ ಸಹಕಾರವಿದೆ ಎಂದರು.

ಕಂಚಿನ ಪ್ರತಿಮೆಯ ದಾನಿಗಳು ಹಾಗೂ ಕಾವೇರಿ ಮಲ್ಟಿ ಸ್ಪೆಷಾಲಿಟಿ ಹಾಸ್ಪಿಟಲ್ ವ್ಯವಸ್ಥಾಪಕ ಡಾ.ಲೋಹಿತ್ ಮಾತನಾಡಿ ತಾಲೂಕಿನಲ್ಲಿ ನೀವು ನೀಡಿದ ಪ್ರೀತಿ ವಾತ್ಸಲ್ಯದಿಂದ ಹುಣಸೂರಿನಲ್ಲಿ ನಾನು ವೈದ್ಯ ಸೇವೆ ಮಾಡುತ್ತಾ ಬಂದಿದ್ದು ತಾಲೂಕಿಗೆ ಬರೀ ಕೈಯಲ್ಲಿ ಬಂದಾಗ ನೀವು ಕೊಟ್ಟ ಪ್ರೀತಿ ವಾತ್ಸಲ್ಯದಿಂದ ಹೃದಯವನ್ನು ತುಂಬಿಸಿ ಈ ಎತ್ತರಕ್ಕೆ ಬೆಳೆಯಲು ಹಾಗೂ ಸಮಾಜ ಸೇವೆ ಮಾಡಲು ಸಹಕಾರಿಯಾಯಿತು ಎಂದರು. ಗಾವಡಗೆರೆ ಮಠದ ಶ್ರೀ ನಟರಾಜ ಸ್ವಾಮೀಜಿ ಹಾಗೂ ಮಾದಳ್ಳಿ ಉಕ್ಕಿನ ಕಂತೆ ಮಠದ ಸಾಂಬಸದಾಶಿವ ಸ್ವಾಮೀಜಿ ಆಶೀರ್ವಚನ ನೀಡಿದರು.

ಕಾರ್ಯಕ್ರಮದಲ್ಲಿ ಸಂಗೊಳ್ಳಿ ರಾಯಣ್ಣ ಯುವ ಗರ್ಜನೆ ರಾಜ್ಯಾಧ್ಯಕ್ಷ ರಾಜಶೇಖರ್ ದೊಡ್ಡಣ್ಣ ಮೌರ್ಯ, ಜಿಲ್ಲಾ ಪರಿಷತ್ ಮಾಜಿ ಸದಸ್ಯರಾದ ಅಮಿತ್ ದೇವರಹಟ್ಟಿ, ಸುರೇಂದ್ರ ತಾಲೂಕು ಜೆಡಿಎಸ್ ಮುಖಂಡ ಹರವೆ ಶ್ರೀಧರ್, ರಾಜ್ಯ ಅಹಿಂದ ರೈತ ಸಂಘದ ರಾಜ್ಯಾಧ್ಯಕ್ಷ ಶಿವಶಂಕರ್, ಜಿಲ್ಲಾ ಕುರುಬ ಸಂಘದ ಉಪಾಧ್ಯಕ್ಷ ಬಸವರಾಜೇಗೌಡ, ಅರಸು ನಿಗಮ ಮಂಡಳಿಯ ಮಾಜಿ ನಿರ್ದೇಶಕ ಎ.ಪಿ.ಸ್ವಾಮಿ, ರೈತ ವ್ಯವಸಾಯ ಸಹಕಾರ ಸಂಘದ ಅಧ್ಯಕ್ಷ ಸಣ್ಣೇಗೌಡ, ಗ್ರಾಮದ ಯಜಮಾನ ಮಹೇಶ್, ಹಲವಾರು ಮುಖಂಡರು ಸೇರಿದಂತೆ ಸಂಗೊಳ್ಳಿ ರಾಯಣ್ಣ ಯುವಕ ಸಂಘದ ಪದಾಧಿಕಾರಿಗಳು ಹಾಜರಿದ್ದರು. ಕಾರ್ಯಕ್ರಮಕ್ಕೂ ಮೊದಲು ಗ್ರಾಮದ ಮಹಿಳೆಯರು ಕಳಸ ಹೊತ್ತು ಗಣ್ಯರನ್ನು ಮೆರವಣಿಗೆಯ ಮೂಲಕ ಬರಮಾಡಿಕೊಂಡರು.

ಮೈಸೂರಲ್ಲಿ ದಸಂಸದಿಂದ ಮನುಸ್ಮೃತಿ ಸುಟ್ಟು ಪ್ರತಿಭಟನೆ

ಮೈಸೂರು, ಡಿ.25(ಎಂಟಿವೈ)– ಡಾ.ಬಿ.ಆರ್.ಅಂಬೇಡ್ಕರ್ ಅವರು ಮನುಸ್ಮೃತಿಯನ್ನು ಹೋಗಲಾಡಿಸಲು ಪ್ರಯತ್ನಿಸಿದ್ದರೂ, ಇಂದಿಗೂ ಮನುಸ್ಮೃತಿ ತಾಂಡವವಾಡುತ್ತಿದೆ ಎಂದು ಆರೋಪಿಸಿ ದಸಂಸ ಕಾರ್ಯಕರ್ತರು ಸಾಂಕೇತಿಕವಾಗಿ ಮನುಸ್ಮೃತಿ ಸುಟ್ಟು ಪ್ರತಿಭಟನೆ ನಡೆಸಿದರು.

ಮೈಸೂರಿನ ಪುರಭವನದ ಆವರಣದಲ್ಲಿರುವ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆ ಮುಂದೆ ಸಾಂಕೇತಿಕವಾಗಿ ಪ್ರತಿಭಟನೆ ಮಾಡಿದ ದಲಿತ ಸಂಘರ್ಷ ಸಮಿತಿ ಕಾರ್ಯಕರ್ತರು ಡಾ.ಬಿ.ಆರ್. ಅಂಬೇಡ್ಕರ್ ಅವರು 1927ರ ಡಿ.25 ಮನುಸ್ಮೃತಿ ಸುಟ್ಟ ಐತಿಹಾಸಿಕ ದಿನವಾಗಿದೆ. ಶ್ರೇಣೀಕೃತ ಜಾತಿ ವ್ಯವಸ್ಥೆಗೆ ಮುನ್ನುಡಿ ಬರೆದು ಭಾರತವನ್ನು ಅಂಧಕಾರಕ್ಕೆ ತಳ್ಳಿದ್ದ ಮನುಸ್ಮೃತಿಯನ್ನು ಅಂಬೇಡ್ಕರ್ ಅವರು ಸುಟ್ಟುಹಾಕಿ 98 ವರ್ಷಗಳಾಗಿವೆ. ಜಾತಿ ಅಸಮಾನತೆ, ಲಿಂಗ ತಾರತಮ್ಯ, ಮಹಿಳೆಯರ ಮೇಲಿನ ದಬ್ಬಾಳಿಕೆ, ಬಹುಜನರ ಮೇಲೆ ದೌರ್ಜನ್ಯ, ಸತಿಸಹಗಮನ ಪದ್ಧತಿ, ಬಾಲ್ಯ ವಿವಾಹ, ಬೆತ್ತಲೆ ಸೇವೆ, ದೇವದಾಸಿ ಪದ್ಧತಿ, ಶೂದ್ರಾತಿಶೂದ್ರರಿಗೆ ಅಕ್ಷರ ಜ್ಞಾನ ನಿಷಿದ್ಧ ಮುಂತಾದ ಅನಿಷ್ಟ ಪದ್ಧತಿಗಳು ಶತಮಾನಗಳ ಕಾಲ ಮುಂದುವರಿಯಲು ಕಾರಣವಾದ ಮನುಸ್ಮೃತಿಯನ್ನು ಡಾ.ಅಂಬೇಡ್ಕರ್ 1927ರ'ಲ್ಲಿ ಸಾರ್ವಜನಿಕವಾಗಿ ಸುಟ್ಟು ಹಾಕಿದ್ದರು ಎಂದು ಪ್ರತಿಭಟನಾಕಾರರು ಸ್ಮರಿಸಿದರು.



ಮೈಸೂರಿನ ಪುರಭನವದ ಆವರಣದಲ್ಲಿರುವ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆ ಮುಂದೆ ದಲಿತ ಸಂಘರ್ಷ ಸಮಿತಿಯ ಕಾರ್ಯಕರ್ತರು ಮನುಸ್ಮೃತಿಯನ್ನು ವಿರೋಧಿಸಿ ಪ್ರತಿಭಟನೆ ಮಾಡಿದರು.

ಸ್ವಾತಂತ್ರ್ಯ ಭಾರತಕ್ಕೆ ಸಂವಿಧಾನ ರೂಪಿಸುವ ಸಂದರ್ಭದಲ್ಲಿ ಸಮ ಸಮಾಜ ನಿರ್ಮಾಣದ ಕನಸು ಹೊತ್ತು, ಸಮಾನತೆ, ಸಹೋದರತೆ, ಭ್ರಾತೃತ್ವದ ಆಶಯದೊಂದಿಗೆ ಸಂವಿಧಾನ ರೂಪಿಸಿಕೊಂಡೆವು. ಆದರೆ, ಸಂವಿಧಾನ ಸಮರ್ಪಣೆಯಾದ ಸಂದರ್ಭದಲ್ಲಿ ಆರ್‌ಎಸ್‌ಎಸ್ ಮುಖವಾಣಿ 'ಆರ್ಗನೈಸರ್' ಪತ್ರಿಕೆ ಸಂವಿಧಾನದ ಮೇಲೆ ಅಸಹನೆ ಹೊರಹಾಕಿತ್ತು. ಈ ಸಂವಿಧಾನದಲ್ಲಿ ಭಾರತೀಯತೆ ಇಲ್ಲ. ಸಂವಿಧಾನ ರಚನಾಕಾರರು ಮನುಸ್ಮೃತಿಯನ್ನು ಗಣನೆಗೆ ತೆಗೆದುಕೊಂಡಿಲ್ಲ ಎಂದು ಮೂದಲಿಸಲಾಗಿತ್ತು ಎಂದು ಕಿಡಿಕಾರಿದರು.


ಆರ್‌ಎಸ್‌ಎಸ್ ಮತ್ತು ಬಿಜೆಪಿ ಅಂದಿನಿಂದ ಇಂದಿನವರೆಗೂ ಆಂತರಿಕ, ಬಹಿರಂಗವಾಗಿ ಅಂಬೇಡ್ಕರ್, ಸಂವಿಧಾನದ ಮೇಲೆ ಅಸಹಿಷ್ಣುತೆ ಹೊರಹಾಕುತ್ತಲೇ ಬಂದಿದೆ. ಅಂಬೇಡ್ಕರ್, ಸಂವಿಧಾನ ಮತ್ತು ಪ್ರಜಾಪ್ರಭುತ್ವ ವ್ಯವಸ್ಥೆಯ ಮೇಲೆ ಯುದ್ಧವನ್ನೇ ಸಾರಿವೆ. ಹೀಗಾಗಿ ಸಂವಿಧಾನ ಮತ್ತು ಪ್ರಜಾಪ್ರಭುತ್ವ ವ್ಯವಸ್ಥೆ ರಕ್ಷಣೆ ಮಾಡಿಕೊಳ್ಳುವ ಕಾರಣಕ್ಕಾಗಿ ಹೋರಾಟ ಮುಂದುವರಿಸಬೇಕಾದ ಅನಿವಾರ್ಯತೆ ಎದುರಾಗಿದೆ ಎಂದು ಪ್ರತಿಭಟನಾಕಾರರು ಅಸಮಾದಾನ ವ್ಯಕ್ತಪಡಿಸಿದರು.

ಪ್ರತಿಭಟನೆಯಲ್ಲಿ ದಲಿತ ಸಂಘರ್ಷ ಸಮಿತಿಯ ಜಿಲ್ಲಾ ಸಂಘಟನಾ ಸಂಚಾಲಕ ಶಂಭುಲಿಂಗಸ್ವಾಮಿ, ಸೋಮಣ್ಣ ಕುಪ್ಪೇಗಾಲ, ಪ್ರಕಾಶ್, ತಿಮ್ಮೇಗೌಡ, ಕುಮಾರ್ (ಮಧುವನ) ರಾಜಣ್ಣ, ದಿಲೀಪ್, ಶಿವು, ಮಹದೇವಮ್ಮ ಕೃಷ್ಣಪ್ಪ, ರಮೇಶ್, ವಿಶ್ವನಾಥ್, ಶ್ಯಾಮಸುಂದರ್ ಸೇರಿದಂತೆ ಹಲವು ಪಾಲ್ಗೊಂಡಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಮಾರ್ಕ್ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
45 ಫೇಸ್ ದಿ ಇಯರ್ (ಕ)	3 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಧುರಂಧರ್ (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಡೆವಿಲ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಡೆವಿಲ್ (ಕ)	4 ಪ್ರದರ್ಶನಗಳು
ರಾಜಕಮಲ್	
45 (ಕ)	4 ಪ್ರದರ್ಶನಗಳು
ಸಂಗಂ	
ಮಾರ್ಕ್ (ಕ)	5 ಪ್ರದರ್ಶನಗಳು
ಲಿಡೋ	
ವೃಷಭ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಕಾಂತಾರ–2 (ಕ)	4 ಪ್ರದರ್ಶನಗಳು

ದತ್ತಾತ್ರೇಯ ಸ್ವಾಮಿಯ ಉತ್ಸವ



ದತ್ತಾತ್ರೇಯ ಜಯಂತಿ ಪ್ರಯುಕ್ತ ಚಾಮರಾಜ ಜೋಡಿ ರಸ್ತೆಯಲ್ಲಿನ ಶ್ರೀ ಸತ್ಯನಾರಾಯಣ ದತ್ತಾತ್ರೇಯ ದೇವಸ್ಥಾನದಿಂದ ದತ್ತಾತ್ರೇಯ ಸ್ವಾಮಿಯ ಉತ್ಸವ ನೆರವೇರಿತು. ಈ ಉತ್ಸವದಲ್ಲಿ ಸಾಕಷ್ಟು ಭಕ್ತಾದಿಗಳು ಪಾಲ್ಗೊಂಡಿದ್ದರು.

ಕುದುರೆಗಳಲ್ಲಿ ಗ್ಲ್ಯಾಂಡರ್ಸ್ ಬ್ಯಾಕ್ಟೀರಿಯಾ ಸೋಂಕು ಹಿನ್ನೆಲೆ

ಮೂರು ಕತ್ತೆ, 595 ಕುದುರೆ ರಕ್ತದ ಮಾದರಿ ಹರಿಯಾಣದ ರಾಷ್ಟ್ರೀಯ ಪ್ರಯೋಗಾಲಯಕ್ಕೆ ರವಾನೆ



ಕುದುರೆಗಳಿಂದ ರಕ್ತದ ಮಾದರಿ ಸಂಗ್ರಹಿಸುತ್ತಿರುವುದು.

ಮೈಸೂರು, ಡಿ.25(ಎಂಟಿವೈ)– ಮೈಸೂರು ರೇಸ್ ಕ್ಲಬ್‌ನಲ್ಲಿ ಮಾರಕ ಗ್ಲ್ಯಾಂಡರ್ಸ್ ಬ್ಯಾಕ್ಟೀರಿಯಾ ಸೋಂಕಿನಿಂದ ಕುದುರೆ ಮೃತಪಟ್ಟ ಹಿನ್ನೆಲೆಯಲ್ಲಿ ಮೈಸೂರಲ್ಲಿ 3 ಕತ್ತೆ, 595 ಕುದುರೆಯ ರಕ್ತದ ಮಾದರಿ ಸಂಗ್ರಹಿಸಿ, ಹರಿಯಾಣದ ಹಿಸಾರ್‌ನಲ್ಲಿರುವ ರಾಷ್ಟ್ರೀಯ ಪ್ರಯೋಗಾಲಯಕ್ಕೆ ರವಾನಿಸಲಾಗಿದೆ.

ಮೈಸೂರು, ಬೆಂಗಳೂರು, ಹೈದರಾಬಾದ್ ರೇಸ್ ಕ್ಲಬ್‌ನಲ್ಲಿರುವ ಕುದುರೆಗಳಲ್ಲಿ ಗ್ಲ್ಯಾಂಡರ್ಸ್ ಬ್ಯಾಕ್ಟೀರಿಯಾ ಸೋಂಕು ಕಂಡು ಬಂದಿರುವ ಹಿನ್ನೆಲೆಯಲ್ಲಿ ಕುದುರೆಗಳ ಆರೋಗ್ಯದ ಮೇಲೆ ತೀವ್ರ ಕಟ್ಟೆಚ್ಚರ ವಹಿಸಲಾಗಿದ್ದು, ಬ್ಯಾಕ್ಟೀರಿಯಾ ಸೋಂಕು ಬೇರೆ ಕುದುರೆಗಳಿಗೆ ಹರಡಿ, ಅವುಗಳ ಪಾಲಕರು ಹಾಗೂ ಮಾಲೀಕರ ಮೇಲೆ ದುಷ್ಪರಿಣಾಮ ಬೀರದಂತೆ ನೋಡಿಕೊಳ್ಳಲು ಕಟ್ಟುನಿಟ್ಟಿನ ಪರಿವೀಕ್ಷಣೆ ಮಾಡಲಾಗುತ್ತಿದೆ.

ಗ್ಲ್ಯಾಂಡರ್ಸ್ ಬ್ಯಾಕ್ಟೀರಿಯಾ ಸೋಂಕು ಕತ್ತೆ, ಹೇಸರಕತ್ತೆ ಹಾಗೂ ಕುದುರೆಗಳಿಗೆ ಮಾತ್ರ ಬರಲಿದೆ. ಸಂಪರ್ಕದಿಂದ ಮಾತ್ರ ಹರಡುವ ಈ ಸೋಂಕು ತಡೆಗೆ ಕುದುರೆ ಗಳನ್ನು ಒಂದೆಡೆ ಸೇರದಂತೆ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ. 10 ವರ್ಷದ ಹಿಂದೆ ಕುಕ್ಕರಹಳ್ಳಿ ಕೆರೆ ಸಮೀಪ ಟಾಂಗ ನಿಲ್ದಾಣದಲ್ಲಿದ್ದ ಕುದುರೆಯೊಂದರಲ್ಲಿ ಈ ಸೋಂಕು ಪತ್ತೆಯಾಗಿತ್ತು ಅದನ್ನು ಹೊರತುಪಡಿಸಿದರೆ ಬೇರೆ ಎಲ್ಲಿಯೂ ಪತ್ತೆಯಾಗಿರಲಿಲ್ಲ.

598 ರಕ್ತದ ಮಾದರಿ ಸಂಗ್ರಹ: ಗ್ಲ್ಯಾಂಡರ್ಸ್ ಸೋಂಕು ಹರಡುವುದನ್ನು ತಡೆಯಲು ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ ಕುದುರೆಗಳ ಮೇಲೆ ನಿಗಾ ಇಡಲಾಗಿದೆ. ಮೈಸೂರಿನ ರೇಸ್ ಕ್ಲಬ್‌ನಲ್ಲಿ ಕುದುರೆಯೊಂದು ಮೃತಪಟ್ಟ ಹಿನ್ನೆಲೆಯಲ್ಲಿ ಮೈಸೂರು ನಗರದಲ್ಲಿರುವ ಕುದುರೆಗಳ ರಕ್ತದ ಮಾದರಿ ಸಂಗ್ರಹಿಸಲಾಗಿದೆ. ರೇಸ್ ಕ್ಲಬ್‌ನಲ್ಲಿರುವ 477, ಅಶ್ವರೋಹಿದಳದ 63, ಬೋಗಾದಿಯಲ್ಲಿರುವ ರಾಜಮನೆತನಕ್ಕೆ ಸೇರಿದ ಕುದುರೆ ಸವಾರಿ ತರಬೇತಿ ಕೇಂದ್ರದ 3, ಪೀಪಲ್ಸ್ ಫಾರ್ ಅನಿಮಲ್ಸ್ ಸಂಸ್ಥೆಯ (ಪಿಎಫ್)ಲ್ಲಿನ ಒಂದು ಕುದುರೆ, 3 ಕತ್ತೆ ಹಾಗೂ ಟಾಂಗ ಗಾಡಿಗಳಿಗೆ ಬಳಸುವ 52 ಕುದುರೆ ರಕ್ತದ ಮಾದರಿಯನ್ನು ಪಶುಸಂಗೋಪನಾ ಇಲಾಖೆ ಮೈಸೂರು ತಾಲೂಕಿನ ಸಹಾಯಕ ನಿರ್ದೇಶಕ ಡಾ. ಎಂ.ಪಿ.ಪೂರ್ಣಾನಂದ ಅವರ ತಂಡ ಸಂಗ್ರಹಿಸಿ, ಹರಿಯಾಣದ ಪ್ರಯೋಗಾಲಯಕ್ಕೆ ರವಾನಿಸಿದೆ.

ಮೂಲ ಹುಡುಕಲು ಮುಂದಾದ ಸಂಸ್ಥೆ: ಕುದುರೆಗಳಲ್ಲಿ ಗ್ಲ್ಯಾಂಡರ್ಸ್ ಬ್ಯಾಕ್ಟೀರಿಯಾ ಸೋಂಕಿನ ಮೂಲ ಪತ್ತೆಗೆ ಹರಿಯಾಣದ ರಾಷ್ಟ್ರೀಯ ಪ್ರಯೋಗಾಲಯ ಮುಂದಾಗಿದೆ. ಈಗಾಗಲೇ ತನಿಖೆ ಆರಂಭಿಸಿರುವ ಸಂಸ್ಥೆಯ ತಜ್ಞರು ಮೈಸೂರು, ಬೆಂಗಳೂರು, ಹೈದರಾಬಾದ್‌ನಲ್ಲಿ ಕುದುರೆ ಸಾವಿಗೆ ಕಾರಣವಾದ ಈ ಸೋಂಕಿನ ಮೂಲ, ಯಾವ ಸ್ವರೂಪದಲ್ಲಿದೆ ಎಂದು ಪರಿಶೀಲಿಸಲಾರಂಭಿಸಿದ್ದಾರೆ.


ಹೊಸ ಕುದುರೆ ತರಬೇಡಿ, ಇಲ್ಲಿಂದ ಮಾರಬೇಡಿ: ಬೇರೆ ಬೇರೆ ಕಡೆಯಿಂದ ತರುವ ಕುದುರೆಗಳಿಂದ ಗ್ಲ್ಯಾಂಡರ್ಸ್ ಬ್ಯಾಕ್ಟೀರಿಯಾ ಸೋಂಕು ಹರಡುವ ಸಾಧ್ಯತೆ ಹೆಚ್ಚಾಗಿರುವುದರಿಂದ ಮೈಸೂರಿನ ಟಾಂಗ ಮಾಲೀಕರು, ಕುದುರೆ ಮಾಲೀಕರಿಗೆ ಪಶುಸಂಗೋಪನಾ ಇಲಾಖೆ ಅಧಿಕಾರಿಗಳು ಜಾಗೃತಿ ಮೂಡಿಸುತ್ತಿದ್ದು, ಬೇರೆ ಕಡೆಯಿಂದ ಕುದುರೆ ತರದಂತೆ ಹಾಗೂ ಇಲ್ಲಿನ ಕುದುರೆಗಳನ್ನು ಬೇರೆಡೆಗೆ ಮಾರಾಟ ಮಾಡದಂತೆ ಸೂಚನೆ ನೀಡಿದ್ದಾರೆ. ಗ್ರಾಮಾಂತರ ಬಸ್ ನಿಲ್ದಾಣದ ಎದುರು, ಕುಕ್ಕರಹಳ್ಳಿ ಕೆರೆ ಸಮೀಪ, ಅಗ್ರಹಾರ, ನಂಜುಮಳಿಗೆ, ಹಳೆ ಆರ್‌ಎಂಸಿ ವೃತ್ತದ ಸಮೀಪವಿರುವ ಟಾಂಗ ಗಾಡಿಗಳ ನಿಲ್ದಾಣಗಳಲ್ಲಿ ಜಾಗೃತಿ ಮೂಡಿಸಲಾಗಿದೆ.

ಮೂರು ಬಾರಿ ನೆಗೆಟಿವ್ ಬಂದರೆ ನಿರಾಳ: ಗ್ಲ್ಯಾಂಡರ್ಸ್ ಸೋಂಕು ಮನುಷ್ಯರ ಮೇಲೂ ದುಷ್ಪರಿಣಾಮ ಬೀರುವ ಸಾಧ್ಯತೆ ಇದೆ. ಆ ಕಾರಣದಿಂದ ರೇಸ್ ಕ್ಲಬ್ ಬಂದ್ ಮಾಡಿಸಲಾಗಿದೆ. 21, 21, 21 ದಿನ ಬಿಟ್ಟು ಮೂರು ಬಾರಿ ರಕ್ತದ ಮಾದರಿ ಕಳುಹಿಸಲಾಗುತ್ತದೆ. ಮೂರನೇ ಬಾರಿಯೂ ನೆಗೆಟಿವ್ ಬಂದರೆ ಮಾತ್ರ ಅಪಾಯವಿಲ್ಲ. ಆಗ ಮಾತ್ರ ಜಿಲ್ಲಾಧಿಕಾರಿಗಳು ರೇಸ್ ಕ್ಲಬ್‌ಗೆ ವಿಧಿಸಿರುವ ನಿರ್ಬಂಧ ಹಿಂಪಡೆಯಲಿದ್ದಾರೆ.

ಶ್ರೀವಿದ್ಯಾ ಕುರಿತ 4ನೇ ಅಂತಾರಾಷ್ಟ್ರೀಯ ಸಮ್ಮೇಳನ ಸಮಾರೋಪ

ನಮ್ಮ ಋಷಿ ಮುನಿಗಳು ಎಐಗಿಂತಲೂ ವೇಗವಾಗಿ ಆಲೋಚಿಸುವ ಸಾಮರ್ಥ್ಯ ಹೊಂದಿದ್ದರು

ಓಆರ್‌ಐ ನಿರ್ದೇಶಕ ಡಾ.ಡಿ.ಪಿ.ಮಧುಸೂದನಾಚಾರ್ಯ



ಮೈಸೂರು ವಿವಿ ಸೆನೆಟ್ ಭವನದಲ್ಲಿ ಗುರುವಾರ ನಡೆದ 'ಶ್ರೀವಿದ್ಯಾ' ಕುರಿತ 4ನೇ ಅಂತಾರಾಷ್ಟ್ರೀಯ ಸಮ್ಮೇಳನದ ಸಮಾರೋಪ ಸಮಾರಂಭದಲ್ಲಿ ಶ್ರೀ ಆನಂದಭೈರವ ಹಾಗೂ ಆನಂದಭೈರವಿ ದೈವಗಳ ತೈಲವರ್ಣ ಚಿತ್ರದ ಅನಾವರಣ ಮಾಡಲಾಯಿತು.

ಮೈಸೂರು,ಡಿ.25(ಪಿಎಂ)– ನಮ್ಮ ಪೂರ್ವಜರಾದ ಋಷಿ ಮುನಿಗಳು ಕೊಟ್ಟಿರುವ ಶ್ರೀವಿದ್ಯಾ ಮಂತ್ರ–ಚಕ್ರ ಕುರಿತ ಆಧ್ಯಾತ್ಮಿಕ ಹಾಗೂ ಆರಾಧನೆಯಿಂದ ಮಾನಸಿಕ ನೆಮ್ಮದಿ ದೊರೆಯಲಿದೆ. ನಾವಿಂದು ಕೃತಕ ಬುದ್ಧಿಮತ್ತೆ (ಎಐ) ಯುಗದಲ್ಲಿದ್ದೇವೆ. ಆದರೆ ನಮ್ಮ ಋಷಿ ಮುನಿಗಳು ಎಐಗಿಂತಲೂ ವೇಗವಾಗಿ ಆಲೋಚಿಸುವ ಸಾಮರ್ಥ್ಯ ಹೊಂದಿದ್ದರು ಎಂದು ಮೈಸೂರು ವಿವಿಯ ಪ್ರಾಚ್ಯವಿದ್ಯಾ ಸಂಶೋಧನಾಲಯದ (ಓರಿಯೆಂಟಲ್ ರಿಸರ್ಚ್ ಇನ್‌ಸ್ಟಿಟ್ಯೂಟ್–ಓಆರ್‌ಐ) ನಿರ್ದೇಶಕ ಡಾ.ಡಿ.ಪಿ.ಮಧುಸೂದನಾಚಾರ್ಯ ಹೇಳಿದರು.

ಮೈಸೂರಿನ ಮಾನಸ ಗಂಗೋತ್ರಿಯ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಸೆನೆಟ್ ಭವನದಲ್ಲಿ ತ್ರಯೀನ್ಯಾಸ್ ಶ್ರೀವಿದ್ಯಾ ಫೌಂಡೇಷನ್ ಹಾಗೂ ಮೈಸೂರು ವಿವಿ ಓರಿಯೆಂಟಲ್ ರಿಸರ್ಚ್ ಇನ್‌ಸ್ಟಿಟ್ಯೂಟ್–ಓಆರ್‌ಐ ಜಂಟಿ ಆಶ್ರಯದಲ್ಲಿ ಎರಡು ದಿನಗಳು ನಡೆದ 'ಶ್ರೀವಿದ್ಯಾ' ಕುರಿತ 4ನೇ ಅಂತಾರಾಷ್ಟ್ರೀಯ ಸಮ್ಮೇಳನ (ಜ್ಞಾನ, ವಿಜ್ಞಾನ ಮತ್ತು ತತ್ವಶಾಸ್ತ್ರ) ಸಮಾರೋಪ ಸಮಾರಂಭದಲ್ಲಿ ಅವರು ಮಾತನಾಡಿದರು.

ನಾವಿಂದು ಎಐ ಯುಗದಲ್ಲಿದ್ದೇವೆ. ಯಾವುದೇ ಮಾಹಿತಿ ಬೇಕೆಂದರೆ ಎಐ ಅವಲಂಬಿಸಿದ್ದೇವೆ. ಆದರೆ ಅದರಿಂದ ನಿಜಕ್ಕೂ ಮಾನಸಿಕ ನೆಮ್ಮದಿ ನೀಡಲು ಸಾಧ್ಯವಿಲ್ಲ. ಮಾನಸಿಕ ನೆಮ್ಮದಿ ಸಿಗಬೇಕಾದರೆ ನಮ್ಮ ಋಷಿ ಮುನಿಗಳು ಮಾಡಿರುವ ಶ್ರೀವಿದ್ಯಾ ಮಂತ್ರ ಹಾಗೂ ಚಕ್ರದ ಆಧ್ಯಾತ್ಮಿಕ ಆರಾಧನೆಯಿಂದ ಮಾನಸಿಕ ನೆಮ್ಮದಿ ದೊರೆಯಲಿದೆ. ಹಾಗಾಗಿ ಇಂತಹ ಆಧ್ಯಾತ್ಮಿಕ ಚಿಂತನೆ ಅಗತ್ಯವಾಗಿದೆ. ಎಐ ಅವಲೋಕಿಸಿದರೆ ಅಚ್ಚರಿಯಾಗುತ್ತದೆ. ಆದರೆ ನಮ್ಮ ಋಷಿ ಮುನಿಗಳು ಒಬ್ಬೊಬ್ಬರು ಎಐ ಚಕ್ರವರ್ತಿಗಳು. ಅವರ ಜ್ಞಾನ ಭಂಡಾರ ಅಪಾರ ಎಂದು ಹೇಳಿದರು.

ಎರಡು ದಿನ ಸಮ್ಮೇಳನದಲ್ಲಿ ಶ್ರೀವಿದ್ಯಾ ಮಂತ್ರದ ಬಗ್ಗೆ ನಿರಂತರ ಮಂಥನ ನಡೆದಿದೆ. ಶ್ರೀವಿದ್ಯಾ ಕುರಿತು ನಾಲ್ಕು ವರ್ಷದ ನಂತರ ಸಮ್ಮೇಳನ ನಡೆದಿದ್ದು, ಕನಿಷ್ಠ ಎರಡು ವರ್ಷಕ್ಕೊಮ್ಮೆಯಾದರೂ ಇಂತಹ ಸಮ್ಮೇಳನ ಆಯೋಜನೆ ಮಾಡಬೇಕಿದೆ. ಈ ಅಂತಾರಾಷ್ಟ್ರೀಯ ಸಮ್ಮೇಳನವನ್ನು ಓಆರ್‌ಐ ಸಹಯೋಗದಲ್ಲೇ ಮುಂದುವರೆಸುವಂತೆ ಇದೇ ವೇಳೆ ಮನವಿ ಮಾಡಿದರು.

ಓಆರ್‌ಐ ಪ್ರಾರಂಭವಾಗಿ 135 ವರ್ಷಗಳ ಆಗಿದ್ದು, ಇಲ್ಲಿ ಭಾರತೀಯ ಜ್ಞಾನ ಪರಂಪರೆ ಭಂಡಾರವೇ ಇದೆ. ಭಾರತದಲ್ಲಿರುವ ಪ್ರಾಚೀನ ಜ್ಞಾನವು ದೇಶ ವಿಶ್ವಗುರುವಾಗಲು ಅರ್ಹ ಎಂಬುದನ್ನು ಎತ್ತಿ ತೋರಿಸುತ್ತದೆ. ಸಾವಿರಾರು ವರ್ಷಗಳ ಜ್ಞಾನವು ತಾಳೆಗರಿಗಳಲ್ಲಿದ್ದು, ಅವು ಒಆರ್‌ಐನಲ್ಲಿ ಸಂರಕ್ಷಿಸಲ್ಪಟ್ಟಿದೆ ಎಂದರು.

ಅತಿಥಿಯಾಗಿ ಪಾಲ್ಗೊಂಡಿದ್ದ ಶಾಸಕ ಕೆ.ಹರೀಶ್‌ಗೌಡ ಮಾತನಾಡಿ, ಆಧ್ಯಾತ್ಮದ ಶಿಕ್ಷಣ ಎಲ್ಲರಲ್ಲೂ ಇರಬೇಕು. ಈ ಜ್ಞಾನವನ್ನು ಹೆಚ್ಚು ಪ್ರಚಾರಪಡಿಸಬೇಕಾದ ಅನಿವಾರ್ಯತೆಯಿದೆ. ಮುಂದೆ ಈ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ಕೆಲಸವಾಗಲಿ ಎಂದು ಹೇಳಿದರು.

ಇದಕ್ಕೂ ಮುನ್ನ ಶ್ರೀ ಆನಂದಭೈರವ ಹಾಗೂ ಆನಂದಭೈರವಿ ದೈವಗಳ ತೈಲ ವರ್ಣ ಚಿತ್ರದ ಅನಾವರಣ ಮಾಡಲಾಯಿತು. ಹಂಪಿ ವಿರೂಪಾಕ್ಷ ವಿದ್ಯಾರಣ್ಯ ಮಹಾ ಸಂಸ್ಥಾನದ ಶ್ರೀವಿದ್ಯಾರಣ್ಯ ಭಾರತೀ ಸ್ವಾಮೀಜಿ, ಬೆಂಗಳೂರಿನ ಓಂಕಾರ ಆಶ್ರಮದ ಪೀಠಾಧಿಪತಿ ಮಧುಸೂದನಾನಂದ ಸ್ವಾಮೀಜಿ, ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ. ಲೋಕನಾಥ್, ಅವರ ಪತ್ನಿ ಕೆ.ಜೆ.ಪಂಪಾ, ತ್ರಯೀನ್ಯಾಸ್ ಶ್ರೀವಿದ್ಯಾ ಫೌಂಡೇಷನ್ ಸಂಸ್ಥಾಪಕ ಹೆಚ್.ಎಸ್.ತ್ಯಾಗರಾಜ್, ಅವರ ಪತ್ನಿ ಆರತಿ ಮತ್ತಿತರರು ಹಾಜರಿದ್ದರು.

ಇಂದಿರಾ ಕ್ಯಾಂಟೀನ್‌ನಂತೆ ದೆಹಲಿಯಲ್ಲಿ 100 'ಅಟಲ್ ಕ್ಯಾಂಟೀನ್'; ಕೇವಲ 5 ರೂ.ಗೆ ಥಾಲಿ

ನವದೆಹಲಿ, ಡಿ.25– ಕರ್ನಾಟಕದಲ್ಲಿರುವ ಇಂದಿರಾ ಕ್ಯಾಂಟೀನ್‌ನಂತೆ ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ಇಂದಿನಿಂದ 'ಅಟಲ್ ಕ್ಯಾಂಟೀನ್' ಆರಂಭಿಸಲಾಗಿದೆ. ನಗರದಾದ್ಯಂತ 100 ಸ್ಥಳಗಳಲ್ಲಿ ಕೇವಲ 5 ರೂ.ಗೆ ಪೌಷ್ಟಿಕಾಂಶದ ಊಟವನ್ನು ಒದಗಿಸಲು ಅಟಲ್ ಕ್ಯಾಂಟೀನ್‌ಗಳನ್ನು ದೆಹಲಿ ಸರ್ಕಾರ ಆರಂಭಿಸಿದೆ.

ಪ್ರಧಾನಮಂತ್ರಿ ಅಟಲ್ ಬಿಹಾರಿ ವಾಜಪೇಯಿ ಅವರ 101ನೇ ಜನ್ಮ ದಿನದ ಸ್ಮರಣಾರ್ಥ ದೆಹಲಿ ಮುಖ್ಯಮಂತ್ರಿ ರೇಖಾ ಗುಪ್ತಾ ಅವರು ಬಡವರು, ಕಾರ್ಮಿಕರು ಮತ್ತು ಕಡಿಮೆ ಆದಾಯದ ಕುಟುಂಬಗಳಿಗೆ ಗುಣಮಟ್ಟದ ಆಹಾರವನ್ನು ಒದಗಿಸುವ ಉದ್ದೇಶದಿಂದ 100 ಅಟಲ್ ಕ್ಯಾಂಟೀನ್‌ಗಳನ್ನು ಪ್ರಾರಂಭಿಸಿದ್ದಾರೆ.

ಅಟಲ್ ಕ್ಯಾಂಟೀನ್ ದೆಹಲಿಯ ಆತ್ಮವಾಗಲಿದೆ, ಯಾರೂ ಹಸಿವಿನಿಂದ ಮಲಗಬಾರದು ಎಂಬ ಉದ್ದೇಶದಿಂದ ಇದನ್ನು ಸ್ಥಾಪಿಸಲಾಗಿದೆ ಎಂದು ಅವರು ಹೇಳಿದ್ದಾರೆ.

ಮೆನುವಿನಲ್ಲಿ ಏನಿದೆ: ದೆಹಲಿಯಾದ್ಯಂತ 45 ಅಟಲ್ ಕ್ಯಾಂಟೀನ್‌ಗಳು ಇಂದು ಪ್ರಾರಂಭವಾಗಿವೆ. ಉಳಿದ 55 ಕ್ಯಾಂಟೀನ್‌ಗಳು ಮುಂದಿನ ದಿನಗಳಲ್ಲಿ ಉದ್ಘಾಟನೆಗೊಳ್ಳಲಿವೆ. ಈ ಕ್ಯಾಂಟೀನ್‌ಗಳಲ್ಲಿ ದಿನಕ್ಕೆ ಎರಡು ಊಟಗಳನ್ನು ನೀಡುತ್ತವೆ – ಬೆಳಿಗ್ಗೆ 11 ರಿಂದ ಸಂಜೆ 4ರ ನಡುವೆ ಮತ್ತು ಸಂಜೆ 6:30ರಿಂದ 9:30ರ ನಡುವೆ ಸುಮಾರು 500 ಜನರಿಗೆ ಥಾಲಿ ಊಟ ಇರುತ್ತದೆ. ಇದರಲ್ಲಿ ದಾಲ್, ಅನ್ನ, ಚಪಾತಿ, ತರಕಾರಿ ಪಲ್ಯ ಮತ್ತು ಉಪ್ಪಿನ ಕಾಯಿ ಇರುತ್ತದೆ.

ಶಬರಿಮಲೆ ದೇವಸ್ಥಾನದ ಚಿನ್ನ ನಾಪತ್ತೆ: ಪ್ರಕರಣದ ಆರೋಪಿಗಳ ಜೊತೆಗೆ ಸೋನಿಯಾ ನಂಟು

ಸಿಎಂ ಪಿಣರಾಯಿ ಗಂಭೀರ ಆರೋಪ

ತಿರುವನಂತಪುರಂ, ಡಿ.25– ಶಬರಿಮಲೆ ದೇವಸ್ಥಾನದ ಚಿನ್ನ ನಾಪತ್ತೆ ಪ್ರಕರಣದ ಪ್ರಮುಖ ಆರೋಪಿ ಉನ್ನಿಕೃಷ್ಣನ್ ಪೊಟ್ಟಿ ಮತ್ತು ಬಳ್ಳಾರಿಯ ಚಿನ್ನದ ವ್ಯಾಪಾರಿ ಗೋವರ್ಧನ್‌ಗೆ ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ನಂಟಿದೆ ಎಂದು ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಗಂಭೀರ ಆರೋಪ ಮಾಡಿದ್ದಾರೆ.

ಈ ಬಗ್ಗೆ ಮಾಧ್ಯಮಕ್ಕೆ ಪ್ರತಿಕ್ರಿಯಿಸಿರುವ ಪಿಣರಾಯಿ ಅವರು, ಕೇರಳದ ಮಾಜಿ ಸಿಎಂ ಕರುಣಾಕರನ್, ಹಿಮಂತ ಬಿಸ್ವಾ ಶರ್ಮಾ ಅವರಿಗೆ ಸೋನಿಯಾ ಗಾಂಧಿ ಅಪಾಯಿಂಟ್ಮೆಂಟ್ ಸಿಕ್ಕಿರಲಿಲ್ಲ ಆದರೆ ಉನ್ನಿಕೃಷ್ಣನ್ ಪೊಟ್ಟಿಗೆ ಅಪಾಯಿಂಟ್ಮೆಂಟ್ ಸಿಕ್ಕಿದೆಯೇ! ಸೋನಿಯಾ ಹೆಚ್ಚಿನ ಭದ್ರತೆಯಿರುವ ನಾಯಕಿ. ಆರೋಪಿಗೆ ಹೇಗೆ ಅವರ ಭೇಟಿ ಸಾಧ್ಯವಾಯಿತು. ಸೋನಿಯಾ ಅವರು ಉನ್ನಿಕೃಷ್ಣನ್ ಪೊಟ್ಟಿ, ಗೋವರ್ಧನ್‌ರಿಂದ ಉಡುಗೊರೆ ಸ್ವೀಕರಿಸುತ್ತಿರುವ ಫೋಟೋವೊಂದನ್ನು ಸಿಎಂ ಹಂಚಿಕೊಂಡಿದ್ದಾರೆ.



ಕಾಂಗ್ರೆಸ್ ನಾಯಕರಿಗೂ ಗೊತ್ತು ಅವರ ಭೇಟಿ ಎಷ್ಟು ಕಷ್ಟ ಎನ್ನುವುದು. ಹಾಗಿದ್ದರೆ ಆರೋಪಿಗೆ ಹೇಗೆ ಸಿಕ್ಕಿತು ಅವರ ಭೇಟಿ ಅವಕಾಶ ಎಂದು ಪ್ರಶ್ನಿಸಿದ್ದಾರೆ.

ಅಪರಿಚಿತ ವ್ಯಕ್ತಿ ಶವ ಪತ್ತೆ

ಮೈಸೂರು, ಡಿ.25(ಎಂಕೆ)– ಅಪರಿಚಿತ ವ್ಯಕ್ತಿಯೊಬ್ಬರ ಮೃತದೇಹ ಪತ್ತೆಯಾದ ಘಟನೆ ಉದಯಗಿರಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.

ಇಲ್ಲಿನ ರಾಜೀವ್‌ನಗರ 1ನೇ ಹಂತದ 2ನೇ ಕ್ರಾಸ್‌ನ ರಸ್ತೆ ಬದಿಯಲ್ಲಿರುವ ಗಿಡಗಳ ಪೊದೆ ಮಧ್ಯದಲ್ಲಿ ಡಿ.22ರಂದು ಬೆಳಗ್ಗೆ 10.30ಕ್ಕೆ ಸುಮಾರು 50–55 ವರ್ಷ ವಯೋಮಾನದ ಅಪರಿಚಿತ ವ್ಯಕ್ತಿಯೊಬ್ಬ ಮೃತದೇಹ ಪತ್ತೆಯಾಗಿದ್ದು, ದೇಹವನ್ನು ಕೆ.ಆರ್.ಆಸ್ಪತ್ರೆಯ ಶವಗಾರದಲ್ಲಿರಿಸಲಾಗಿದೆ. ಮೃತರ ವಾರಸುದಾರರಿದ್ದಲ್ಲಿ ಉದಯಗಿರಿ ಪೊಲೀಸ್ ಠಾಣೆ ದೂ.ಸಂ.0821–2418309 ಗೆ ಸಂಪರ್ಕಿಸುವಂತೆ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಚಿಕ್ಕಬಳ್ಳಾಪುರ ಬಳಿ ಬೈಕ್‌ಗೆ ಟಿಪ್ಪರ್ ಡಿಕ್ಕಿ: ನಾಲ್ವರು ಸಾವು

ಚಿಕ್ಕಬಳ್ಳಾಪುರ: ತಾಲೂಕಿನ ಅಜ್ಜವಾರ ಬಳಿ ಬೈಕ್‌ಗೆ ಟಿಪ್ಪರ್ ಡಿಕ್ಕಿಯಾಗಿ ನಾಲ್ವರು ಬೈಕ್ ಸವಾರರು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಅಜ್ಜವಾರ ಗ್ರಾಮದ ಒಂದೇ ಕುಟುಂಬದ ಅಣ್ಣ ನರಸಿಂಹ(22), ತಮ್ಮ ನಂದೀಶ್(20), ಅದೇ ಗ್ರಾಮದ ಮನೋಜ್(19), ಅರುಣ್ (20) ಮೃತರು.



ಈ ನಾಲ್ವರೂ ನಗರದ ಚರ್ಚ್‌ನಲ್ಲಿ ಕ್ರಿಸ್‌ಮಸ್ ಸಂಭ್ರಮ ನೋಡಿಕೊಂಡು ಒಂದೇ ಬೈಕಿನಲ್ಲಿ ಗ್ರಾಮಕ್ಕೆ ವಾಪಸ್ ಆಗುವ ವೇಳೆ ಪ್ರಮುಖ ರಸ್ತೆಯಿಂದ ದಿಢೀರ್ ತಿರುವು ಪಡೆಯಲು ಹೋದ ಸಂದರ್ಭದಲ್ಲಿ ಎದುರಿನಿಂದ ಬರುತ್ತಿದ್ದ ಟಿಪ್ಪರ್ ಡಿಕ್ಕಿಯಾಗಿ ದುರಂತ ಸಂಭವಿಸಿದೆ. ಟಿಪ್ಪರ್ ಡಿಕ್ಕಿ ಹೊಡೆದ ರಭಸಕ್ಕೆ ಬೈಕ್ ಸಂಪೂರ್ಣ ಜಖಂ ಆಗಿದೆ. ನಾಲ್ವರೂ ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ನಾಳೆ ಉಚಿತ ಬೃಹತ್ ಆರೋಗ್ಯ ತಪಾಸಣಾ ಶಿಬಿರ

ಮೈಸೂರು, ಡಿ. 25– ವಿರಾಟ್ ವಿಶ್ವ ಗ್ಲೋಬಲ್ ಫೌಂಡೇಷನ್, ನಾರಾಯಣ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಮತ್ತು ಮೈಸೂರು ಜಿಲ್ಲಾ ವಿಶ್ವಕರ್ಮ ಸಮಾಜದ ಎಲ್ಲಾ ಸಂಘ ಸಂಸ್ಥೆಗಳ ಸಂಯುಕ್ತ ಆಶ್ರಯದಲ್ಲಿ ಡಿ.27ರಂದು ಬೆಳಗ್ಗೆ 9ರಿಂದ ಸಂಜೆ 4ರವರೆಗೆ ಪುರಭವನದಲ್ಲಿ ಉಚಿತ ಬೃಹತ್ ಆರೋಗ್ಯ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ. 9448773981, 9448447016 ಸಂಪರ್ಕಿಸಬಹುದು.

ಪಿಂಚಣಿದಾರರ ದಿವಸ ಆಚರಣೆ

ಮೈಸೂರು, ಡಿ. 25–ಮೈಸೂರು ನಗರದ ಕೇಂದ್ರ ಸರ್ಕಾರಿ ಪಿಂಚಣಿದಾರರ ಅಸೋಸಿಯೇಷನ್ ವತಿಯಿಂದ ಡಿ.28ರಂದು ಬೆಳಗ್ಗೆ 10 ಗಂಟೆಗೆ ನಾರಾಯಣಶಾಸ್ತ್ರಿ ರಸ್ತೆಯಲ್ಲಿರುವ ಸದ್ವಿದ್ಯಾ ಪಾಠಶಾಲಾ ಆವರಣದಲ್ಲಿ ಪಿಂಚಣಿ ದಾರರ ದಿವಸ ಆಚರಿಸಲಾಗುವುದು ಎಂದು ಅಸೋಸಿಯೇಷನ್ ಅಧ್ಯಕ್ಷ ಪಿ.ಎಂ.ಪರಮೇಶ್ವರಯ್ಯ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಟಲ್ ಬಿಹಾರಿ ವಾಜಪೇಯಿ 101ನೇ ಜನ್ಮ ದಿನಾಚರಣೆ

ಮೈಸೂರು, ಡಿ. 25– ಅಟಲ್ ಬಿಹಾರಿ ವಾಜಪೇಯಿಯವರ 101ನೇ ಜನ್ಮದಿನದ ಅಂಗವಾಗಿ ಮೈಸೂರು ನಗರ ಎಸ್‌ಟಿ ಮೋರ್ಚಾ ವತಿಯಿಂದ ಸರಸ್ವತಿಪುರಂ ಟಿಟಿಎಲ್ ಕಾಲೇಜು ಪಕ್ಕದ ಸಾನಿಧ್ಯ ವೃದ್ಧಾಶ್ರಮದಲ್ಲಿ ಹಣ್ಣು ಹಂಪಲು ವಿತರಣೆ ಮಾಡಲಾಯಿತು.

ಈ ವೇಳೆ ನಗರ ಬಿಜೆಪಿ ಅಧ್ಯಕ್ಷ ಎಲ್ ನಾಗೇಂದ್ರ ಮಾತನಾಡಿ, ದೇಶದ ಪ್ರತಿಯೊಬ್ಬ ನಾಗರೀಕರು ಗೌರವಯುತವಾಗಿ ಕಾಣುವ ಮಾಜಿ ಪ್ರಧಾನಮಂತ್ರಿ ಅಟಲ್ ಬಿಹಾರಿ ವಾಜಪೇಯಿ ಅವರ ಅವಧಿಯಲ್ಲಿ ದೇಶ ಸಮಗ್ರ ಅಭಿವೃದ್ಧಿ ಕಂಡಿತು. ಭಾರತರತ್ನ, ಪದ್ಮ ವಿಭೂಷಣ ಅಟಲ್ ಬಿಹಾರಿ ವಾಜಪೇಯಿ ಅವರ ಹುಟ್ಟುಹಬ್ಬವನ್ನು ಉತ್ತಮ ಆಡಳಿತದ ದಿನವಾಗಿ ಪ್ರಧಾನಿ ನರೇಂದ್ರ ಮೋದಿ ಅವರು ಪ್ರಧಾನಿಯಾದ ಬಳಿಕ ಆಚರಿಸಲಾಗುತ್ತಿದೆ ಎಂದರು.

ಈ ವೇಳೆ ಎಸ್‌ಟಿ ಮೋರ್ಚಾ ಅಧ್ಯಕ್ಷ ಪಡುವಾರಹಳ್ಳಿ ಎಂ ರಾಮಕೃಷ್ಣ, ನಗರಪಾಲಿಕೆ ಮಾಜಿ ಸದಸ್ಯರಾದ ಗುರುವಿನಾಯಕ, ವೇದಾವತಿ, ನಗರ ಬಿಜೆಪಿ ಕಾರ್ಯದರ್ಶಿ ಮರಿಸ್ವಾಮಿ ನಾಯಕ, ಇ.ರಮೇಶ್ ಗೌಡ, ಪ್ರಧಾನ ಕಾರ್ಯದರ್ಶಿ ಕೃಷ್ಣನಾಯಕ, ಉಪಾಧ್ಯಕ್ಷ ಎಸ್, ತ್ಯಾಗರಾಜ್, ಚಾಮುಂಡೇಶ್ವರಿ ಅಧ್ಯಕ್ಷ ರಾಜನಾಯಕ,



ದೇವರಾಜು, ಈರೇಗೌಡ, ಚಾಮರಾಜ ಎಸ್‌ಸಿ ಮೋರ್ಚಾ ಕಾರ್ಯದರ್ಶಿ ಕೆ ಗಿರೀಶ್, ಟೆನ್ನಿಸ್ ಗೋಪಾಲ್, ವೀರನಗೆರೆ ಶ್ರೀನಿವಾಸ್, ನಾರಾಯಣ ಲೋಲಪ್ಪ, ಬಾಲಕೃಷ್ಣ, ಪೈ.ಲೋಕೇಶ್ ಜಯಸಿಂಹ, ಹಿನಕಲ್ ಚಂದ್ರ, ಉದ್ಬೂರು ಉಮೇಶ್, ರವಿ ಹಂಚ್ಯಾ,ನಿಖಿಲ್ ಸಿದ್ದರಾಜು, ಸುಣ್ಣದಕೇರಿ ನಂದೀಶ್ ನಾಯಕ, ಮಂಜುನಾಥ್, ವಿಜಿ,ಗೋಕುಲಂ ನಾಗನಾಯಕ, ರವಿ, ರಂಗಸ್ವಾಮಿ, ಚಿಕ್ಕರಂಗನಾಯಕ, ಮಂಜುನಾಥಪುರಂ ಮಹೇಶ್, ಅನಿಲ್, ಜಗದೀಶ್ ಲಕ್ಷಣ್ ಕ್ಯಾತಮಾರನಹಳ್ಳಿ ರಾಜು ಮತ್ತಿತರಿದ್ದರು.

ಮಗಳ ಮದುವೆ ಮಾಡಿಕೊಡಲು ನಿರಾಕರಿಸಿದ ಯುವತಿಯ ತಾಯಿಗೆ ಬೆಂಕಿ ಹಚ್ಚಿದ ಪ್ರೇಮಿ!

ಬೆಂಗಳೂರು, ಡಿ.25– ಮಗಳನ್ನು ಮದುವೆ ಮಾಡಿಕೊಡಲು ನಿರಾಕರಿಸಿದ ಯುವತಿಯ ತಾಯಿಯ ಮೇಲೆ ಯುವಕನೊಬ್ಬ ಪೆಟ್ರೋಲ್ ಸುರಿದು ಬೆಂಕಿ ಹಚ್ಚಿ ಕೊಲೆ ಮಾಡಲು ಯತ್ನಿಸಿರುವ ಘಟನೆ ಸಾಣೆಗುರುವನಹಳ್ಳಿಯಲ್ಲಿ ನಡೆದಿದೆ.

ತೀವ್ರ ಸುಟ್ಟ ಗಾಯಗಳಿಂದ ಅಸ್ವಸ್ಥಗೊಂಡಿರುವ ಗೀತಾ (40) ಅವರನ್ನು ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಆರೋಪಿ ಮುತ್ತು ತಲೆಮರೆಸಿಕೊಂಡಿರುವುದಾಗಿ ಬಸವೇಶ್ವರನಗರ ಠಾಣೆ ಪೊಲೀಸರು ತಿಳಿಸಿದ್ದಾರೆ.

ತಮಿಳುನಾಡಿನ ಗೀತಾ, ಮಗಳ ಜೊತೆ ಸಾಣೆಗುರುವನಹಳ್ಳಿಯಲ್ಲಿ ವಾಸವಿದ್ದು, ಮನೆಯ ಸಮೀಪವೇ ಪ್ರಾವಿಷನ್ ಸ್ಟೋರ್ ಇಟ್ಟುಕೊಂಡಿದ್ದರು. ಆರೋಪಿ ಟೀ ಅಂಗಡಿ ಇಟ್ಟುಕೊಂಡಿದ್ದ. ಮಗಳು ಹಾಗೂ ಮುತ್ತುವಿನ ಪ್ರೀತಿಯ ವಿಚಾರ ತಿಳಿದಿದ್ದ ಅವರು, ಮಗಳನ್ನು ಆತನಿಗೆ ಕೊಟ್ಟು ಮದುವೆ ಮಾಡಲು ಮಾತುಕತೆ ನಡೆಸಿದ್ದರು ಎಂದು ಹೇಳಿದ್ದಾರೆ.

ಆರು ತಿಂಗಳಿನಿಂದ ಗೀತಾ ಅವರ ಮನೆಯಲ್ಲೇ ಆರೋಪಿ ವಾಸವಾಗಿದ್ದ. ಮದ್ಯವ್ಯಸನಿಯಾಗಿದ್ದ ಕಾರಣ ಆತನ ಜತೆ ಮಗಳ ಮದುವೆ ಮಾಡದಿರಲು ಇತ್ತೀಚೆಗೆ ಅವರು ನಿರ್ಧರಿಸಿದ್ದರು. ಈ ಕಾರಣಕ್ಕೆ ಕೋಪಗೊಂಡಿದ್ದ ಮುತ್ತು, ಗೀತಾ ಅವರೊಂದಿಗೆ ಆಗಾಗ್ಗೆ ಜಗಳವಾಡುತ್ತಿದ್ದ.

ಸೋಮವಾರ ರಾತ್ರಿ ಸಹ ಜಗಳವಾಡಿದ್ದ. ಬಳಿಕ ಗೀತಾ ಅವರು ನಿದ್ದೆಗೆ ಜಾರಿದಾಗ ಆರೋಪಿ ಅವರ ಮೇಲೆ ಪೆಟ್ರೋಲ್ ಸುರಿದು ಬೆಂಕಿ ಹಚ್ಚಿ ಪರಾರಿಯಾಗಿದ್ದ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಘಟನೆ ವೇಳೆ ಮನೆಯಲ್ಲೇ ಇದ್ದ ಗೀತಾ ಅವರ ಮಗಳು ನೆರೆಹೊರೆಯವರ ಸಹಾಯದಿಂದ ಬೆಂಕಿ ನಂದಿಸಿ, ತಾಯಿಯನ್ನು ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಿಸಿದ್ದಾರೆ. ಶೇಕಡ 50ರಷ್ಟು ಸುಟ್ಟ ಗಾಯಗಳಾಗಿದ್ದು, ಅವರ ಸ್ಥಿತಿ ಗಂಭೀರವಾಗಿದೆ. ಆರೋಪಿ ವಿರುದ್ಧ ಕೊಲೆ ಯತ್ನ ಪ್ರಕರಣ ದಾಖಲಿಸಿದ್ದು, ಆತನ ಪತ್ತೆಗೆ ಶೋಧ ಮುಂದುವರಿದಿದೆ ಎಂದು ಹೇಳಿದ್ದಾರೆ. ಆರೋಪಿ ವಿರುದ್ಧ ಸೆಕ್ಷನ್ 109 ಬಿಎನ್‌ಎಸ್ ಅಡಿಯಲ್ಲಿ ಕೊಲೆಯತ್ನ ಪ್ರಕರಣ ದಾಖಲಾಗಿದೆ.

'ರಾಷ್ಟ್ರೀಯ ಪ್ರೇರಣಾ ಸ್ಥಳ' ಲೋಕಾರ್ಪಣೆ

ಭಾರತದಲ್ಲಿ ಟೆಲಿಕಾಂ ಕ್ರಾಂತಿಯ ವೇಗ ಹೆಚ್ಚಿಸಿದ ಶ್ರೇಯಸ್ಸು ಅಟಲ್‌ಜಿಗೆ ಸಲ್ಲುತ್ತದೆ: ಪ್ರಧಾನಿ ಮೋದಿ

ಲಖನೌ, ಡಿ.25– ಭಾರತ ರತ್ನ, ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರ 101ನೇ ಜನ್ಮ ದಿನವಾದ ಇಂದು ಅವರ ಜೀವನ ಮತ್ತು ಆದರ್ಶಗಳನ್ನು ಬಿಂಬಿಸುವ 'ರಾಷ್ಟ್ರೀಯ ಪ್ರೇರಣಾ ಸ್ಥಳ'ವನ್ನು ಪ್ರಧಾನಿ ನರೇಂದ್ರ ಮೋದಿ ಗುರುವಾರ ಲೋಕಾರ್ಪಣೆಗೊಳಿಸಿದರು.

ವಿಸ್ತಾರವಾದ ಸಂಕೀರ್ಣವು ವಾಜಪೇಯಿ ಅವರೊಂದಿಗೆ ಬಿಜೆಪಿಯ ಸಂಸ್ಥಾಪಕರಾದ ಶ್ಯಾಮ್‌ಪ್ರಸಾದ್ ಮುಖರ್ಜಿ ಮತ್ತು ಪಂಡಿತ್ ದೀನದಯಾಳ್ ಉಪಾಧ್ಯಾಯ ಅವರ 65 ಅಡಿ ಎತ್ತರದ ಕಂಚಿನ ಪ್ರತಿಮೆಗಳನ್ನು ಒಳಗೊಂಡಿದೆ.

ಅತ್ಯಾಧುನಿಕ ವಸ್ತುಸಂಗ್ರಹಾಲಯವನ್ನು ಕಮಲದ ಆಕಾರದ ರಚನೆಯಲ್ಲಿ ವಿನ್ಯಾಸಗೊಳಿಸಲಾಗಿದ್ದು, 98,000 ಚದರ ಅಡಿ ಪ್ರದೇಶದಲ್ಲಿದೆ. ದೇಶ–ನಿರ್ಮಾಣಕ್ಕೆ ಈ ನಾಯಕರ ಕೊಡುಗೆಗಳನ್ನು ತಿಳಿಯಲು ಪ್ರವಾಸಿಗರಿಗೆ ಅವಕಾಶ ನೀಡುತ್ತದೆ.

ರಾಷ್ಟ್ರೀಯ ಪ್ರೇರಣಾ ಸ್ಥಳ ಉದ್ಘಾಟನೆ ನಂತರ ಇತರ ನಾಯಕರೊಂದಿಗೆ ಸಂಕೀರ್ಣದೊಳಗೆ ಇರುವ ವಸ್ತುಸಂಗ್ರಹಾಲಯಕ್ಕೆ ಭೇಟಿ ನೀಡಿದ ಪ್ರಧಾನಿ ಮೋದಿ, ವಾಜಪೇಯಿ, ಶ್ಯಾಮ್‌ಪ್ರಸಾದ್ ಮುಖರ್ಜಿ ಮತ್ತು ಪಂಡಿತ್ ದೀನದಯಾಳ್ ಉಪಾಧ್ಯಾಯ ಅವರ ಜೀವನ ಮತ್ತು ಕೊಡುಗೆಗಳನ್ನು ಬಿಂಬಿಸುವ ಪ್ರದರ್ಶನವನ್ನು ವೀಕ್ಷಿಸಿದರು.

230 ಕೋಟಿ ರೂ.ವೆಚ್ಚದಲ್ಲಿ ನಿರ್ಮಾಣ: ರಾಷ್ಟ್ರೀಯ ಪ್ರೇರಣಾ ಸ್ಥಳವನ್ನು 230 ಕೋಟಿ ರೂ. ಅಂದಾಜು ವೆಚ್ಚದಲ್ಲಿ 65 ಎಕರೆ ಪ್ರದೇಶದಲ್ಲಿ ನಿರ್ಮಾಣ ಮಾಡಲಾಗಿದೆ. ಈ ಸ್ಮಾರಕ ರಾಷ್ಟ್ರೀಯ ಪ್ರಾಮುಖ್ಯತೆಯ ಸ್ಫೂರ್ತಿದಾಯಕ ಸಂಕೀರ್ಣವಾಗಿದ್ದು, ಪ್ರಸ್ತುತ ಮತ್ತು ಭವಿಷ್ಯದ ಪೀಳಿಗೆಗೆ ಪ್ರೇರಣೆಯ ಸ್ಥಳ ಎನ್ನಲಾಗಿದೆ. ಇದು ಭಾರತದ ರಾಜಕೀಯ ಚಿಂತನೆ ಮತ್ತು ಸಾರ್ವಜನಿಕ ಜೀವನವನ್ನು ರೂಪಿಸುವಲ್ಲಿ ವಾಜಪೇಯಿ, ಮುಖರ್ಜಿ ಮತ್ತು ಉಪಾಧ್ಯಾಯರ ಪ್ರಮುಖ



ರಾಷ್ಟ್ರೀಯ ಪ್ರೇರಣಾ ಸ್ಥಳವನ್ನು ಪ್ರಧಾನಿ ನರೇಂದ್ರ ಮೋದಿ ಉದ್ಘಾಟಿಸಿದರು

ಪಾತ್ರವನ್ನು ಪ್ರತಿಬಿಂಬಿಸುತ್ತದೆ.

ಪ್ರತಿಮೆಗಳು ರಾಷ್ಟ್ರಕ್ಕೆ ಸ್ಫೂರ್ತಿದಾಯಕ: ನಂತರ ಜನತೆಯನ್ನುದ್ದೇಶಿಸಿ ಮಾತನಾಡಿದ ಪ್ರಧಾನಿ ನರೇಂದ್ರ ಮೋದಿ, ರಾಷ್ಟ್ರೀಯ ಪ್ರೇರಣಾ ಸ್ಥಳ ಭಾರತವನ್ನು ಸ್ವಾಭಿಮಾನ, ಏಕತೆ ಮತ್ತು ಸೇವೆಯ ಹಾದಿಯಲ್ಲಿ ಮುನ್ನಡೆಸುವ ದೃಷ್ಟಿಯನ್ನು ಪ್ರತಿನಿಧಿಸುತ್ತದೆ. ಡಾ ಶ್ಯಾಮ್‌ಪ್ರಸಾದ್ ಮುಖರ್ಜಿ, ಪಂಡಿತ್ ದೀನದಯಾಳ್ ಉಪಾಧ್ಯಾಯ ಮತ್ತು ಅಟಲ್ ಬಿಹಾರಿ ಅವರ ಅತ್ಯುನ್ನತ ಪ್ರತಿಮೆಗಳು ರಾಷ್ಟ್ರಕ್ಕೆ ಸ್ಫೂರ್ತಿದಾಯಕವಾಗಿವೆ. ನಮ್ಮ ಪ್ರತಿಯೊಂದು ಹೆಜ್ಜೆ, ಪ್ರತಿ ದಾಪುಗಾಲು, ಪ್ರತಿ ಪ್ರಯತ್ನವೂ ರಾಷ್ಟ್ರ ನಿರ್ಮಾಣಕ್ಕೆ ಸಮರ್ಪಿತವಾಗಿರಬೇಕು ಎಂಬ ಸಂದೇಶವನ್ನು ಸ್ಫೂರ್ತಿ ತಾಣವು ನಮಗೆ ನೀಡುತ್ತದೆ. ಈ ಆಧುನಿಕ ಸ್ಫೂರ್ತಿಯ ತಾಣಕ್ಕೆ ನಾನು ಲಕ್ನೋ, ಉತ್ತರ ಪ್ರದೇಶ ಮತ್ತು ಇಡೀ ದೇಶವನ್ನು ಅಭಿನಂದಿಸುತ್ತೇನೆ ಎಂದರು.

ಈ ಪ್ರೇರಣಾ ಸ್ಥಳವನ್ನು ನಿರ್ಮಿಸಿರುವ 30 ಎಕರೆಗೂ ಹೆಚ್ಚಿನ ಜಾಗ ಹಲವು ದಶಕಗಳಿಂದ ಕಸದಿಂದ ತುಂಬಿತ್ತು. ಕಳೆದ ಮೂರು ವರ್ಷಗಳಲ್ಲಿ ಇದನ್ನು ಸಂಪೂರ್ಣವಾಗಿ ತೆರವುಗೊಳಿಸಲಾಗಿದೆ. ಈ ಯೋಜನೆಗೆ ಸಂಬಂಧಿಸಿದ ಎಲ್ಲಾ ಕಾರ್ಮಿಕರು, ಕುಶಲಕರ್ಮಿಗಳಿಗೆ ಅಭಿನಂದನೆ ಸಲ್ಲಿಸುತ್ತೇನೆ. ಭಾರತದಲ್ಲಿ ಎರಡು ಸಂವಿಧಾನಗಳು, ಎರಡು ಧ್ವಜಗಳು ಮತ್ತು ಇಬ್ಬರು ಮುಖ್ಯಸ್ಥರನ್ನು ಡಾ.ಶ್ಯಾಮ್‌ಪ್ರಸಾದ್ ಮುಖರ್ಜಿ ತಿರಸ್ಕರಿಸಿದ್ದರು. ಸ್ವಾತಂತ್ರ ನಂತರವೂ ಜಮ್ಮು ಮತ್ತು ಕಾಶ್ಮೀರದಲ್ಲಿ ಈ ವ್ಯವಸ್ಥೆ ಇದ್ದದ್ದು, ಭಾರತದ ಸಮಗ್ರತೆಗೆ ದೊಡ್ಡ ಸವಾಲಾಗಿತ್ತು. ಬಿಜೆಪಿ ಸರ್ಕಾರ 370ನೇ ವಿಧಿಯ ಗೋಡೆಯನ್ನು ಕಿತ್ತೊಗೆದಿದೆ ಎಂದರು.

ಭಾರತದಲ್ಲಿ ತಯಾರಿಸಿದ ವಸ್ತುಗಳು ಪ್ರಪಂಚದ ಮೂಲೆ ಮೂಲೆಗಳನ್ನು ತಲುಪುತ್ತಿವೆ. ಉತ್ತರ ಪ್ರದೇಶದಲ್ಲಿಯೂ ಇಂತಹ ಒಂದು ಜಿಲ್ಲೆ, ಒಂದು ಉತ್ಪನ್ನ ಅಭಿಯಾನ ನಡೆಯುತ್ತಿದೆ. ಸಣ್ಣ ಕೈಗಾರಿಕೆಗಳು ಮತ್ತು ಸಣ್ಣ ಘಟಕಗಳ ಸಾಮರ್ಥ್ಯ ಹೆಚ್ಚುತ್ತಿದೆ. ಉತ್ತರ ಪ್ರದೇಶದಲ್ಲಿ ಬೃಹತ್ ರಕ್ಷಣಾ ಕಾರಿಡಾರ್ ನಿರ್ಮಾಣವಾಗುತ್ತಿದೆ. ಆಪರೇಷನ್ ಸಿಂಧೂರ್ ಸಮಯದಲ್ಲಿ ಜಗತ್ತು ಕಂಡ ಪರಾಕ್ರಮದ ಬ್ರಹ್ಮೋಸ್ ಕ್ಷಿಪಣಿಯನ್ನು ಈಗ ಲಕ್ನೋದಲ್ಲಿ ತಯಾರಿಸಲಾಗುತ್ತಿದೆ. ಉತ್ತರ ಪ್ರದೇಶದ ರಕ್ಷಣಾ ಕಾರಿಡಾರ್ ರಕ್ಷಣಾ ಉತ್ಪಾದನೆಗೆ ಜಾಗತಿಕವಾಗಿ ಹೆಸರುವಾಸಿಯಾಗುವ ದಿನ ದೂರವಿಲ್ಲ. ದಶಕಗಳ ಹಿಂದೆ ಪಂಡಿತ್ ದೀನದಯಾಳ್ ಉಪಾಧ್ಯಾಯ ಅವರು ಅಂತ್ಯೋದಯ ಕನಸು ಕಂಡಿದ್ದರು. ಕೊನೆಯ ಸಾಲಿನಲ್ಲಿ ನಿಂತಿರುವ ವ್ಯಕ್ತಿಯ ಮುಖದ ನಗುವಿನಿಂದಲೇ ಭಾರತದ ಪ್ರಗತಿ ಇದೆ ಎನ್ನುತ್ತಿದ್ದರು. ದೀನದಯಾಳ್‌ಜಿಯವರ ಕನಸನ್ನು ಸಂಕಲ್ಪವನ್ನಾಗಿಸಿಕೊಂಡಿರುವುದಾಗಿ ತಿಳಿಸಿದರು.

ಇಂದು ಡಿಜಿಟಲ್ ಗುರುತಿನ ಬಗ್ಗೆ ತುಂಬಾ ಚರ್ಚೆ ನಡೆಯುತ್ತಿದೆ. ಇದಕ್ಕೆ ಬುನಾದಿ ಹಾಕಿದ್ದು ಅಟಲ್ ಜಿ ಅವರ ಸರ್ಕಾರ. ಅವರ ಕಾಲದಲ್ಲಿ ಆರಂಭವಾದ ವಿಶೇಷ ಕಾರ್ಡ್‌ನ ಕೆಲಸ ಈಗ ಆಧಾರ್ ಎಂದು ವಿಶ್ವಪ್ರಸಿದ್ಧವಾಗಿದೆ. ಭಾರತದಲ್ಲಿ ಟೆಲಿಕಾಂ ಕ್ರಾಂತಿಯ ವೇಗವನ್ನು ಹೆಚ್ಚಿಸಿದ ಶ್ರೇಯಸ್ಸು ಅಟಲ್ ಜಿ ಅವರಿಗೆ ಸಲ್ಲುತ್ತದೆ. ಅವರ ಸರ್ಕಾರ ರೂಪಿಸಿದ ಟೆಲಿಕಾಂ ನೀತಿಯು ಪ್ರತಿ ಮನೆಗೆ ಫೋನ್ ಮತ್ತು ಇಂಟರ್ನೆಟ್ ಅನ್ನು ಸುಲಭವಾಗಿ ತರಲು ಸಾಧ್ಯವಾಯಿತು. ಇಂದು ಭಾರತವು ವಿಶ್ವದಲ್ಲಿ ಅತಿ ಹೆಚ್ಚು ಮೊಬೈಲ್ ಮತ್ತು ಇಂಟರ್ನೆಟ್ ಬಳಕೆದಾರರನ್ನು ಹೊಂದಿರುವ ದೇಶಗಳಲ್ಲಿ ಒಂದಾಗಿದೆ ಎಂದು ತಿಳಿಸಿದರು.

ಸರ್ದಾರ್ ವಲ್ಲಭಭಾಯಿ ಪಟೇಲ್ ಅವರು ನಮ್ಮ ದೇಶವನ್ನು ಒಗ್ಗೂಡಿಸಿದರು, ಆದರೆ ಸ್ವಾತಂತ್ರ್ಯದ ನಂತರ ಅವರ ಕೆಲಸ ಮತ್ತು ಅವರ ಘನತೆಯನ್ನು ಕುಗ್ಗಿಸಲು ಪ್ರಯತ್ನಿಸಲಾಯಿತು. ಸರ್ದಾರ್ ಪಟೇಲ್ ಅವರಿಗೆ ಸಲ್ಲಬೇಕಾದ ಗೌರವವನ್ನು ಬಿಜೆಪಿ ನೀಡಿದೆ. ಬಿಜೆಪಿ ಸರ್ದಾರ್ ಪಟೇಲ್ ಅವರನ್ನು ವಿಶ್ವದ ಅತಿ ಎತ್ತರದ ಪ್ರತಿಮೆಯನ್ನಾಗಿ ಮಾಡಿದೆ ಎಂದು ಪ್ರಧಾನಿ ಮೋದಿ ಹೇಳಿದರು.

ಅರಣ್ಯ ಇಲಾಖೆ ಸಿಬ್ಬಂದಿಗೆ 1 ಕೋಟಿ ರೂ.; ಹೊರಗುತ್ತಿಗೆ ಮುಂಚೂಣಿ ಸಿಬ್ಬಂದಿಗೆ 20 ಲಕ್ಷ ರೂ. ಅಪಘಾತ ವಿಮೆ

ಅರಣ್ಯ ಸಚಿವ ಈಶ್ವರ ಖಂಡ್ರೆ ಪ್ರಕಟ



ಬೆಂಗಳೂರು, ಡಿ.25– ಅರಣ್ಯ ಇಲಾಖೆಯ ಖಾಯಂ ಅಧಿಕಾರಿ, ಸಿಬ್ಬಂದಿಗೆ 1 ಕೋಟಿ ರೂ. ಅಪಘಾತ (ಮರಣ)ವಿಮೆ ಹಾಗೂ ಹೊರಗುತ್ತಿಗೆ ಸಿಬ್ಬಂದಿಗೆ 20 ಲಕ್ಷ ರೂ. ವಿಮಾ ಸೌಲಭ್ಯ ಕಲ್ಪಿಸಲು ಬ್ಯಾಂಕ್ ಆಫ್ ಬರೋಡಾದೊಂದಿಗೆ ಒಪ್ಪಂದ ಮಾಡಿಕೊಳ್ಳಲಾಗಿದೆ ಎಂದು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಬಿ.ಖಂಡ್ರೆ ಪ್ರಕಟಿಸಿದ್ದಾರೆ.

ವನ ಮತ್ತು ವನ್ಯಜೀವಿಗಳ ರಕ್ಷಣೆಗಾಗಿ ಮುಂಚೂಣಿ ಸಿಬ್ಬಂದಿ, ಹಸಿರು ಸೈನಿಕರು ಅಪಾಯ ಎದುರಿಸುತ್ತಾ ಹಗಲಿರುಳು ಶ್ರಮಿಸುತ್ತಿದ್ದು, ಇಲಾಖೆ ಕೆಲವು ಶೌರ್ಯಶಾಲಿ ಹಸಿರು ಯೋಧರನ್ನು ಕಳೆದುಕೊಂಡಿದೆ. ಇವರೆಲ್ಲರಿಗೂ ಸಾಮಾಜಿಕ ಮತ್ತು ಆರ್ಥಿಕ ಭದ್ರತೆ ಒದಗಿಸಲು ಈ ತಿಳಿವಳಿಕೆ ಒಪ್ಪಂದ ಮಾಡಿಕೊಳ್ಳಲಾಗಿದೆ ಎಂದು ವಿವರಿಸಿದ್ದಾರೆ.

ಬ್ಯಾಂಕ್ ಆಫ್ ಬರೋಡಾದಲ್ಲಿ ಇಲಾಖೆಯ ನೌಕರರು ಪಿಂಚಣಿ ಖಾತೆಯನ್ನು ಮುಂದುವರಿಸಿದರೆ, ಈ ವೈಯಕ್ತಿಕ ಅಪಘಾತ ವಿಮಾ ರಕ್ಷಣೆಯ ಸೌಲಭ್ಯ 70 ವರ್ಷ ವಯಸ್ಸಿನವರೆಗೆ ಮುಂದುವರಿಯುತ್ತದೆ. ಇದಲ್ಲದೆ, ಖಾಯಂ ಉದ್ಯೋಗಿಗಳಿಗೆ ರೂ.10.00 ಲಕ್ಷಗಳ ಜೀವ ವಿಮಾ ರಕ್ಷಣೆಯನ್ನು ಸಹ ಬ್ಯಾಂಕ್ ಒದಗಿಸುತ್ತದೆ ಎಂದು ತಿಳಿಸಿದ್ದಾರೆ.

ಕರ್ನಾಟಕ ಅರಣ್ಯ ಇಲಾಖೆಯ ನೌಕರರು ಮತ್ತು ಅವರ ಕುಟುಂಬಗಳ ಹಿತದೃಷ್ಟಿಯಿಂದ ಕರ್ನಾಟಕ ಅರಣ್ಯ ಇಲಾಖೆಯು ಬ್ಯಾಂಕ್ ಆಫ್ ಬರೋಡಾದೊಂದಿಗೆ ತಿಳುವಳಿಕೆ ಒಪ್ಪಂದ ಮಾಡಿಕೊಂಡಿದ್ದು, ಹಲವು ವಿಶೇಷ ಸವಲತ್ತುಗಳೂ ಲಭಿಸಲಿವೆ. ಈ ಬಗ್ಗೆ ಎಲ್ಲರಿಗೂ ಅರಿವು ಮೂಡಿಸುವಂತೆ ಮತ್ತು ಬಿಓಬಿಯಲ್ಲಿ ಸಂಬಳ ಖಾತೆ ತೆರೆಯಲು ಸೂಚಿಸಲಾಗಿದೆ ಎಂದು ಈಶ್ವರ ಖಂಡ್ರೆ ತಿಳಿಸಿದ್ದಾರೆ.

ಜನರ ಜೀವ ಪರಮೋಚ್ಚ: ಜನರ ಜೀವದ ಸುರಕ್ಷತೆ ಅತ್ಯಂತ ಪರಮೋಚ್ಚವಾದದ್ದು, ಅದೇ ವೇಳೆ ವನ್ಯಜೀವಿಗಳ ರಕ್ಷಣೆಯೂ ಅಷ್ಟೇ ಮುಖ್ಯ ಎಂಬುದನ್ನು ಗಮನದಲ್ಲಿಟ್ಟುಕೊಂಡು ಕಾರ್ಯಾಚರಣೆ ನಡೆಸಬೇಕು. ಸಿಬ್ಬಂದಿಯ ಸುರಕ್ಷತೆಗೆ ಎಲ್ಲಾ ಅಗತ್ಯ ಮುನ್ನೆಚ್ಚರಿಕಾ ಕ್ರಮ ಕೈಗೊಳ್ಳಬೇಕು ಜೊತೆಗೆ ಜನರು ಯಾರೂ ಕಾರ್ಯಾಚರಣೆ ಸ್ಥಳಕ್ಕೆ ಬಾರದಂತೆ ಸೆಕ್ಷನ್ 144 ಅನ್ನು ಕಟ್ಟುನಿಟ್ಟಾಗಿ ಜಾರಿ ಮಾಡಬೇಕು ಎಂದು ಸೂಚಿಸಿದರು.

ಇ–ಗಸ್ತು ಹೆಚ್ಚಿಸಬೇಕು. ಎಲ್ಲ ಅರಣ್ಯ ಗಸ್ತು ಸಿಬ್ಬಂದಿ ಹಾಗೂ ಅಧಿಕಾರಿಗಳ ಮೊಬೈಲ್‌ನಲ್ಲಿ ಇ–ಆಪ್ ಅಳವಡಿಸಿ, ಗಸ್ತಿನ ಮೇಲೆ ಕೇಂದ್ರ ಕಚೇರಿಯಿಂದ ನಿಗಾ ಇಡಬೇಕು. ಗಸ್ತಿನಲ್ಲಿ ಯಾವುದೇ ಲೋಪ ಆಗದಂತೆ ಪೂರ್ಣ ಪ್ರಮಾಣದಲ್ಲಿ ಎಚ್ಚರಿಕೆ ವಹಿಸಬೇಕು ಹಾಗೂ ಕಮಾಂಡ್ ಕೇಂದ್ರಗಳನ್ನು ವಿಳಂಬವಿಲ್ಲದೆ ಎಲ್ಲೆಡೆ ಕಾರ್ಯಾರಂಭ ಮಾಡಬೇಕು ಎಂದು ಹಿರಿಯ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ಬಾಂಗ್ಲಾದೇಶದಲ್ಲಿ ಮತ್ತೊಬ್ಬ ಹಿಂದೂ ಯುವಕನ ಹತ್ಯೆ

ಢಾಕಾ: ಬಾಂಗ್ಲಾದೇಶದಲ್ಲಿ ಹಿಂದೂಗಳ ಮೇಲಿನ ದಾಳಿಗಳು ಮುಂದುವರೆದಿವೆ. ದೀಪು ಚಂದ್ರ ದಾಸ್ ಹತ್ಯೆಯಾದ ಕೆಲವೇ ದಿನಗಳಲ್ಲಿ ಮತ್ತೊಬ್ಬ ಹಿಂದೂ ಯುವಕನ ಮೇಲೆ ಹಲ್ಲೆ ನಡೆಸಿ ಪ್ರಾಣ ತೆಗೆಯಲಾಗಿದೆ. ಅಮೃತ್ ಮಂಡಲ್ ಅಲಿಯಾಸ್ ಸಾಮ್ರಾಟ್ (29) ಎಂಬುವರ ಮೇಲೆ ಗುಂಪೊಂದು ಹಲ್ಲೆ ಮಾಡಿ ಜೀವ ತೆಗೆದಿದೆ. ರಾಜ್‌ಬರಿ ಜಿಲ್ಲೆಯ ಪಂಗ್ಶಾ ಉಪಜಿಲ್ಲಾದ ಹೊಸೈಂದಂಗಾ ಹಳೆಯ ಮಾರು ಕಟ್ಟೆಯಲ್ಲಿ ಬುಧವಾರ ರಾತ್ರಿ 11 ಗಂಟೆ ಸುಮಾರಿಗೆ ಈ ಘಟನೆ ನಡೆದಿದೆ ಎನ್ನಲಾಗಿದೆ.

ಮೇಕೆದಾಟು ಯೋಜನೆ ಆರಂಭಿಸಲು ಕೇಂದ್ರಕ್ಕೆ ಶೀಘ್ರವೇ ದಾಖಲೆ ಸಲ್ಲಿಕೆ

ಡಿ.ಕೆ.ಶಿವಕುಮಾರ್ ಮಾಹಿತಿ



ಬೆಂಗಳೂರು, ಡಿ.25– ಕಾವೇರಿ ನದಿಗೆ ಅಡ್ಡಲಾಗಿ ಮೇಕೆದಾಟು ಯೋಜನೆ ವಿರುದ್ಧ ತಮಿಳುನಾಡು ಸಲ್ಲಿಸಿದ್ದ ಅರ್ಜಿಯನ್ನು ಸುಪ್ರೀಂಕೋರ್ಟ್ ವಜಾಗೊಳಿಸಿದ ಹಿನ್ನೆಲೆಯಲ್ಲಿ, ಯೋಜನೆಗೆ ಸಂಬಂಧಿಸಿದ ಎಲ್ಲಾ ದಾಖಲೆಗಳನ್ನು ಎರಡು ತಿಂಗಳಲ್ಲಿ ಕೇಂದ್ರ ಸರ್ಕಾರಕ್ಕೆ ಸಲ್ಲಿಸಲು ಕರ್ನಾಟಕ ಸರ್ಕಾರ ಸಿದ್ಧತೆ ನಡೆಸಿದೆ.

ಕೇಂದ್ರ ಜಲಶಕ್ತಿ ಸಚಿವಾಲಯದ ನದಿ ಜೋಡಣೆ ಸಭೆಯಲ್ಲಿ ಪಾಲ್ಗೊಂಡಿದ್ದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಈ ವಿಷಯವನ್ನು ತಿಳಿಸಿದ್ದು, ಪರಿಷ್ಕೃತ ಡಿಪಿಆರ್ ಅನ್ನು ಕೇಂದ್ರಕ್ಕೆ ಸಲ್ಲಿಸುವುದಾಗಿ ಹೇಳಿದ್ದಾರೆ. ರಾಮನಗರದಲ್ಲಿ ಯೋಜನೆ ಅನುಷ್ಠಾನಕ್ಕೆ ಕಚೇರಿ ಆರಂಭವಾಗಲಿದ್ದು, ಅರಣ್ಯ ಭೂಮಿ ಮತ್ತು ಅದಕ್ಕೆ ಪರ್ಯಾಯ ಭೂಮಿ ಗುರುತಿಸುವ ಕಾರ್ಯ ನಡೆಯುತ್ತಿದೆ. ಯೋಜನೆಗೆ ಸಂಬಂಧಿಸಿದ ತಾಂತ್ರಿಕ ನಿರ್ಧಾರಗಳು ಕೇಂದ್ರ ಜಲ ಆಯೋಗ ವ್ಯಾಪ್ತಿಗೆ ಒಳಪಡಲಿದ್ದು, ಕರ್ನಾಟಕದ ಪ್ರಸ್ತಾವ ಸಲ್ಲಿಕೆಯ ನಂತರ ಕೇಂದ್ರ ಜಲ ಆಯೋಗ ಮುಂದಿನ ಪ್ರಕ್ರಿಯೆ ನಡೆಸಲಿದೆ.

ಜಿಲ್ಲಾಧಿಕಾರಿಗೆ ಯೋಜನೆಯ ಜವಾಬ್ದಾರಿ: ಮಂಡ್ಯ ಅಥವಾ ಬೆಂಗಳೂರು ದಕ್ಷಿಣ ಜಿಲ್ಲೆಯ ಜಿಲ್ಲಾಧಿಕಾರಿಗೆ ಯೋಜನೆಯ ಜವಾಬ್ದಾರಿ ನೀಡಲಾಗುವುದು ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ತಿಳಿಸಿದರು. ರಾಮನಗರದಲ್ಲಿ ಯೋಜನೆ ಅನುಷ್ಠಾನಕ್ಕೆ ಕಚೇರಿ ಆರಂಭಿಸಲಾಗುತ್ತಿದೆ. ಯೋಜನೆಗೆ ಅಗತ್ಯವಿರುವ ಅರಣ್ಯ ಭೂಮಿ ಮತ್ತು ಅದಕ್ಕೆ ಪರ್ಯಾಯವಾಗಿ ನೀಡಬೇಕಾದ ಭೂಮಿ ಕುರಿತು ತೀರ್ಮಾನವಾಗಬೇಕಿದೆ. ಈಗಾಗಲೇ ಪರ್ಯಾಯ ಭೂಮಿ ಗುರುತಿಸಲಾಗಿದ್ದು, ಎಲ್ಲವನ್ನೂ ಪೂರ್ಣಗೊಳಿಸಿ ಹಂತ ಹಂತವಾಗಿ ಮುಂದುವರಿಯಲಾಗುವುದು ಎಂದು ಅವರು ವಿವರಿಸಿದರು.